ಪುಸ್ತಕ ಪ್ರಪಂಚ

ಅಕ್ಟೋಬರ್ - ೧೯೯೮



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೯ ಸಂಚಿಕೆ ೧

ಅಕ್ಟೋಬರ್ ೧೯೯೮

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Educ
Council, Mysore-6. Price: Rupees Six

ಬಿಡಿಪ್ರತಿ: ರೂ. ೬

ವಾರ್ಷಿಕ ಚಂದಾ: ರೂ ೬೦

ಆಜೀವ ಸದಸ್ಯತ್ವ ಚಂದಾ:

ವ್ಯಕ್ತಿಗೆ: ರೂ. ೪೦೦

ಸಂಸ್ಥೆಗೆ: ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು–೫೭೦ ೦೦೬

೧. ಗಾಂಧಿಸೂತ್ರ ದೇಶೋದ್ಧಾರದ ಮಂತ್ರ

ಒಂದೊಂದು ದೇಶಕ್ಕೂ ಒಂದೊಂದು ಜಾಯಮಾನವಿದೆ. ಒಂದು ದೇಶದ ಜಾಯಮಾನ ವೈಜ್ಞಾನಿಕ ಪ್ರಜ್ಞೆಯಾದರೆ, ಮತ್ತೊಂದರದು ವಾಣಿಜ್ಯವ್ಯವಹಾರ, ಮಗುದೊಂದರದು ತಾಂತ್ರಿಕವಿದ್ಯೆ. ಭರತ ಖಂಡದ ಜಾಯಮಾನ ಅದರ ಅಧ್ಯಾತ್ಮ ಪ್ರತಿಭೆಯಲ್ಲಿದೆ. ಪ್ರತಿಯೊಂದು ದೇಶವೂ ತಂತನ್ನ ಜಾಯಮಾನಕ್ಕನುಗುಣವಾಗಿಯೇ ತನ್ನ ಜೀವನವನ್ನು ರೂಪಿಸಿಕೊಳ್ಳಬೇಕು. ಅದನ್ನು ಮರೆತದ್ದಾದರೆ ಪ್ರಗತಿಗೆ ಬದಲಾಗಿ ಅವನತಿ ಉಂಟಾಗುತ್ತದೆ. ಹೀಗೆ ಹೇಳಿದವರು ಸ್ವಾಮಿ ವಿವೇಕಾನಂದರು. ಪ್ರಾಯಶಃ ಅವರ ಉಪದೇಶ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯ ಮೇಲೆ ಪ್ರಭಾವ ಬೀರಿರಬೇಕೆಂದು ತೋರುತ್ತದೆ. ಆದ್ದರಿಂದಲೇ ಅವರು ಸ್ವಾತಂತ್ರ್ಯ ಸಂಪಾದನೆಗೆ ಅಧ್ಯಾತ್ಮಮಾರ್ಗವನ್ನೇ ಹಿಡಿಯುತ್ತಾರೆ. ರಾಷ್ಟ್ರ ಸ್ವಾತಂತ್ರ್ಯದಷ್ಟೇ ಮಾನವ ಸ್ವಾತಂತ್ರ್ಯ ಹಾಗೂ ಆತ್ಮಸ್ವಾತಂತ್ರ್ಯವೂ ಮುಖ್ಯವಾಗಿತ್ತು. ಭಾರತೀಯ ಸ್ವಾತಂತ್ರ್ಯದಲ್ಲವರು ಇಡೀ ಮನುಕುಲದ ಸ್ವಾತಂತ್ರ್ಯವನ್ನು ಕಾಣುತ್ತಾರೆ. ರಾಷ್ಟ್ರದ ಜಾಯಮಾನವನ್ನು ಮರೆತು, ಬೇರೆ ದಾರಿ ಹಿಡಿದಿದ್ದರೆ ಸ್ವಾತಂತ್ರ್ಯ ಇಷ್ಟು ಬೇಗ ದೊರೆಯುತ್ತಿರಲಿಲ್ಲವೆಂಬುದಂತು ನಿಜ. ಅಣುಬಾಂಬಿಗೆ ಅಧ್ಯಾತ್ಮವೊಂದೆ ಪರ್ಯಾಯವೆಂದು ಐನ್‌ಸ್ಟೀನ್ ಮೊದಲಾದ ವಿಜ್ಞಾನಿಗಳು ಒಪ್ಪಿಕೊಳ್ಳುತ್ತಾರೆ.

ನಾನು ಜಗತ್ತಿನ ಹತ್ತಿಪ್ಪತ್ತು ರಾಷ್ಟ್ರಗಳಲ್ಲಿ ಪ್ರವಾಸ ಮಾಡಿದ್ದೇನೆ. ಗಾಂಧಿ ಕತೆ ಕೇಳಿದವರು, ಗಾಂಧಿ ಸಿನಿಮಾ ನೋಡಿದವರು ಅಂಥ ವ್ಯಕ್ತಿ ಬದುಕಿದ್ದರೆ ಎಂದು ಪ್ರಶ್ನಿಸುತ್ತಾರೆ. ನಾನೆ ನೋಡಿದ್ದೇನೆಂದು ಹೇಳಿದಾಗ ಅವರು ಆಶ್ಚರ್ಯಚಕಿತರಾಗುತ್ತಾರೆ. ಅವರನ್ನು ನೋಡಿದ ನೀವು ಪುಣ್ಯವಂತರೆನ್ನುತ್ತಾರೆ; ಅವರನ್ನು ನೋಡಿದ ಪುಣ್ಯವಂತರನ್ನು ನೋಡುವ ಅವಕಾಶವಾದರೂ ಒದಗಿತಲ್ಲ ಎಂದು ಸಂತೋಷ ಸೂಚಿಸುತ್ತಾರೆ. ಇತ್ತೀಚೆಗೆ ಸ್ವಿಟ್ಜರ್ಲೆಂಡಿಗೆ ಹೋಗಿದ್ದಾಗ ಅಲ್ಲಿಯ ಪ್ರಸಿದ್ಧ ವೈದ್ಯೆಯೊಬ್ಬರು ಹೇಳಿದ್ದುಂಟು: 'ಮುಂದಿನ ಜನ್ಮವಿರುವುದಾದರೆ ಗಾಂಧಿ, ವಿವೇಕಾನಂದ, ಸಾಯಿಬಾಬರ ಇಂಡಿಯಾದಲ್ಲಿ ನಾನು ಹುಟ್ಟಬೇಕು. ಅದೇ ನನ್ನ ಆಶೆ' ಎಂದು.

ಆದರೆ ಇಂಡಿಯಾ ದೇಶದಲ್ಲಿಯೇ ಗಾಂಧೀಜಿಗೆ ಗೌರವವಿಲ್ಲವೇನೊ ಎನಿಸುತ್ತದೆ. ಬೌದ್ಧ ಧರ್ಮವನ್ನು ಗಡೀಪಾರು ಮಾಡಿದಂತೆ ಗಾಂಧಿ ಸಿದ್ಧಾಂತವನ್ನು ಸಹ ದೇಶದಿಂದಾಚೆಗೆ ದಾಟಿಸುವ ಸನ್ನಾಹ ಸಂಘಟನೆಗೊಳ್ಳುತ್ತಿರುವಂತೆ ಕಾಣುತ್ತದೆ. ಕ್ಲಬ್ಬಿನಲ್ಲಿ ಕುಡಿದು ಅಮಲೇರಿ ಮನೆಗೆ ಹೊರಿಸಿಕೊಂಡು ಹೋಗುವ ಅಧಿಕಾರಿ ಸಚಿವ ಪ್ರಾಧ್ಯಾಪಕ ಕುಲಪತಿಗಳಿರುವಾಗ, ಹೊನ್ನು ಹೆಣ್ಣು ಹೆಂಡಗಳನ್ನು ಆರಾಧಿಸುವ ನಾಯಕರು

ಹೇರಳವಾಗಿರುವಾಗ, ದೇಶದಲ್ಲಿ ಭ್ರಷ್ಟಾಚಾರ ತುಂಬಿತುಳುಕಾಡುತ್ತಿರುವ
ಗಾಂಧೀಜಿಯ ಜೀವನ ಸಾಧನೆ ಸಿದ್ಧಿಗಳನ್ನು ಅರ್ಥಮಾಡಿಕೊಳ್ಳದೆ, ಸ್ವಾತಂತ್ರ್ಯವನ
ತಂದು ಕೊಟ್ಟ ಹುತಾತ್ಮರೆಂಬುದನ್ನು ಮರೆತು ತೆಗಳುವ ದ್ರೋಹಿಗಳಿರುವಾಗ ಗಾಂ
ಯಾಗಲಿ, ಗಾಂಧಿ ತತ್ತ್ವವಾಗಲಿ ಈ ದೇಶದಲ್ಲುಳಿಯುವುದುಂಟೆ? ರಷ್ಯಾ ಜರ್ಮ
ಇಂಗ್ಲೆಂಡ್‌ಗಳಿಗೆಂತು ಟಾಲ್‌ಸ್ಟಾಯ್ ಹೆಗೆಲ್ ಶೇಕ್ಸ್‌ಪಿಯರಿಂದ ಜಗತ್ತಿನಲ್ಲಿ ಗೌ
ಸಂದಿದೆಯೊ ಅಂತೆಯೇ ಇಂಡಿಯಾದ ಗೌರವ ಗಾಂಧೀಜಿಯ ಹೆಸರಿಂದ ಮಾ
ಎಲ್ಲೆಲ್ಲಿಯೂ ಉಳಿಯುವುದಿದೆ. ಜಾತಿ ಮತ ಪಂಥ ಪಕ್ಷ ಸ್ವಪ್ರತಿಷ್ಠೆ ಮೂಲವಾ
ಪೂರ್ವಗ್ರಹದಿಂದ ಪಾರಾಗಿ ಗಾಂಧಿಯನ್ನೂ ಗಾಂಧಿತತ್ತ್ವವನ್ನೂ ನಿಷ್ಠೆಯಿಂ
ಪ್ರಾಮಾಣಿಕವಾಗಿ ಗೌರವಿಸಿ, ಪಾಲಿಸಿದಾಗ ಮಾತ್ರ ರಾಷ್ಟ್ರ ಲೋಕಮಾನ್ಯವಾಗು
ದೆಂದು ಅವರ ೧೩೦ನೆಯ ಜನ್ಮದಿನದಂದು ಸ್ಪಷ್ಟಪಡಿಸಬಹುದಾಗಿದೆ.

ಹಿಮ ಸಹ್ಯ ವಿಂಧ್ಯ ಗಿರಿ ಕಂದರಗಳಿಂದ ಗಾಂಧಿ ಸಿದ್ಧಾಂತ ಘೋಷಣೆ ಅನು
ಸಲಿ; ಗಿಡಗಂಟೆಗಳ ಕೊರಳಲ್ಲಿ ಉಕ್ಕಿ ಬರಲಿ; ಗಾಳಿ ನೀರುಗಳ ನಾಳನಾಳಗಳ
ಬೆಂಕಿ ಸಿಡಿಲುಗಳ ಜ್ವಾಲೆ ಜ್ವಾಲೆಗಳಲ್ಲಿ ಹರಿಯಲಿ; ಹಳ್ಳಿಗಳ ಗುಡಿಸಿ
ಗಳಿಂದ, ನಗರಗಳ ಅರಮನೆಗಳಿಂದ, ಶಾಲೆ ಕಾಲೇಜುಗಳಿಂದ ಗಿರಣಿ ಕಾರ್ಖಾ
ಗಳಿಂದ ತೇಲಿಬರಲಿ! ಭಾರತಕ್ಕೆ ಜಯವಾಗಲಿ! ಗಾಂಧಿ ಸೂತ್ರ ದೇಶೋದ್ಧಾ
ಮಂತ್ರವಾಗಲಿ!

* * * * *

೨. ರಾಜಕೀಯ ಪಕ್ಷವೊಂದರ ನೀತಿ ಸೂತ್ರ

ತಳ ಹಿಡಿದಿರುವ ಕಾಂಗ್ರೆಸ್ಸಿನ ಪ್ರತಿಷ್ಠೆಯನ್ನು ಮೇಲೆತ್ತಿ, ನೂತನ ವರ್ಚಸ್ಸ
ತುಂಬಿ, ಅದಕ್ಕೆ ಕಾಯಕಲ್ಪ ಮಾಡುವ ತರದೂದು ಇತ್ತೀಚಿಗೆ ಅದರ ಕಾರ್ಯಕಾ
ಯಲ್ಲಿ ಕಾಣಿಸಿಕೊಂಡಿದೆ. ಅದರ ಕಾಯಕಲ್ಪ ಚಿಕಿತ್ಸೆಯ ಅಂಗವಾಗಿ ಎಲ್ಲ ಕಾಂಗ್ರೆ
ಸದಸ್ಯರಿಗೂ ಅನ್ವಯವಾಗುವಂಥ ನೀತಿ ಸಂಹಿತೆಯನ್ನು ಎ. ಕೆ. ಆಂಟನಿಯ
ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿ ರೂಪಿಸಿ, ಕಾರ್ಯಕಾರಿಣಿಯ ಅನುಮೋದನೆಯ
ಪಡೆದಿದೆ. ಈ ಸಂಹಿತೆಯಲ್ಲಿ ಗಾಂಧೀಜಿಯ ನೀತಿ ಸೂತ್ರಗಳನ್ನು ಅಳವಡಿಸಿಕೊಂಡಂ
೧೯ ಸೂತ್ರಗಳಲ್ಲಿ ಖಾದಿಧಾರಣೆ, ಪಾನನಿಷೇಧ, ವಿವಾಹಾದಿಉತ್ಸವಗಳಲ್ಲಿ ಆಡಂ
ಪ್ರದರ್ಶನ ಪ್ರತಿಷೇಧ, ಕುಟುಂಬನಿಯಂತ್ರಣ ಪಾಲನೆ, ಸ್ತ್ರೀ ಗೌರವ ರ
ಇವು ಮುಖ್ಯವಾದುವು. ಜಾತೀಯ ಮತೀಯ ಸಂಸ್ಥೆಗಳೊಡನೆ ಸಂಬಂಧವಿ
ಕೊಳ್ಳಕೂಡದು, ಆಸ್ತಿಪಾಸ್ತಿಗಳ ಬಗ್ಗೆ ವಿವರಣೆ ನೀಡಬೇಕು ಎಂಬ ನಿಯಮಗ
ಸೇರಿವೆ.

ಈ ಸೂತ್ರಗಳನ್ನು ಕುರಿತಂತೆ ಕಾರ್ಯಕಾರಿಣಿಯಲ್ಲಿ ಸುದೀರ್ಘ ಚರ್ಚೆ ನಡೆದಿರಬೇಕು, ಪತ್ರಿಕೆಗಳಲ್ಲಿ ಪ್ರಕಟವಾದ ಚರ್ಚೆಯ ದಿಕ್ಕನ್ನು ನೋಡಿದರೆ ಅವುಗಳ ಬಗ್ಗೆ ಕೆಲವರ ಅಸಮಾಧಾನವಿದ್ದಂತೆ ತೋರುತ್ತದೆ. ಅವರು ವಸ್ತುಸ್ಥಿತಿ ನಿಷ್ಠರಿರಬೇಕು. ಬುಡಕಟ್ಟು ಜನಾಂಗಗಳಲ್ಲಿ ಕುಡಿತ ಸಾಮಾಜಿಕ ಸಾಂಪ್ರದಾಯಿಕ ನೀತಿಯ ಆಚರಣೆಗಳ ಭಾಗವಾಗಿರುವುದರಿಂದ ಪಾನನಿಷೇಧ ಸರಿಯೆ ಎಂಬುದನ್ನು ಪಕ್ಷ ಕ್ಷೇಮದ ದೃಷ್ಟಿಯಿಂದಲೇ ಯೋಚಿಸಬೇಕೆಂದು ಕೆಲವು ಮಹನೀಯರು ತಮ್ಮ ಮನೋಭೀಷ್ಟವನ್ನು ಪರೋಕ್ಷವಾಗಿ ಅಭಿವ್ಯಕ್ತಪಡಿಸಿರಬೇಕು. ಅಕಾಲಿದಳ, ಇಂಡಿಯನ್ ಯೂನಿಯನ್ ಮುಸ್ಲಿಮ್ ಲೀಗ್‌ಗಳ ಅಂಗರಚನೆ ಸೆಕ್ಯೂಲರಿಸಮ್ ಅನ್ನು ಒಪ್ಪಿಕೊಂಡಿರುವುದರಿಂದ ಜಾತೀಯ ಸಂಸ್ಥೆಗಳು ಸಮಾಜ ಸೇವಾ ಕಾರ್ಯದಲ್ಲಿ ತೊಡಗಿರುವುದರಿಂದ ಕಾಂಗ್ರೆಸ್ ಸದಸ್ಯರು ಅಂಥ ಸಂಸ್ಥೆಗಳ ಸಂಪರ್ಕ ಕಡಿದುಕೊಂಡದ್ದಾದರೆ ಸಂಸ್ಥೆಗೆ ನಷ್ಟವಾಗುವುದಿಲ್ಲವೆ? ಎಂಬ ಪ್ರಶ್ನೆ ಚರ್ಚೆಯಲ್ಲಿ ತಲೆಯೆತ್ತಿದ್ದುಂಟು. ಇಪ್ಪತ್ತನೆಯ ಶತಮಾನದ ನಂತರ ಎರಡು ಮಕ್ಕಳಿಗಿಂತ ಹೆಚ್ಚು ಮಕ್ಕಳನ್ನು ಪಡೆದವರು ಕಾಂಗ್ರೆಸ್ ಸದಸ್ಯತ್ವವನ್ನು ಪಡೆಯಲಾರರು ಎಂದಿರುವುದರಿಂದ ಸದ್ಯಕ್ಕೆ ಆ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ ಎಂಬುದು ಒಂದು ಗುಂಪಿನ ಸಮಾಧಾನ. ಎರಡು ಮಕ್ಕಳ ಮಿತಿ ಗಂಡಸಿಗೊ ಹೆಂಗಸಿಗೊ ಸ್ಪಷ್ಟವಿಲ್ಲ. ಒಬ್ಬರಿಗಿಂತ ಹೆಚ್ಚುಮಂದಿ ಹೆಂಡಿರಿರುವಾಗ, ಒಬ್ಬೊಬ್ಬರಿಗೂ ಎರಡೆರಡು ಮಕ್ಕಳಾಗಬಹುದೆ? ಒಬ್ಬಳಿಗೆ ಒಬ್ಬರಾದ ಮೇಲೊಬ್ಬರಂತೆ ಹಲವು ಗಂಡರಿದ್ದರೆ, ಅವಳು ಎಷ್ಟು ಮಕ್ಕಳು ಹಡೆಯಬಹುದು? ಸ್ತ್ರೀಗೌರವ ನಿಯಮ ಸಾಧುವಾದದ್ದೇ. ಗಂಡಸರು ಸ್ತ್ರೀಯರನ್ನು ಹಿಂಸಿಸಬಾರದು ನಿಜ. ಸ್ತ್ರೀಯರೇ ಗಂಡಸರ ಮೇಲೆ ಬಿದ್ದರೆ? ಅಥವಾ ಅವರನ್ನು ಹಿಂಸಿಸಿದರೆ? ಅದಕ್ಕೇನು ಶಾಂತಿ? ಲೈಂಗಿಕ ಪ್ರವೃತ್ತಿ ಗಂಡು ಹೆಣ್ಣುಗಳ ಸಹಜ ಪ್ರವೃತ್ತಿಯಲ್ಲವೆ? ಹೆಣ್ಣುಗಂಡುಗಳ ಮನಸ್ಸು ಒಂದಾದಾಗ ಆ ಬಗ್ಗೆ ಆಕ್ಷೇಪವೆತ್ತಬಹುದೆ? ಆಸ್ತಿಪಾಸ್ತಿ ವಿವರಣೆಯ ಸಂದರ್ಭದಲ್ಲಿ ಮಡದಿ ಮಕ್ಕಳ ಹೆಸರಿನಲ್ಲಿರುವ ಆಸ್ತಿಗಳ ಲೆಕ್ಕವನ್ನು ಕೊಡಬೇಕೆ? ಅದರಿಂದ ಅವರು ಮೂಲಭೂತ ಹಕ್ಕುಗಳಿಂದ ವಂಚಿತರಾಗುವುದಿಲ್ಲವೆ? ಆಸ್ತಿಪಾಸ್ತಿಗಳ ಲೆಕ್ಕವನ್ನು ಬಹಿರಂಗಪಡಿಸದಿದ್ದರೆ ನಿಜ ಗೊತ್ತಾಗುತ್ತದೆಯೆ? ಬಹಿರಂಗ ಪಡಿಸಿದರೆ ಮೂಲಭೂತ ಹಕ್ಕುಗಳಿಗೆ ಚ್ಯುತಿಯೊದಗುತ್ತದೆಯೆ?

ಭ್ರಷ್ಟಾಚಾರಿಗಳಿರುವ ನಾಡಿನಲ್ಲಿ ಯಾವ ಪಕ್ಷಕ್ಕಾದರೂ ಒಂದು ನೀತಿ ಸಂಹಿತೆ ಆಗತ್ಯವಾಗಬಹುದು. ಆದರೆ ಸಂಹಿತೆಗಿಂತ ಮಿಗಿಲಾಗಿ ಆಚರಣೆ ಮುಖ್ಯ. ಹೇಗೂ ರಾಜ್ಯಾಂಗಕ್ಕೆ ಲಕ್ಷ ತಿದ್ದುಪಡಿಗಳಾಗಿರುವಾಗ, ಮುಂದೆ ನೀತಿ ಸಂಹಿತೆಗೂ ತಿದ್ದುಪಡಿ ತಂದು ಸಡಿಲಗೊಳಿಸಿದರಾಯಿತೆಂದು, ಈ ಸಂಹಿತೆಯೇ ಕೊನೆಯದಲ್ಲವೆಂದು ತಿಳಿದು ರಾಜನೀತಿ ಸೂಕ್ಷ್ಮಜ್ಞರು ಇದನ್ನೊಪ್ಪಿಕೊಳ್ಳಬಹುದು. ಆಚರಣೆಗೊದಗಿದಾಗಲೆ ಸಂಹಿತೆಗಾಗಲಿ ತತ್ವಕ್ಕಾಗಲಿ ಸಾರ್ಥಕತೆ. ಈ ನೀತಿ ಸಂಹಿತೆಯ ಪರಿಣಾಮವನ್ನು ಕಾಲವೇ

ನಿರ್ಣಯಿಸಬೇಕು. ಇತರ ಪಕ್ಷಗಳೂ ಗಟ್ಟಿಯಾದ ನೀತಿ ಸಂಹಿತೆಯನ್ನು ರೂಪಿಸಿಕೊಳ್ಳು
ವಂತಾಗಲೆಂದು, ಅದರಿಂದ ಸತ್ಪರಿಣಾಮವಾಗಲೆಂದು, ಆ ಮೂಲಕ ನಮ್ಮ ನಾಯಕರಿಗೆ
ಸದ್ಬುದ್ಧಿ ಮೊದಗಲೆಂದು ದೇಶಕ್ಕೆ ದೇಶವೇ ಹಾರೈಸುತ್ತದೆ.

*   *   *   *   *

೩. ಅನಾವರಣಕ್ಕೆ ಗ್ರಹಣ

ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಗಾಂಧಿ ಬೋಸ್ ನೆಹ್ರೂ ನಂತರದ
ಸ್ಥಾನ ಸರ್ದಾರ್‌ವಲ್ಲಭಭಾಯಿ ಪಟೇಲರದು. ತ್ಯಾಗದಲ್ಲಿಯೂ ಅವರು ನೆಹ್ರೂ
ಅವರಿಗೇನು ಕಡಮೆಯಲ್ಲ; ಆಡಳಿತ ಸಾಮರ್ಥ್ಯದಲ್ಲಿ ಅವರಿಗೆ ನೆಹ್ರೂ ಸಮನಲ್ಲ.
ಆಸೇತು ಹಿಮಾಚಲದವರೆಗಿನ ಅಖಂಡ ಭಾರತವನ್ನು ತುಂಡು ತುಂಡಾಗಿ ಹರಿದು,
ಸಣ್ಣ ಪುಟ್ಟ ಮರಿಹಿರಿಯ ಆಶ್ರಿತ ರಾಜರಿಗೆ ಹಂಚಿ, ಅವರ ದುರ್ವ್ಯವಹಾರಗಳಿಗೆ
ಪರಸ್ಪರ ಕಲಹಗಳಿಗೆ ಆಶ್ರಯ ನೀಡಿ, ತಾವೂ ರಾಯಭಾಗವನ್ನುಳಿಸಿಕೊಂಡು, ದೇಶ
ವನ್ನು ಚಿಂದಿ ಚಿಂದಿ ಮಾಡಿದ ಯಶಸ್ಸು ಆಂಗ್ಲರಿಗೆ ಸಲ್ಲಬೇಕು. ತಾವು ದೇಶದಿಂದ
ಕಾಲ್ತೆಗೆಯುವಾಗ ದೇಶವನ್ನು ವಿಭಜಿಸಿದ್ದಲ್ಲದೆ, ಐನ್ನೂರೈವತ್ತಾರು ಸಂಸ್ಥಾನಗಳ
ಸ್ವಾತಂತ್ರ್ಯವನ್ನು ಘೋಷಿಸಿ, ದೇಶವನ್ನು ಛಿದ್ರಗೊಳಿಸುತ್ತವೆ, ದುರ್ಬಲಗೊಳಿಸುತ್ತವೆ
ಮತ್ತೆ ಅದೊಂದು ಮಹಾರಾಷ್ಟ್ರವಾಗಿ ಮೆರೆಯಲಾರದು ಎಂಬ ವಿಕೃತ ಸಂತೋಷ
ಅವರದು. ಸಂಸ್ಥಾನಿಕರ ಸಂಘದ ಮೂಲಕ ರಾಜರು ನೆಹರೂ ಸರ್ಕಾರದ ಮೇಲ
ಯುದ್ಧಹೂಡಲು ಅಣಿಯಾಗುತ್ತಿದ್ದರಲ್ಲದೆ, ಕೆಲವು ರಾಜರು ಸ್ವಾತಂತ್ರ್ಯವನ್ನು
ಘೋಷಿಸಿಬಿಡುತ್ತಾರೆ. ರಾಷ್ಟ್ರದ ಅದೃಷ್ಟದಿಂದಾಗಿ ಪಟೇಲರಂಥ ಸೂಕ್ಷ್ಮಬುದ್ಧಿಯ
ಸಿಂಹಧೈರ್ಯದ, ಭೀಮ ವಿಕ್ರಮದ, ಭೀಷ್ಮ ತೇಜಸ್ಸಿನ ಸಾಹಸವೀರರು ದೇಶಕ್ಕೆ ವ
ವಾಗಿ ದೊರೆಯಲಾಗಿ ಭರತಖಂಡದ ಅಖಂಡತೆ ಉಳಿಯಲು ಸಾಧ್ಯವಾಗುತ್ತದೆ. ಅವ
ಸ್ಥಾನದಲ್ಲಿ ಬೇರೆ ಯಾರಿದ್ದರೂ ದೇಶ ಮುಕ್ಕಾಗುತ್ತಿತ್ತೆನ್ನುವುದರಲ್ಲಿ ಸಂದೇಹವಿಲ್ಲ
ಸಾಮ ದಾನ ಭೇದಗಳ ಜತೆಗೆ ಅವರು ದಂಡವನ್ನು ಬಳಸಬೇಕಾಗುತ್ತದೆ. ಅವರ ಮ
ಗರ್ಜನೆಗೆ ಎಲ್ಲ ರಾಜರಿಗೂ ಆಸನಕಂಪನವಾಗುತ್ತದೆ. ಎಲ್ಲರೂ ವಿಲಯನದ ಕರಾರಿ
ಸಹಿ ಹಾಕುತ್ತಾರೆ. ಲೋಕ ಅವರನ್ನು ಬಿಸ್ಮಾರ್ಕನೆಂದು ಉಕ್ಕಿನ ಮನುಷ್ಯನೆಂದ
ಕರೆಯುತ್ತದೆ. ಅವರಿಗೆ ನೆಹರೂ ಮುಕ್ತಹಸ್ತವನ್ನು ಕೊಟ್ಟಿದ್ದರೆ ಕಾಶ್ಮೀರ ಸಮಸ್ಯೆಯು
ಉಳಿಯುತ್ತಿರಲಿಲ್ಲವೆಂದು ಅಂದಿನ ಸೇನಾನಿಗಳೆ ನನ್ನೊಡನೆ ಹೇಳಿದ್ದುಂಟು.

ಹೈದರಾಬಾದ್ ನವಾಬನನ್ನು ದಾರಿಗೆ ತರಲು ಅವರು ವಿಶೇಷಾಸ್ತ್ರವನ್ನೇ ಬಳ
ಬೇಕಾಗುತ್ತದೆ. ನವಾಬರ ಆಶೀರ್ವಾದವನ್ನು ಪಡೆದಿದ್ದ ರಜಾಕರರೆಂಬ ಉಗ್ರಗಾಮಿಗ
ಪಡೆ ಹಿಂಸೆ ಕೊಲೆ ಲೂಟಿ ಸ್ತ್ರೀಯರ ಮಾನಭಂಗ ಮೊದಲಾದ ಕ್ರೌರ್ಯ ದೌರ್ಜನ್ಯ
ಗಳಲ್ಲಿ ತೊಡಗುತ್ತದೆ. ಸಂಸ್ಥಾನದಲ್ಲಿ ಕ್ಷಾಮಡಾಮರಗಳು ಅನೇಕರನ್ನು ಬಲಿ ತೆಗೆ

ಕೊಳ್ಳುತ್ತವೆ, ಜನ ರಾಜ್ಯದ ಹೊರಗೆ ಗೂಳೆಯ ಹೋಗುತ್ತಾರೆ. ಅಲ್ಲಿಯ ಭೀಕರ ಘಟನೆಗಳಿಂದ ದೇಶದಲ್ಲಿ ಅಶಾಂತಿಯುಂಟಾಗುವ, ಶತ್ರುಗಳು ದೇಶದೊಳಗೆ ನುಣುಚಿಕೊಂಡು ಬರುವ ಸಾಧ್ಯತೆ ತಲೆದೋರುತ್ತದೆ. ಐವತ್ತು ವರ್ಷದ ಹಿಂದೆ, ಸೆಪ್ಟೆಂಬರ್ ೧೭ ರಂದು ಪೋಲಿಸ್ ಕಾರ್ಯಾಚರಣೆಯನ್ನು ನಡಸುವ ಮೂಲಕ ಸರ್ದಾರರು ಹೈದರಾಬಾದ್ ಸಂಸ್ಥಾನವನ್ನು ಒಂದೇ ದಿನದಲ್ಲಿ ರಜಾಕರರ ಹಾವಳಿಯಿಂದ ವಿಮೋಚನೆಗೊಳಿಸುತ್ತಾರೆ, ನವಾಬರನ್ನು ಮಣಿಸುತ್ತಾರೆ. ಅವರನ್ನು ಸದಾ ನಾನಾ ವಿಧಾನಗಳಲ್ಲಿ ಸ್ಮರಿಸಿಕೊಳ್ಳಬೇಕಾದ್ದು ದೇಶಾಭಿಮಾನ ಕೃತಜ್ಞತೆಯುಳ್ಳ ಸುಸಂಸ್ಕೃತ ಜನರ ಕರ್ತವ್ಯ. ಕೃತಜ್ಞತೆಯಿಲ್ಲದ ಜನ ನಾಯಿಗಿಂತ ಕಡೆ. ಅಂಥ ಮಾತೃದ್ರೋಹಿಗಳು ಧರೆಗೆ ಹೊರೆ; ನಾಕಕ್ಕೆ ಹಗೆ.

ರಜಕಾರರ ಹಾವಳಿಯಿಂದ ವಿಮೋಚನೆಗೊಂಡ ತರುಣದಲ್ಲಿಯೇ ಸರ್ಕಾರವಾಗಲಿ, ಜನರಾಗಲಿ ವಲ್ಲಭಭಾಯಿ ಪಟೇಲರ ಪುತ್ಥಳಿಯನ್ನು ಕರ್ನಾಟಕದಲ್ಲಿ, ಅದರಲ್ಲಿಯೂ ಕಲಬುರ್ಗಿಯಲ್ಲಿ ಸ್ಥಾಪಿಸಬೇಕಾಗಿತ್ತು. ಐವತ್ತು ವರ್ಷಗಳನಂತರವಾದರೂ ಅಂಥದೊಂದು ಶ್ರೇಷ್ಠ ಕಾರ್ಯವನ್ನು ನೆರವೇರಿಸುತ್ತಿರುವುದು ಮೆಚ್ಚಬೇಕಾದ ಸಂಗತಿ. ಸರ್ದಾರರು ಯಾವುದೋ ಒಂದು ವರ್ಗಕ್ಕೆ, ಜಾತಿಗೆ, ಸಮಾಜಕ್ಕೆ, ಪಕ್ಷಕ್ಕೆ ಸೇರಿದವರಲ್ಲ. ಅವರು ದೇಶದ ಸಮಸ್ತರಿಗೂ ಸೇರಿದ ವಿಶ್ವಮಾನವರು. ದೇಶದ ಏಕತೆ ಮತ್ತು ಭದ್ರತೆಯಲ್ಲಿ ನಿಷ್ಠೆಯುಳ್ಳವರು ಈ ಉತ್ಸವವನ್ನು ವಿರೋಧಿಸಲಾರರು. ಈ ದೇಶದ ಸಕಲ ಸೌಭಾಗ್ಯಗಳನ್ನನುಭವಿಸುತ್ತ ಅನ್ಯನಿಷ್ಠರಾದವರಿದ್ದರೆ ಮಾತ್ರ ಈ ಉತ್ಸವಕ್ಕೆ ಮುಸಿಬಳಿದಾರು. ಪುತ್ಥಳಿಯ ಅನಾವರಣಸಂದರ್ಭದಲ್ಲಿ ರಾಜಕೀಯವನ್ನಾಗಲಿ, ಮತಾಂಧತೆಯನ್ನಾಗಲಿ ಬೆರೆಸುವುದು ಬರ್ಬರ ಕೃತ್ಯವಾಗುತ್ತದೆ, ಇತಿಹಾಸಕ್ಕೆಸಗಿದ ಅಪಚಾರವಾಗುತ್ತದೆ. ಉತ್ಸವವನ್ನು ಮುಂದೂಡಬೇಕಾದ ಸಂದರ್ಭವೊದಗಿದ್ದು ಸರ್ಕಾರದ ಅಶಕ್ತತೆಯನ್ನೂ ಅಸಹಾಯಕತೆಯನ್ನು ಎತ್ತಿತೋರಿಸುತ್ತದೆ. ಮುಂದೂಡಿಕೆಯ ಪರಿಣಾಮವಾಗಿ ಹಿಂಸಾಕೃತ್ಯಗಳು ನಡೆಯಬಹುದು. ಅದಿಲ್ಲದಿದ್ದರೂ ಅದರ ಕಹಿ ಜನಮನಸ್ಸಿನಲ್ಲುಳಿಯುತ್ತದೆ. ಕಪ್ಪು ದಿನಾಚರಣೆಯ ಘೋಷಣೆ ಸಜ್ಜನರ ದೂರದರ್ಶಿಗಳ ಲಕ್ಷಣವಲ್ಲವೆಂದೂ ಅದು ಚರಿತ್ರೆಯಲ್ಲಿ ದಾಖಲಾಗುವಂತಾಗಬಾರದೆಂದೂ ವಿಷಾದದಿಂದ ಹೇಳಬೇಕಾಗಿದೆ.

* * * * *

೪. ಉಗ್ರಗಾಮಿಗಳ ಯುಗ

ದ್ವಿತೀಯ ಮಹಾಯುದ್ಧ ಮುಗಿದಿದೆ. ಹತಾಶೆ ಅಶಾಂತಿ ಪರಮಾಣು ಸ್ಫೋಟ ಕ್ಷಾಮಡಾಮರ ರೋಗರುಜಿನಗಳಿಂದಾಗಿ ಜಗತ್ತು ಮೂರ್ಛಾವಸ್ಥೆಯಲ್ಲಿದೆ. ಶಕ್ತಿಕೂಟದ ಸದಸ್ಯ ರಾಷ್ಟ್ರಗಳು ವಿಜಯದ ಅಮಲಿನಲ್ಲಿ ಸಭೆ ಸೇರಿ, ಜೀವಶವವಾಗಿದ್ದ ಲೀಗ್ ಆಫ್ ನೇಷನ್ಸ್‌ಗೆ ಬದಲಾಗಿ ಪ್ರಪಂಚ ಸಂಸ್ಥೆಯನ್ನು ಹುಟ್ಟುಹಾಕುತ್ತವೆ.

ಪ್ರಜಾಪ್ರಭುತ್ವ ತತ್ತ್ವವನ್ನು ಗಾಳಿಗೆ ತೂರಿ, ರಾಷ್ಟ್ರ ಪಂಚಕಗಳು ಸರ್ವಾಧಿಕಾರವನ್ನು ತಮ್ಮಲ್ಲಿಯೇ ಭದ್ರಪಡಿಸಿಕೊಳ್ಳುತ್ತವೆ. ವೀಟೋ (ನಿಷೇಧ) ಅಧಿಕಾರವನ್ನು ತಾವೇ ಉಳಿಸಿಕೊಳ್ಳುತ್ತವೆ; ಅಪ್ರತ್ಯಕ್ಷವಾಗಿ ಜಗತ್ತನ್ನಾಳುವ ನವೀನ ವಿಧಾನದ ವಸಾಹತು ಶಾಹಿಯನ್ನು ರೂಢಿಗೆ ತರಲು ಬರ್ಬರೀಯ ಪಾಳೆಯಗಾರಿಕೆಯನ್ನು ಮೆರೆಯಲು ತಕ್ಕ ಬಂದೋಬಸ್ತು ಮಾಡಿಕೊಳ್ಳುತ್ತವೆ. ಮೂರ್ಛಾಗತವಾಗಿದ್ದ ಜಗತ್ತು ಜಾಗ್ರತ ಗೊಳ್ಳುವ ವೇಳೆಗೆ ದುರಂತ ನಾಟಕಕ್ಕೆ ನಾಂದಿ ಹಾಡುಗಾರಿಕೆ ಮುಗಿದಿದೆ. ಗಂಟು ಕಳ್ಳರು, ಹುಲಿ ಸಿಂಹ ತೋಳ ಚಿರತೆ ಕಿರುಬಗಳು ಸಭೆ ಸೇರಿ ಶಾಸನವನ್ನು ರಚಿಸಿ ದಂತಾಗಿದೆ. ಅಲ್ಲಿ ಹಾಜರಿದ್ದ ಸಾಧು ಪ್ರಾಣಿಗಳಿಗೆ ದನಿಯಿಲ್ಲವಾಗುತ್ತದೆ.

ಸಜಾತಿ ಭಕ್ಷಣ ಮನು ಮತ್ತು ತಿಮಿಂಗಿಲ ಕುಲಕ್ಕೆ ಮಾತ್ರ ವಿಲಾಸಲು. ಅದು ಒಂದಲ್ಲ ಒಂದು ರೂಪದಲ್ಲಿ ಇಂದಿಗೂ ಚಾಲ್ತಿಯಲ್ಲಿದೆ. ಹಿಂದಿನವರು ಮನುಷ್ಯನ ಮಾಂಸವನ್ನು ತಿನ್ನುತ್ತಿದ್ದರೆ ಇಂದಿನವರು ಅವನ ಚೈತನ್ಯವನ್ನೇ ಅಪಹರಿಸುತ್ತಿದ್ದಾರೆ. ಯುದ್ಧ ಮಾನವ ಸಮಾಜದ ಒಂದು ಅನಿವಾರ್ಯ ಲಕ್ಷಣವಾಗಿರುವಂತೆ ತೋರುತ್ತದೆ. ಬುದ್ಧ ಮಹಾವೀರ ಕ್ರೈಸ್ತ ಗಾಂಧಿಯರ ಉಪದೇಶ ಹೊಳೆಯಲ್ಲಿ ಹುಣಿಸೆಹಣ್ಣು ತೇಯ್ದಂತಾಗಿದೆ. ಎಲ್ಲಾದರೊಂದುಕಡೆ ಯುದ್ಧ ಸದಾ ನಡೆಯುತ್ತಿರುತ್ತದೆ. ಯುದ್ಧ ವಿರಾಮವೆಂದರೆ ಮುಂದಿನ ಯುದ್ಧಕ್ಕೆ ತಯಾರಿ ಮಾಡಿಕೊಳ್ಳುವ ಅವಕಾಶ ಎಂದೇ ಅರ್ಥ. ಇಂಥ ಸಂದರ್ಭದಲ್ಲಿ ದೊಡ್ಡಣ್ಣರಂತಿರುವ ಬಲಿಷ್ಠ ರಾಷ್ಟ್ರಗಳು ಜತೆಗೂ ಕೊಂಡೊ ಅಥವಾ ಪಕ್ಷ ವಿಪಕ್ಷಗಳ ಪಕ್ಷವಹಿಸಿಕೊಂಡೊ ಸಣ್ಣ ರಾಷ್ಟ್ರಗಳ ಮೇಲೆ ಹಿಡಿತ ಸಾಧಿಸುತ್ತವೆ. ಸೋವಿಯಟ್ ರಷ್ಯಾ ಛಿದ್ರವಿಚ್ಛಿದ್ರವಾದ ಮೇಲಂತು ಅಮೆರಿಕ ಒಂದೇ ಜಗತ್ತಿನ ಏಕೈಕ ಪಾಳೆಯಗಾರಿಕೆಯ ಪಟ್ಟವನ್ನು ಏಕಸ್ವಾಮ್ಯವನ್ನು ವಹಿ ಕೊಂಡಿದೆ. ಅಂದಮೇಲೆ ರಾಷ್ಟ್ರಗಳು ಅದರ ತಾಳಕ್ಕೆ ತಕ್ಕಂತೆ ಹೆಜ್ಜೆಹಾಕಬೇಕಾಗಿದೆ ಇಲ್ಲ ಅದು ನೀಡುವ ಶಿಕ್ಷೆಗೆ ಸಿದ್ಧವಾಗಬೇಕಾಗಿದೆ. ಇಡೀ ಜಗತ್ತಿನ ಕ್ಷೇಮ ರಕ್ಷ ಯನ್ನು, ಇತರ ರಾಷ್ಟ್ರಗಳ ವ್ಯವಹಾರಗಳಲ್ಲಿ ಮೂಗು ತೂರಿಸುವ ಅಧಿಕಾರವನ್ನ ತಾನಾಗಿಯೇ ಅದು ತನ್ನ ಮೇಲೆ ಹೊರಿಸಿಕೊಂಡಿದೆ. ಇತರ ಬಲಿಷ್ಠ ರಾಷ್ಟ್ರಗ ಮೂಗುದಾರ ಹಾಕಿ ಗೂಟಕ್ಕೆ ಬಿಗಿದ ಹೋರಿಗಳಂತೆ ಮಿಳ್ಮಿಳನೆ ಕಣ್ಣುಬಿಡುತ್ತಿ ನ್ಯಾಯವಾಗಿ, ಸತ್ಯವಾಗಿ, ನಿಷ್ಪಕ್ಷಪಾತವಾಗಿ ಅದು ವರ್ತಿಸುವುದಾದರೆ ಯಾರ ಬೇಡವೆನ್ನುವುದಿಲ್ಲ.

ಅಣ್ವಸ್ತ್ರ ನಿಯಂತ್ರಣ ಒಪ್ಪಂದವನ್ನೇ ನಿದರ್ಶನವಾಗಿ ತೆಗೆದುಕೊಳ್ಳೋ ತಾವು ಮಾತ್ರ ಅಣ್ವಸ್ತ್ರ ರಾಷ್ಟ್ರಗಳೆಂದು ಘೋಷಿಸಿಕೊಂಡು, ಅಣ್ವಸ್ತ್ರ ಪ್ರಯೋಗ ಅವಕಾಶ ಕಲ್ಪಿಸಿಕೊಂಡು ಐವತ್ತು ಸಾವಿರಕ್ಕೂ ಹೆಚ್ಚು ಪರಮಾಣು ಬಾಂಬುಗಳನ ಶೇಖರಿಸಿಕೊಂಡು, ಇತರ ರಾಷ್ಟ್ರಗಳು ಯುದ್ಧೇತರ ಅಣುಪ್ರಯೋಗಗಳನ್ನು ನಡೆಸಬಾರದೆಂದು ಹೇಳುವುದು ಯಾವನ್ಯಾಯ? ತಮ್ಮಲ್ಲಿರುವ ಪರಮಾಣು ಬಾಂ ರಾಶಿಯನ್ನೆಲ್ಲ ನಾಶಮಾಡಿ, ಪ್ರಯೋಗಗಳನ್ನು ಸ್ಥಗಿತಗೊಳಿಸಿದನಂತರ ಇತರ ರಾಷ್ಟ್ರ

ಮೇಲೆ ಯಜಮಾನ್ಯವನ್ನು ಚಲಾಯಿಸಬಹುದಾದಂಥ ಹಕ್ಕಲ್ಲ, ಅವಕಾಶ ದೊರೆತರೂ ದೊರೆಯಬಹುದು. ಅದಿಲ್ಲವಾದರೆ ಇತರ ರಾಷ್ಟ್ರಗಳನ್ನು ತರ್ಜಿಸಲು, ಅವುಗಳಿಗೆ ಆದೇಶ ನೀಡಲು ನೈತಿಕ ಧೈರ್ಯವೆಲ್ಲಿದೆ?

ಸ್ವಾಭಿಮಾನವುಳ್ಳ ಇಂಡಿಯಾದಂಥ ದೊಡ್ಡ ರಾಷ್ಟ್ರದ ಬಗ್ಗೆ, ಬಲಿಷ್ಠ ರಾಷ್ಟ್ರಗಳತ್ತ ಇರಲಿ, ಸಣ್ಣ ರಾಷ್ಟ್ರಗಳಿಗೂ ಸಹನೆಯಿಲ್ಲ. ಇಂಡಿಯಾ ಹೇಳಿ ಕೇಳಿ ಅಹಿಂಸಾತತ್ವದ ತಳಹದಿಯ ಮೇಲೆ ಗಾಂಧಿ ಕಟ್ಟಿದ ರಾಷ್ಟ್ರ; ಅದರ ಹಿನ್ನೆಲೆಯಲ್ಲಿ ವೇದಾಂತವಿದೆ, ಬೌದ್ಧ ಜೈನಧರ್ಮಗಳಿವೆ. ಸಿಖ್ ಪಂಥವಿದೆ. ಆಚಾರತ್ರಯರ ಮತ್ತು ಬಸವೇಶ್ವರರ ತತ್ತ್ವೋಪದೇಶವಿದೆ; ಅಶೋಕನ ಶಾಸನಗಳಿವೆ. ಹೀಗಿರುವಾಗ ಅದಕ್ಕೆ ಭೂದಾಹವೂ ಇಲ್ಲ ಯುದ್ಧಪಿಪಾಸೆಯೂ ಇಲ್ಲ. ಸ್ವಧರ್ಮ ಸ್ವದೇಶ ರಕ್ಷಣೆಯೊಂದೇ ಅದರ ಧ್ಯೇಯ. ಅಹಿಂಸಾ ಪರಮೋಧರ್ಮಃ ಎಂಬ ತತ್ವಕ್ಕೆ ಬದ್ಧವಾಗಿರುವ ದೇಶ ಪ್ರಚೋದನೆಯಿಲ್ಲದೆ, ಸ್ವಾಭಿಮಾನಕ್ಕೆ ಧಕ್ಕೆಯೊದಗದೆ ಯಾರ ಮೇಲೂ ಕೈಮಾಡುವುದಿಲ್ಲ. ಅಕ್ಕಪಕ್ಕದ ರಾಷ್ಟ್ರಗಳು ಅಣು ಪ್ರಯೋಗ ನಡಸುತ್ತಿರುವಾಗ, ಯುದ್ಧಕ್ಕೆ ಕಾಲ್ಕೆರೆಯುತ್ತಿರುವಾಗ, ಭಾರತ ಸುಮ್ಮನಿರುವುದು ಸಾಧ್ಯವೆ? ತಮ್ಮ ದೇಶದ ಕ್ಷೇಮಗೌರವಗಳ ಬಗ್ಗೆ ಕ್ಲಿಂಟನ್ನರಿಗೆಷ್ಟು ಕಾಳಜಿಯಿದೆಯೊ ವಾಜಪೇಯಿಯವರಿಗೂ ಅಷ್ಟೇ ಕಾಳಜಿಯಿರುವುದು ಅಪರಾಧವೆ? ಅದನ್ನು ಮೆಚ್ಚುವ ಮಾನವೀಯತಾ ಔದಾರ್ಯ ಅವರಲ್ಲಿರಬೇಡವೆ? ಸೀಟಿ ಬೀಟಿಗೆ ಇಂಡಿಯಾ ಸಹಿಹಾಕಲು ಸಿದ್ಧವಿದೆ; ಸಹಿ ಹಾಕುವ ಮುನ್ನ ಅದು ಎರಡು ಸವಾಲುಗಳನ್ನೆಸೆದಿದೆ: ಒಂದು, ರಾಷ್ಟ್ರ ಪಂಚಕಗಳು ತಮ್ಮಲ್ಲಿರುವ ಅಣುರಾಶಿಯನ್ನು ವಿನಾಶಗೊಳಿಸಿ, ಅಣುಪ್ರಯೋಗಗಳನ್ನು ನಿಲ್ಲಿಸಬೇಕು: ಇಲ್ಲವೇ, ಭಾರತ ಅಣ್ವಸ್ತ್ರ ರಾಷ್ಟ್ರವೆಂದು ಘೋಷಿಸಬೇಕು. ಭಾರತದ ಮೇಲೆ ಹೌಹಾರಿದಂತೆ ಪಾಕಿಸ್ತಾನ ಅಣುಬಾಂಬನ್ನು ಸಿಡಿಸಿದಾಗ, ಉತ್ತರಕೊರಿಯಾ ಜಪಾನಿನತ್ತ ಕ್ಷಿಪಣಿಯನ್ನೆಸೆದಾಗ, ಜಗತ್ತಿನ ಇತರ ರಾಷ್ಟ್ರಗಳು ಹೆಚ್ಚು ಗದ್ದಲ ಮಾಡಲಿಲ್ಲವೇಕೆ? ಇಷ್ಟಕ್ಕೆಲ್ಲ ಪ್ರಬಲ ರಾಷ್ಟ್ರವೊಂದರ ನಿಯಂತ್ರಣ ಕಾರಣವಾಗಿರಬಹುದೆ?

ಇಪ್ಪತ್ತನೆಯ ಶತಮಾನದ ಉತ್ತರಾರ್ಧ ಜಗತ್ತಿನ ಇತಿಹಾಸದಲ್ಲಿ ಉಗ್ರಗಾಮಿಗಳ ಯುಗವೆಂದೇ ಕರೆಯಬಹುದು. ಆಫ್ಘಾನಿಸ್ತಾನ ಪಾಕಿಸ್ತಾನಗಳಲ್ಲಿರುವ ನೂರಾರು ಶಿಬಿರಗಳಲ್ಲಿ ತಯಾರಾದ ಉಗ್ರಗಾಮಿಗಳು ಕಾಶ್ಮೀರ, ಬೋಸ್ನಿಯಾ, ತಾಂಜೇನಿಯಾ, ಕೆನ್ಯಾ ಮಾತ್ರವಲ್ಲ, ಹಲವು ಅರಬ್ ರಾಷ್ಟ್ರಗಳಲ್ಲಿ ಹುದುಗಿಕೊಂಡಿದ್ದು, ಮೇಲಿಂದ ಮೇಲೆ ಹಿಂಸಾಕೃತ್ಯಗಳಲ್ಲಿ ತೊಡಗುತ್ತಾರೆ. ಈಗಾಗಲೇ ಅವರು ಹಾಳುಮಾಡಿರುವ ಆಸ್ತಿಗೆ, ಕೊಲೆಗೈದಿರುವ ಜನಕ್ಕೆ ಲೆಕ್ಕವಿಲ್ಲ. ಕಾಶ್ಮೀರವೊಂದರಲ್ಲಿಯೇ ಕೋಟ್ಯಂತರ ರೂಪಾಯಿ ಬೆಲೆಯ ಆಸ್ತಿ ನಷ್ಟವಾಗಿದೆ, ಲಕ್ಷಾಂತರ ಮಂದಿ ಸತ್ತಿದ್ದಾರೆ. ಈ ವಿಷಯವನ್ನು ಇಂಡಿಯಾ ಸರ್ಕಾರ ಅಮೆರಿಕೆಯ ಗಮನಕ್ಕೆ ತರುತ್ತಿದ್ದರೂ ಅಮೆರಿಕೆ ಇಂಡಿಯಾದಲ್ಲಿಯೇ ತಪ್ಪು ಹುಡುಕಲು ಪ್ರಯತ್ನಿಸುತ್ತಿದೆ. ರಾಜಕೀಯ ತತ್ತ್ವದ ದೃಷ್ಟಿಯಿಂದ

ಚೀನಾಕ್ಕೂ ಅಮೆರಿಕೆಗೂ ಧ್ರುವಾಂತರ. ಆದರೂ ಅಮೆರಿಕೆ ಚೀನಾವನ್ನು ಓಲೈಸುತ್ತಿದೆ. ಏಕೆ? ಸಾಮಾನ್ಯ ಜ್ಞಾನ ಇರುವವರಿಗೆಲ್ಲ ಕಾರಣ ಸ್ಪಷ್ಟ.

ಆಗಸ್ಟ್ ತಿಂಗಳಲ್ಲಿ ನೈರೋಬಿ ಮತ್ತು ದಾರ್ ಎ ಸಲಾಮ್ ನಗರಗಳಲ್ಲಿರುವ ಅಮೆರಿಕಾ ರಾಯಭಾರಿ ಕಚೇರಿಗಳ ಮೇಲೆ ಉಗ್ರಗಾಮಿಗಳು ಬಾಂಬ್ ಹಾಕಿದರಷ್ಟೆ. ಸತ್ತ ಅಮೆರಿಕೀಯರ ಸಂಖ್ಯೆ ಕೇವಲ ಹನ್ನೆರಡು. ಅಷ್ಟಕ್ಕೇನೇ ಆಫ್ಘಾನಿಸ್ತಾನದ ಖೋಸ್ಟ್ ಶಿಬಿರ ಮತ್ತು ಸೂಡಾನಿನ ಖಾರ್ಟೂಮ್ ಮೇಲೆ ಅಮೆರಿಕೆ ತೊಮಹಾಕ್ ಕ್ಷಿಪಣಿಗಳನ್ನು ಹಾರಿಸಲಾಗಿ ನೂರಾರು ಜನ ಸಾಯುತ್ತಾರೆ. ಪ್ರಣಯದ ಸರಪಳಿ (ಪೌಲಾ ಜೋನ್ಸ್, ಲೆವಿನ್‌ಸ್ಕಿ, ಡಾಲಿಕೀಲೆ ಬ್ರೌನಿಂಗ್, ಇನ್ನೆಷ್ಟೋ?) ಯಲ್ಲಿ ಸಿಕ್ಕಿಕೊಂಡಿರುವ ರಸಿಕ ಚಕ್ರವರ್ತಿ ನಳಕೂಬರ ಬಿಲ್‌ಕ್ಲಿಂಟನ್ (ನಮ್ಮಲ್ಲಿಯೂ ಅಂಥವರಿದ್ದಾರೆ. ಅಂಥವರ ಬಗ್ಗೆ ನಮಗೆ ಗೌರವಾನುಕಂಪಗಳುಂಟು) ತಮ್ಮ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಕಾರಣಕ್ಕಾಗಿ ತೊಮಹಾಕ್ ಧಾಳಿ ನಡೆಸಿದರೆಂಬ ಕತೆ ಅಮೆರಿಕೆಯಲ್ಲಿಯೇ ಹುಟ್ಟಿಕೊಂಡಿದೆ. ಅದೇನೇ ಇರಲಿ, ವಾಷಿಂಗ್‌ಟನ್, ಜಫರ್ಸನ್, ಲಿಂಕನ್, ಎಮರ್ಸನ್, ಥೋರೋರಂಥ ಮಹಾನುಭಾವರನ್ನು ಪಡೆದ ಅಮೆರಿಕೆ, ಜಾತಿ ಮತ ಪಂಥ ಪಕ್ಷ ವರ್ಣಬೇದವಿಲ್ಲದೆ ಜಗತ್ತಿನ ಎಲ್ಲ ಕಡೆಯ ಜನರಿಗೆ ಆಶ್ರಯ ನೀಡಿರುವ ಆ ಮಹಾರಾಷ್ಟ್ರ ರಾಜಕೀಯಕೋಸ್ಕರ ನೀತಿ ಸಂಹಿತೆಯನ್ನು ನ್ಯಾಯ ಮಾರ್ಗವನ್ನು ಬಿಡಬಾರದು. ಒಂದು ನೀತಿ ತನಗೆ, ಮತ್ತೊಂದು ಮಾರ್ಗ ಭಾರತಕ್ಕೆ, ಮಗುದೊಂದು ನಡೆವಳಿ ಪಾಕಿಸ್ತಾನಕ್ಕೆ ಸಲ್ಲುವುದಾದರೆ ನಿಷ್ಪಕ್ಷಪಾತ ಇತಿಹಾಸಕಾರನ ಲೇಖನಿ ಅದನ್ನು ಗಮನಿಸಬೇಕಾಗುತ್ತದೆ. ಅಮೆರಿಕೆ ಈಗಿನಂತೆಯೇ ಮೂಲಭೂತವಾದಿಗಳನ್ನು ಬೆಂಬಲಿಸುವುದಾದರೆ ಮುಂದೆ ತನಗೂ ಅಪಾಯ ಕಾದಿರುವುದಲ್ಲದೆ, ಜಗತ್ತು ಸಹ ದುರಂತದೆಡೆಗೆ ಸಾಗಬೇಕಾಗುತ್ತದೆ. ಈಗಾಗಲೇ ಉಗ್ರಗಾಮಿಗಳ ಮಹಾನಾಯಕ ಅರೇಬಿಯಾ ಮೂಲದ ಶ್ರೀಮಂತ ಪುತ್ರ ತಾಲಿಬಾನ್ ಗೆಳೆಯ ಒಸಾಮ ಬಿನ್ ಲೇಡನ್ ಅಮೆರಿಕೆಯ ಮೇಲೆ ಯುದ್ಧ ಸಾರಿದ್ದಾನೆ. ಸೂಡಾನ್ ಆಫ್ಘಾನಿಸ್ತಾನಗಳ ಮೇಲೆ ಕ್ಷಿಪಣಿ ಹಾರಿಸಿದ ಕ್ಲಿಂಟನ್ ಪ್ರತಿನಿತ್ಯ ಕಾಶ್ಮೀರದಲ್ಲಿ ಕೊಲೆಮಾಡುತ್ತಿರುವ ದ್ರೋಹಿಗಳನ್ನು, ಕೊಲೆಮಾಡಿಸುತ್ತಿರುವ ಪಾಪಿಗಳನ್ನು ಪ್ರಶ್ನಿಸದೆ, ಅವರನ್ನು ರಕ್ಷಿಸುವುದರ ಅರ್ಥವೇನು? ತಮ್ಮ ಬದುಕಿಗಂಟಿಕೊಂಡಿರುವ ಕಳಂಕದಿಂದ ಪಾರಾಗಲು ಕ್ಲಿಂಟನ್ ಇದೀಗ ಪಾದ್ರಿಗಳ ಮರೆಹೊಕ್ಕಿರುವರಂತೆ, ನಮ್ಮ ರಸಿಕ ರಾಜಕಾರಣಿಗಳು ಸಮಾನ ಧರ್ಮದ ಸ್ವಾಮಿಗಳನ್ನು ಮರೆಹೊಗುವಂತೆ; ಪ್ರತಿವಾರವೂ ಅಧ್ಯಾತ್ಮಿಕ ಪಾಠಗಳನ್ನು ಹೇಳಿಸಿಕೊಳ್ಳುವರಂತೆ. ಅಂತೆಯೇ ರಾಜಕೀಯ ಪಾಪಗಳಿಂದ ಮುಕ್ತರಾಗಲು ಆ ಆಕರ್ಷಣೀಯ ವಿವೇಕಪೂರ್ಣ ಪ್ರಣಯಪ್ರವೀಣ ಉದ್ದಾಮ ವ್ಯಕ್ತಿ ಪ್ರಯತ್ನಿಸಬಾರದೇಕೆ?

ದೇಜಗೌ

ಗಾಂಧೀಜಿ ಖಾದಿಗೆ ಕೊಟ್ಟ ಮಹತ್ವ

ಪಿ. ಆರ್. ತಿಪ್ಪೇಸ್ವಾಮಿ
೧೬೩, ರಮಾವಿಲಾಸ ರಸ್ತೆ
ಮೈಸೂರು–೨೪

ಮೋಹನದಾಸ ಕರಮಚಂದ ಗಾಂಧಿ (೧೮೬೯–೧೯೪೮) ಯವರನ್ನು ದಕ್ಷಿಣ ಆಫ್ರಿಕದ ಕೂಲಿಕಾರರು ಭಾರತದಿಂದ ಕರೆಸಿಕೊಂಡರು. 'ಕೂಲಿಗಳ ಬ್ಯಾರಿಸ್ಟರ್' ಎಂದೇ ಪ್ರಸಿದ್ಧರಾದರು. ಬಿಳಿ ಮತ್ತು ಕಪ್ಪು ಜನರ ನಡುವಿನ ಅಂತರವನ್ನು ತೊಲಗಿಸುವ ಹೋರಾಟದಲ್ಲಿ 'ಸತ್ಯಾಗ್ರಹ' ಜನ್ಮ ತಳೆಯಿತು. ಬ್ರಿಟೀಷರ ದಬ್ಬಾಳಿಕೆಯನ್ನು ಮುರಿಯಲು ಈ ಸತ್ಯಾಗ್ರಹವನ್ನು ಭಾರತದಲ್ಲಿ ಬಿತ್ತಿ ಚಳುವಳಿಯನ್ನೇ ಪ್ರಾರಂಭಿಸಿದರು. ಗುಲಾಮಗಿರಿ ತಪ್ಪಿಸಲು ಕ್ರಾಂತಿಕಾರಿ ಮಾರ್ಗ ಯಶಸ್ವಿಯಾಗಲಿಲ್ಲ. ಆದರೆ ಗಾಂಧೀಜಿ ಅಂದಿನ ಪರಿಸ್ಥಿತಿಯಲ್ಲಿ ಸತ್ಯಾಗ್ರಹ ಅಹಿಂಸಾತ್ಮಕ ಅಸಹಕಾರದ ಮೂಲಕ ಸ್ವಾತಂತ್ರ್ಯವನ್ನು ತಂದುಕೊಟ್ಟರು.

ಗಾಂಧೀಜಿ ಅಹಿಂಸಾತ್ಮಕ ಮಾರ್ಗದಲ್ಲಿ ರಚನಾತ್ಮಕ ಕಾರ್ಯಗಳನ್ನು ಹಾಕಿಕೊಂಡು ಜನಸಾಮಾನ್ಯರನ್ನು ಎಚ್ಚರಿಸಲು ಈ ಚಳುವಳಿಯಲ್ಲಿ ಭಾಗವಹಿಸಲು ಪ್ರೇರಣೆ ನೀಡಿದರು.

ಈ ಹೋರಾಟದಲ್ಲಿ ಕರ್ನಾಟಕದ ಪಾತ್ರ ಮಹತ್ವಪೂರ್ಣವಾದುದು. ಕನ್ನಡಿಗರು ಬ್ರಿಟಿಷರ ಆಡಳಿತ ಪ್ರಾಂತ್ಯಗಳಾದ ಬೊಂಬಾಯಿ, ಮದರಾಸು, ರಾಜರ ನವಾಬರ ಆಡಳಿತಗಳ ಹಿಡಿತದಲ್ಲಿದ್ದ ಹೈದರಾಬಾದ್ ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಗುಲಾಮಗಿರಿಯಲ್ಲಿ ಬದುಕುತ್ತಿದ್ದ ಕಾಲ. ಗಾಂಧೀಜಿ ಅವರ ಪ್ರೇರಣೆಯಿಂದಾಗಿ ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡರು. ಆಗ ಗಾಂಧೀಜಿ ಭಾರತದಲ್ಲೆಲ್ಲಾ ಸಂಚರಿಸಿದರು. ಕರ್ನಾಟಕಕ್ಕೂ ಬಂದರು. ಒಮ್ಮೆ ಅಲ್ಲ ಆರು ಬಾರಿ ಬಂದುಹೋಗಿದ್ದಾರೆ.

ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ನಮ್ಮ ಕಲೆ ಸಂಸ್ಕೃತಿಯಲ್ಲಿ ಬದಲಾವಣೆ ಕಾಣುವಂತಾಯಿತು. ಬ್ರಿಟೀಷರ ಸಂಸ್ಕೃತಿ ಪ್ರಭಾವಕ್ಕೆ ಬಲಿಯಾದ ನಮ್ಮ ನಿತ್ಯ ಬಳಕೆಯೂ ವೇಷ ಭೂಷಣದಲ್ಲೂ ಬದಲಾವಣೆಗಳಾದವು. ಸೂಟು ಬೂಟು ತೊಡಲು ಪ್ರಾರಂಭವಾಯಿತು. ಬ್ರಿಟೀಷರಿಗೆ ಪ್ರಿಯವಾಗುವ ಉಡುಪು ಬಳಕೆಗೆ ಬಂದಿತು. ಭಾರತೀಯತೆ ಕಳೆದುಕೊಳ್ಳುವ ಸ್ಥಿತಿಯಲ್ಲಿ ದೇಶ ಬೆಳೆಯತೊಡಗಿತು. ಇಂಥ ದಾಸ್ಯ ಮನೋವೃತ್ತಿ ಇದ್ದ ಸಮಯದಲ್ಲೇ ಗಾಂಧೀಜಿ ಆಫ್ರಿಕದಿಂದ ಭಾರತಕ್ಕೆ ಬಂದಿದ್ದರು.

ಲೋಕಮಾನ್ಯ ತಿಲಕರ ಅನಂತರ ಗಾಂಧೀಜಿ ಅವರು ಅಸಹಕಾರ ಅಂದೋಲನವನ್ನು ದೇಶದ ಮುಂದೆ ಇಟ್ಟು, ಜನರನ್ನು

ಜಾಗೃತಿಗೊಳಿಸಿದರು. ವಿದೇಶಿ ವಸ್ತ್ರಗಳ ಬಹಿಷ್ಕಾರ ಸ್ವದೇಶಿ ವಸ್ತ್ರಗಳ ಪುರಸ್ಕಾರ, ಗ್ರಾಮೋದ್ಯೋಗಗಳ ಪುನರುತ್ಥಾನಕ್ಕೆ ಅಗ್ರಸ್ಥಾನ ಕೊಡಬೇಕೆಂಬುದೇ ಅಭಿವೃದ್ಧಿಯ ನಿಜವಾದ ದಾರಿ ಎಂದು ಭಾವಿಸಿದರು. ಚರಕವನ್ನು ದೇಶದ ಮುಂದೆ ಇರಿಸಿದರು. ಕೈನೂಲು ತೆಗೆದು ಅದನ್ನು ಕೈಮಗ್ಗದ ಮೇಲೆ ನೇಯಿಸಿದ ಬಟ್ಟೆಯೇ ಶುದ್ಧ ಸ್ವದೇಶಿ ವಸ್ತ್ರ. ಇದೇ 'ಖಾದಿ' ಎಂದು ಹೆಸರಾಯಿತು. ಖಾದಿಧಾರಿಗಳಾಗುವುದು ದೇಶದ ಸ್ವಾತಂತ್ರ್ಯಪ್ರಿಯ ಜನತೆಯ ಆದ್ಯ ಕರ್ತವ್ಯ ಎಂದು ಭಾವಿಸಿ ಗಾಂಧೀಜಿ ಖಾದಿಯ ಉತ್ಪಾದನೆ ಮಾರಾಟಕ್ಕೆ ದೇಶಭಕ್ತರ ಮನ ಒಲಿಸಿದರು. ಇದರಿಂದಾಗಿ ಖಾದಿಯು ಸ್ವಾತಂತ್ರ್ಯಕ್ಕಾಗಿ ಹೋರಾಡುವವರ, ದೇಶ ಭಕ್ತರ ಸಮವಸ್ತ್ರವಾಯಿತು.

ಬ್ರಿಟಿಷರ ಜವಳಿ ಉದ್ದಿಮೆಗೆ ಅವಕಾಶ ಕಲ್ಪಿಸುವ ಸಲುವಾಗಿ ಅಗ್ಗದ ದರದ ಗಿರಣಿ ನೂಲನ್ನು ಕೊಂಡು, ಕೈಮಗ್ಗದ ನೇಕಾರರು ಬಟ್ಟೆ ನೇಯಲು ಪ್ರಾರಂಭಿಸಿದರು. ಇದರಿಂದ ಕೈನೂಲು ತೆಗೆಯುವ ಉದ್ಯಮವು ನಾಶ ವಾಗುವ ಮಟ್ಟಕ್ಕೆ ಬಂದಿತು.

ಹಿಂದಿನ ತಲೆಮಾರಿನವರು ತಮ್ಮ ಸಂಸಾರಕ್ಕೆ ಸಾಕಾಗುವಷ್ಟು ಹತ್ತಿನೂಲನ್ನು ಮನೆಯವರೇ ನೂಲುವ ಪರಂಪರೆಯನ್ನಿಟ್ಟು ಕೊಂಡಿದ್ದರು. ಮನೆಯಲ್ಲಿ ನೂತದಾರವನ್ನು ಊರಿನ ನೇಕಾರರಿಗೆ ಕೊಟ್ಟು ವರ್ಷಕ್ಕೆ ಸಾಕಾಗುವಷ್ಟು ಹಚ್ಚಡವನ್ನು, ಚಳ್ಳಣ, ಖಸೆ ಅಂಗಿ ಬಟ್ಟೆಯನ್ನು ನೇಯಿಸಿಕೊಳ್ಳು ತ್ತಿದ್ದರು. ಅವುಗಳ ಕೂಲಿಗೆಂದು ದವಸವನ್ನು ನೀಡುತ್ತಿದ್ದರು. ಬಡವರು ಬಿಡುವಿನಲ್ಲಿ ಕೈರಾಟೆಯಲ್ಲಿ ನೂಲು ತೆಗೆದು ಸಂತೆಯಲ್ಲಿ ನೇಕಾರರಿಗೆ ಮಾರಿ ತಮ್ಮ ಸಂಸಾರಕ್ಕೆ ಅಗ...
ವಸ್ತ್ರಗಳನ್ನು ಕೊಳ್ಳುತ್ತಿದ್ದರು. ಆದರೆ ಈಗ...
ನಯವಾದ ವಿದೇಶಿ ನೂಲು ಅಗ್ಗ ಬೆಲೆಗ...
ಪೇಟೆಯಲ್ಲಿ ಸಿಗುವುದನ್ನು ಕಂಡುಕೊಂಡ...
ನೇಕಾರರು ಕೈನೂಲನ್ನು ಕೊಳ್ಳದಂತಾದರು...
ಹೀಗಾಗಿ ಗುಡಾರ ಬಟ್ಟೆಗೆ ಹಾಗೂ ಹಾಸ...
ಹೊದಿಕೆಗೆ ಮುಂತಾದವುಗಳಿಗೆ ಕೈನೂಲ...
ತೆಗೆಯುವ ಕೆಲವೊಂದು ಗ್ರಾಮಗಳ ಸಂಸಾ...
ಗಳಲ್ಲಿ ೧೯೨೦ರಲ್ಲೇ ಕಂಡುಬಂದಿತ್ತು...
ಹಿಂದಿನ ನಮ್ಮ ನೂಲುವ ಮುದುಕಿಯರಿ...
ನೂಲುವ ಕಲೆ ಕರಗತವಾಗಿದ್ದರೂ, ಅವರ...
ನೂತ ನೂಲಿಗೆ ಬೇಡಿಕೆ ಇಲ್ಲದ ಕಾರ...
ನೇಯಿಗೆ ಸೌಕರ್ಯ ಇಲ್ಲದ್ದರಿಂದ ಅನೇ...
ಕಡೆ ಚರಕಗಳು ಅಟ್ಟ ಏರಿದವು. ಈ ಲೇಖ...
ಜಾನಪದ ವಸ್ತುಗಳ ಸಂಗ್ರಾಹಕನಾಗ...
ಕರ್ನಾಟಕ ಉದ್ದಗಲಕ್ಕೂ ಸಂಚರಿಸಿ ಬೆದ...
ನೋಡಿ ಅನೇಕ ವಿನ್ಯಾಸದ ರಾ...
ಸಂಗ್ರಹಿಸಿ ಪ್ರದರ್ಶಿಸಿದೆ. ಈ ಎಲ್ಲ...
ಒಂದೆಡೆ ಪ್ರದರ್ಶಿತವಾದರೆ ಚರಕಗಳ ವಸ...
ಪ್ರದರ್ಶನದಿಂದ ಹಿಂದಿನ ತಲೆಮಾ...
ಗ್ರಾಮೀಣ ಕಲೆ ಉಳಿಸಿದಂತಾಗುತ್ತದೆ.

ಖಾದಿ ಬಟ್ಟೆ ಎಂದಾಕ್ಷಣ ನಮಗೆ ನೆನ...
ಗುವುದು ಉ.ಕ.ದ ಹನುಮಂತರಾಯ...
ಹೆಸರು. ಕರ್ಮಯೋಗಿ ಹನುಮಂತರಾಯ...
ಬೆಳಗಾವಿಯ ತಮ್ಮ ಭಾಷಣದಲ್ಲಿ (೧೯...
ಗಾಂಧೀಜಿ ಖಾದಿಯ ಪ್ರಸಾರಕ್ಕೆ ಹೆ...
ಮಹತ್ವ ಕೊಟ್ಟರು. 'ಚರಕ ಸಂಘ' ಶಾ...
ಗಳು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸ್ಥಾ...
ವಾದವು. ಹನುಮಂತರಾಯರು ವಿಜಾ...
ಜಿಲ್ಲೆಯಲ್ಲಿ 'ಖಾದೀ' ಉತ್ಪಾದನ ಸಂ...
ನೆಯ ಕಾರ್ಯಕೈಗೊಂಡರು. ಹಳ್ಳಿಯಿ...
ಹಳ್ಳಿಗೆ ಕುದುರೆ ಮೇಲೆ ಹತ್ತಿಯ ...

ಕೇರಿ ಪಾದಚಾರಿಗಳಾಗಿ ಖಾದಿ ಪ್ರಚಾರದಲ್ಲಿ ತೊಡಗಿದರು.

"ನೀವು ಮಾಡಿದ ರೊಟ್ಟಿಯನ್ನು ನಿಮ್ಮ ಮಕ್ಕಳಿಗೆ ಉಣಿಸುವಂತೆ ನೀವು ನೂತ ನೂಲಿನ ಬಟ್ಟೆಯನ್ನು ನಿಮ್ಮ ಮಕ್ಕಳು ಮರಿಗಳೂ ಹಿರಿಯರಿಗೂ ಕೊಡಿರಿ ನೀವಾದರೂ ನಿಮ್ಮ ನೂಲಿನಿಂದ ನೇಯ್ದ ಸೀರೆಯನ್ನು ಉಡುವುದಾಗಿ ಪ್ರತಿಜ್ಞೆ ಮಾಡಿರಿ" ಎಂದು ನೂಲುವವರ ಮನಒಲಿಸುತ್ತಿದ್ದರು. ಉಪ್ಪಿನ ಬೇಟಗೇರಿಯಲ್ಲಿ ಖಾದಿ ವಿದ್ಯಾಲಯವನ್ನು ತೆರೆದು ಅಲ್ಲಿ ವಿದ್ಯಾರ್ಥಿಗಳಿಗೆ ಖಾದಿ ಮಹತ್ವ, ಲೆಕ್ಕಪತ್ರ ಪರಿಶೀಲನೆ ಮುಂತಾದುವುಗಳ ಬಗ್ಗೆ ತಿಳಿಸುವ ಏರ್ಪಾಡು ಮಾಡಿದರು.

ಗಾಂಧೀಜಿ ೧೯೩೦ರಲ್ಲಿ ಕಾಯಿದೆ ಭಂಗದ ಆಂದೋಲನ ಸಾರಿದ ಕೂಡಲೆ ರಾಷ್ಟ್ರೀಯ ಭಾವನೆಯಿಂದಾಗಿ ಖಾದಿಯ ಬೇಡಿಕೆ ಪೂರೈಸಲು ಆಗಲಿಲ್ಲ. ಬೇರೆ ಪ್ರಾಂತ್ಯಗಳಿಂದ ವಿಧಿ ಇಲ್ಲದೆ ತರಿಸಬೇಕಾಯಿತು.

ಕರ್ನಾಟಕದಲ್ಲಿ ಜಿನಗು ನೂಲಿನ ಖಾದಿ ಬಟ್ಟೆ ತಯಾರಿಸಲು ಬೇಕಾಗುವ ಜಿನುಗು ಖಾದಿ ಬಟ್ಟೆಯನ್ನು ಆಂಧ್ರದಿಂದ ತರಿಸಬೇಕಾಯಿತು. ಇದನ್ನು ತಪ್ಪಿಸಲು ಗದ್ವಾಲದಲ್ಲಿ ಖಾದಿ ಕೇಂದ್ರ ಸ್ಥಾಪಿಸಲಾಯಿತು. ಇಲ್ಲಿ ೮೦ ನಂಬರಿನವರೆಗೆ ನೂಲಿನ ಸೀರೆ ಧೋತರ ತಯಾರಿಸಿ ಜಿನಗು ಖಾದಿಯು ಚರಕ ಸಂಘದ ಕೀರ್ತಿ ಅಖಿಲ ಭಾರತ ಚರಕ ಸಂಘದಲ್ಲಿ ಪ್ರಭಾವ ಬೀರಿತು. ೧೯೪೦ರಲ್ಲಿ ನಿವೃತ್ತರಾಗಲು ಅವರ ಅನಾರೋಗ್ಯವೇ ಕಾರಣವಾಯಿತು. ಹೀಗೆ ಹನುಮಂತರಾಯರ ಖಾದಿ ನಿಸ್ವಾರ್ಥ ಪ್ರಚಾರ ಸೇವೆಯು ಸ್ಮರಿಸುವಂಥದ್ದು.

ಹಿರಿಯ ಸಾಹಿತಿ ದಿ|| ಡಿ. ವಿ. ಗುಂಡಪ್ಪನವರ ಕರೆಯ ಮೇರೆಗೆ ಗಾಂಧೀಜಿ ಬೆಂಗಳೂರಿಗೆ ಒಮ್ಮೆ ಆಗಮಿಸಿದ್ದರು. ಗೋಖಲೆ ಭಾವಚಿತ್ರ ಅನಾವರಣ ಮಾಡಲು ಆಹ್ವಾನಿಸಲಾಗಿತ್ತು. ಮದರಾಸಿನಿಂದ ತಮ್ಮ ಪತ್ನಿ ಕಸ್ತೂರಿ ಬಾ ಅವರೊಡನೆ ರೈಲಿನಲ್ಲಿ ಗಾಂಧೀಜಿ ಬೆಂಗಳೂರಿಗೆ ಬಂದಿದ್ದರು. ಆಗ ಗಾಂಧೀಜಿ ಕಸೆಅಂಗಿ, ಗುಜರಾತಿ ಪೇಟ, ಧೋತರ ಧರಿಸಿದ್ದರೆ, ಕಸ್ತೂರಿ ಬಾ ಕೆಂಪು ಅಂಚಿನ ಬಿಳಿ ಸೀರೆ—ಈ ಸರಳ ಸ್ವಚ್ಛ ಖಾದಿ ಉಡುಪಿನಲ್ಲಿ ಗಾಂಧೀಜಿ ಅವರನ್ನು ನೋಡಿ ಜನ ಅಚ್ಚರಿಗೊಂಡರು. ಕುದುರೆ ಸಾರೋಟದ ವ್ಯವಸ್ಥೆ ಇದ್ದರೂ ನಡದೇ ಬಂದರು. ಭಾವಚಿತ್ರ ಅನಾವರಣಗೊಳಿಸಿ ಮದರಾಸಿಗೆ ಹಿಂದಿರುಗುವ ಮುನ್ನ ಆ ಸಂದರ್ಭದಲ್ಲಿ ಗಾಂಧೀಜಿ "ದೇಶದಿಂದ ಕಚ್ಚಾ ವಸ್ತುಗಳು ಹೊರದೇಶಕ್ಕೆ ಹೋಗುತ್ತಿವೆ. ಅದನ್ನು ನಿಲ್ಲಿಸಬೇಕು, ಸ್ವದೇಶಿ ವಸ್ತುಗಳು ತಯಾರಿಕೆ ಆಗಬೇಕು, ಮಾತೃಭಾಷೆಗೆ ಮಾನ್ಯತೆ ಕೊಡಬೇಕು. ಆಧುನಿಕ ನಾಗರೀಕತೆ ಭಾರತಕ್ಕೆ ಒಂದು ಶಾಪ. ಮೈಸೂರು ಶ್ರೇಷ್ಠವಾದ ಸಂಸ್ಥಾನ ರಾಮರಾಜ್ಯವನ್ನು ಸ್ಥಾಪಿಸಿ" ಎಂದು ಹರಿಸಿದರು.

ಗಾಂಧೀಜಿ ಅವರು ೧೯೨೪ರಲ್ಲಿ ಬೆಳಗಾವಿಗೆ ಬಂದು ಮುಂಬಯಿ ಪ್ರಾಂತ್ಯದಲ್ಲಿ ಸಂಚರಿಸಿ ರಾಜಕೀಯ ಪರಿಷತ್ತಿನ ಸಮ್ಮೇಳನದಲ್ಲಿ ಭಾಗವಹಿಸಿದರು. ೧೯೨೭ರಲ್ಲಿ ವಿಜಾಪುರ, ಮಂಗಳೂರು ಹಾಗೂ ಬೆಂಗಳೂರಿಗೆ ಬಂದಿದ್ದರು. ಬೆಂಗಳೂರು ದಂಡಿನಲ್ಲಿ ಬೃಹತ್ ಸಭೆ, ಖಿಲಾಫತ್ ರಾಷ್ಟ್ರೀಯ ಶಾಲೆಯನ್ನು ಹಾಜೀ ಉಸ್ಮಾನ್ ಸೇಟ್ ಇಲ್ಲಿ ಪ್ರಾರಂಭಿಸಲು ಗಾಂಧೀಜಿ ಪ್ರೇರಕರಾದರು. ಮತ್ತೆ

೧೯೨೦ರಲ್ಲಿ ಳಗಾಂ ಜಿಲ್ಲೆಯ ಪ್ರವಾಸ ಸಾಂಗ್ಲಿ, ಮಿರಜ್, ನಿಪ್ಪಾಣಿ, ಧಾರವಾಡ, ಹುಬ್ಬಳ್ಳಿ, ಗದಗನಲ್ಲಿ ರಾಷ್ಟ್ರೀಯ ಶಾಲೆಗಳು ಹಾಗೂ ಖಾದಿ ಅಂಗಡಿಗಳು ಆರಂಭವಾದವು. ಸೊಲ್ಲಾಪುರ, ಅಂಗಳ ೧೯೨೦ರಲ್ಲಿ ಪುನಃ ಬಾಗಲಕೋಟೆ, ವಿಜಾಪುರಕ್ಕೆ ಭೇಟಿ ಕೊಟ್ಟರು. ಎಲ್ಲೆಲ್ಲೂ ಜನ ಜಂಗುಳಿ ನಿಧಿ ಸಂಗ್ರಹಣ. ಆ ಸಂದರ್ಭದಲ್ಲಿ “ಒಂದು ಕೋಟಿ ಜನ ಕಾಂಗ್ರೆಸ್ ಸದಸ್ಯರಾಗಬೇಕು—ಎಂದು ಗಾಂಧೀಜಿ ಹೇಳುತ್ತಿದ್ದರು. ಇಪ್ಪತ್ತು ಲಕ್ಷ ರಾಟೆ ದೇಶದಲ್ಲಿ ತಿರುಗಬೇಕು” ಎಂಬುದು ಅವರ ಬಯಕೆ. ಅವರ ಪ್ರವಾಸದ ದಾರಿಯಲ್ಲಿ ರಸ್ತೆ ರಿಪೇರಿಗಾಗಿ ಹೆಂಗಸರು ಕಲ್ಲು ಚೂರು ಮಾಡುವುದನ್ನು ನೋಡಿ ನೊಂದು ಈ ಕೆಲಸವನ್ನು ಹೆಂಗಸರು ಮಾಡುವ ದುಸ್ಥಿತಿ ಬರಬಾರದಿತ್ತು! ಇದಕ್ಕೆ ಖಾದಿ ಕೆಲಸವೇ ಮದ್ದು” ಎನ್ನುತ್ತಿದ್ದರಂತೆ.

‘ರಾಟೆ ಬರಗಾಲಕ್ಕೆ ಒಂದು ವಿಮೆ ಮಾಡಿದಂತೆ’ ಎಂದು ಹೇಳಿ ಎಲ್ಲೆಲ್ಲೂ ರಾಟೆಯು ತಿರುಗಿಸುವಂತಾಗಬೇಕು. ಇದರಿಂದ ಸ್ವದೇಶಿಯು ಬೆಳೆಯುತ್ತದೆ. ಪ್ರತಿಯೊಂದು ಮನೆಯಲ್ಲೂ ರಾಟೆ ತಿರುಗಿದರೆ ಈ ವರ್ಷದೊಳಗಾಗಿಯೇ ಸ್ವರಾಜ್ಯ ಸ್ಥಾಪನೆ ಆಗುತ್ತದೆ’ ಎಂಬ ನಂಬಿಕೆ ನನಗಿದೆ ಎನ್ನುತ್ತಿದ್ದರು ಗಾಂಧೀಜಿ.

೧೯೨೧ನೇ ಅಕ್ಟೋಬರಿನಲ್ಲಿ ಗಾಂಧೀಜಿ ಮದರಾಸು ಪ್ರಾಂತ್ಯದಲ್ಲಿ ಸಂಚರಿಸಿ ಬಳ್ಳಾರಿಗೆ ಬಂದರು. ಇಲ್ಲಿಂದ ತಮಿಳುನಾಡಿಗೆ ಹೋದರು. ಇಲ್ಲಿಯೇ ಗಾಂಧೀಜಿ ಧೋತ್ರ ಧರಿಸುವುದನ್ನು ಬಿಟ್ಟರು. ಬದಲಿಗೆ ತುಂಡು ಪಂಚೆಯನ್ನು ಉಡಲು ನಿರ್ಧರಿಸಿದರು. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನಕ್ಕೆ ಅಧ್ಯಕ್ಷರಾದರು. ಅದೇ ಮೊದಲು ಅದೇ ಕೊನೆ ಆಗಬೇಕೆ? ಡಾ|| ಹಾರ್ಡಿಕರ್ ಸ್ವಯಂಸೇವಕರ ನಾಯಕ, ಎಚ್. ಕೆ. ವೀರಣ್ಣಗೌಡ, ನಿಜಲಿಂಗಪ್ಪ, ವಿ. ವೆಂಕಟಪ್ಪ, ಪಟ್ಟಾಭಿ ಸೀತಾರಾಮಯ್ಯ, ಸಾಹುಕಾರ್ ಚನ್ನಯ್ಯ, ಎಚ್. ಸಿ. ದಾಸಪ್ಪ, ಟಿ. ಮರಿಯಪ್ಪ, ಚಂಗಲರಾಯರೆಡ್ಡಿ, ತಗಡೂರು ರಾಮ ಚಂದ್ರರಾವ್, ಮೈಸೂರು ತಾತಯ್ಯ, ಕೆ. ಟಿ. ಬಾಷ್ಯಂ, ಎಂ. ಎನ್. ಜೋಯಿಸ್, ಕೆ. ಕೆಂಚಪ್ಪ, ಗೋಪಾಲ್‌ಸ್ವಾಮಿ ಅಯ್ಯರ್ ಇನ್ನೂ ಮುಂತಾದ ದೇಶಭಕ್ತರು ಖಾದಿ ವಸ್ತ್ರಧಾರಿಗಳಾದರು.

ಈ ಸಮ್ಮೇಳನದಲ್ಲಿ ಗಾಂಧೀಜಿ ಅಧ್ಯಕ್ಷ ಭಾಷಣದಲ್ಲಿ ಪರದೇಶಿ ವಸ್ತ್ರ ಬಹಿಷ್ಕಾರ ಹಿಂದೂ ಮುಸಲ್ಮಾನರ ಐಕ್ಯತೆಗೆ ಶ್ರಮಿಸು ವಂತೆ ರಾಷ್ಟ್ರೀಯ ಶಾಲೆಗಳನ್ನು ಬೆಳೆಸು ವಂತೆ” ತಿಳಿಸಿದರು.

ಗಾಂಧೀಜಿ ಅವರು ತಂಗಿದ್ದ ಬಿಡಾರ ವನ್ನು ಅಂದು ಬೆಳಗಾವಿಯಲ್ಲಿ ಖಾದಿಯಿಂ ಸುಂದರವಾಗಿ ಅಲಂಕಾರ ಮಾಡಿದ್ದರು ಇದನ್ನು ನೋಡಿದ ಗಾಂಧೀಜಿ “ನಾನ ಕೇಳಿದ್ದು ಒಂದು ಗುಡಿಸಲು, ನನಗೆ ದೊ ತದ್ದು ಖಾದಿ ಅರಮನೆ” ಎಂದರು.

೧೯೨೭ರಲ್ಲಿ ಗಾಂಧೀಜಿ ನಂದಿಬೆಟ್ಟದ ವಿಶ್ರಾಂತಿ ಪಡೆಯುತ್ತಿದ್ದ ಸಮಯ ಓರ್ವ ಅಧಿಕಾರಿ ಗಾಂಧೀಜಿಯವರನ ಬಡವರಲ್ಲಿ ಆಧ್ಯಾತ್ಮಿಕ ಅವಶ್ಯಕತೆಯನ ತಮ್ಮಂಥವರು ತುಂಬಬೇಕೆಂದೂ ತಿಳಿ ಹೆ ದರು. ಆಗ ಗಾಂಧೀಜಿ—“ವಿದ್ಯಾವಂತರ ಆಧ್ಯಾತ್ಮಿಕ ಚಿಂತನೆ ಬೇಕು. ಅಲ್ಲದೆ ರಾ

ಯಿಂದ ನೂತು ಖಾದಿ ಧರಿಸುವುದರಿಂದ ದೀನದಲಿತರಲ್ಲಿ ಅವರಿಗೆ ಸಹಾನುಭೂತಿ ಪ್ರಕಟವಾಗುತ್ತದೆ. ದೀನದಲಿತರ ಪಾಲಿಗೆ ಆರ್ಥಿಕ ಚಿಂತನೆಯೇ ಆಧ್ಯಾತ್ಮಿಕ ವಿಷಯ. ತಿನ್ನಲು ಇಲ್ಲದೆ ಸಾಯುವ ಈ ಜನರಿಗೆ ಬೇರೆ ಯಾವ ಬಗ್ಗೆ ಪ್ರಚೋದನೆಯೇ ಇಲ್ಲ. ಅವರ ಮುಂದೆ ಅನ್ನವನ್ನು ನೀಡಿ. ನಿಮ್ಮನ್ನು ದೇವರು ಎನ್ನುತ್ತಾರೆ ಅಲ್ಲವೆ ?" ಎಂದರು.

ಗಾಂಧೀಜಿ ಅವರನ್ನು ಭೇಟಿಮಾಡಲು ಬಂದವರು ಖಾದಿಯುಡುಗೆಯಲ್ಲಿ ಇದ್ದರೆ ಮಾತ್ರ ಅವಕಾಶ ದೊರೆಯುತ್ತಿತ್ತು. ಒಮ್ಮೆ ಅವರಿಗೆ ಕ್ಷೌರ ಮಾಡಲು ಓರ್ವ ವ್ಯಕ್ತಿ ಬಂದ. ಆತನು ಖಾದಿ ಧರಿಸಿದ್ದ. ಆಗ ಅನುಮಾನಿಸಿದ ಗಾಂಧಿ ಕೇಳಿದರು. "ನಿನಗೆ ಯಾರು ಈ ಬಟ್ಟೆ ಕೊಟ್ಟರು ?" ಎಂದು. "ತಮ್ಮ ಸೇವೆಗೆಂದೇ ನಾನೇ ಹೊಲಿಸಿ ಕೊಂಡೆ" ಎಂಬ ಉತ್ತರದಿಂದ ಗಾಂಧೀಜಿ ಸುಪ್ರೀತರಾದರು. ಯಾರೇ ಅವರನ್ನು ಭೇಟಿ ಮಾಡಲು ಬಂದರೂ ಖಾದಿಯ ಬಗ್ಗೆ ಮಾತನಾಡದೆ ಇರುತ್ತಿರಲಿಲ್ಲ. ಅಂದು ದಿವಾನ ರಾಗಿದ್ದ ಮಿರ್ಜಾ ಇಸ್ಮಾಯಿಲ್, ಹಿಂದಿನ ದಿವಾನರಾಗಿದ್ದ ವಿಶ್ವೇಶ್ವರಯ್ಯ, ಸಹಕಾರ ಸಂಘದ ರಿಜಿಸ್ಟ್ರಾರ್ ಕೆ. ಹೆಚ್. ರಾಮಯ್ಯ ಒಟ್ಟಿಗೆ ಗಾಂಧೀಜಿ ಅವರನ್ನು ಭೇಟಿ ಮಾಡಿದರು. ಖಾದಿ ಮತ್ತು ರಾಟೆಗಳನ್ನು ರಾಜ್ಯದಲ್ಲಿ ಸ್ಥಾಪಿಸುವ ಬಗ್ಗೆ ಚರ್ಚೆ ನಡೆಸಿದರು. ಅದಕ್ಕೆ ಒಪ್ಪಿಗೆ ನೀಡಿದ ಅಧಿಕಾರಿಗಳು ಖಾದಿ ತೊಡುವಂತೆ ಪ್ರೋತ್ಸಾಹಿಸುವುದಾಗಿ ಭರವಸೆ ನೀಡಿದರು.

"ದೀನದಲಿತರನ್ನು ಕಾಪಾಡಲು 'ಪತಿತ ಪಾವನ ಸೀತಾರಾಂ' ಎಂದು ಪ್ರಾರ್ಥನೆ ಮಾಡುತ್ತೇವೆ. ಆ ಪತಿತರನ್ನು ಕಾಪಾಡುವ ದೇವರನ್ನು ಪ್ರಾರ್ಥಿಸುತ್ತೇವೆ. ನೀವು ಖಾದಿ ಧರಿಸಿ—ಅದು ಅವರನ್ನು ಕಾಪಾಡುತ್ತದೆ" ಎಂದು ತುಂಬಿದ ಸಭೆಗಳಲ್ಲಿ ಹೇಳಿ ಎಲ್ಲರ ಮನಸ್ಸನ್ನು ಖಾದಿ ಕಡೆ ಸೆಳೆಯುತ್ತಿದ್ದರು. ಮಹಿಳೆಯರು ಅವರನ್ನು ನೋಡಲು ಬಂದರೆ ಖಾದಿ ಉಡುಪಿನಲ್ಲೇ ಕಾಣಬೇಕು. ಅಧ್ಯಾಪಕರು ವಿದ್ಯಾರ್ಥಿಗಳಿಗೆ ಖಾದಿ ಧರಿಸುವಂತೆ ಒತ್ತಾಯಿಸಲು ಸೂಚಿಸುತ್ತಿದ್ದರು.

ಗಾಂಧೀಜಿ ಬಳಿ ಅವರ ಹಸ್ತಾಕ್ಷರ ಪಡೆಯಲು ಯಾರೇ ಬರಲಿ ಅವರು ಖಾದಿ ಬಳಸುವ ಭರವಸೆಯ ಮಾತು ಕೊಡಬೇಕು. ಪ್ರತಿದಿನ ಅರ್ಧ ತಾಸು ನೂಲುತ್ತೇನೆಂದು ಖಾದಿ ನಿಧಿಗಾಗಿ ಗಾಂಧೀಜಿ ಮುಂದೆ ದಿ|| ಪಂಡಿತ ತಾರಾನಾಥರು ನಾಟಕ ಒಂದರಲ್ಲಿ ನಟಿಸಿ ಅವರ ಮೆಚ್ಚುಗೆ ಪಡೆದರು.

ಗಾಂಧೀಜಿ ಮೈಸೂರಿಗೆ ಬಂದಾಗ ಮಹಾರಾಜರೂ, ಸಾರ್ವಜನಿಕರು ನಿಧಿ ಸಂಗ್ರಹಿಸಿಕೊಟ್ಟರು. ರಾಜರು ನೂಲುವ ವಿಚಾರವನ್ನು ಸಭೆಯಲ್ಲಿ ಹೇಳಿ ತಮ್ಮ ಸಂತೋಷ ವ್ಯಕ್ತಪಡಿಸಿದರು. ಅರಮನೆಯ ಒಳಗೂ ಖಾದಿ ಆವರಿಸಿತು. ನಾಲ್ವಡಿ ಕೃಷ್ಣರಾಜ ಒಡೆಯರ ಆಹ್ವಾನದ ಮೇರೆಗೆ ಗಾಂಧೀಜಿ ಅರಮನೆಗೆ ಭೇಟಿ ಕೊಟ್ಟಾಗ ಮಖಮಲ್ ರತ್ನಗಂಬಳಿ ಬದಲು ಎಲ್ಲೆಲ್ಲೂ ಖಾದಿಮಯ; ರಾಜರೂ ಖಾದಿ ಉಡುಪಿನಲ್ಲಿದ್ದರು. ಸಂತೋಷಗೊಂಡ ಗಾಂಧೀಜಿ ರಾಜರಿಗೆ ಒಂದು ರಾಟೆಯನ್ನು ನೀಡಿದರು. ಅದರ ಫಲವಾಗಿ ಸರಕಾರದ ನೌಕರರು ಖಾದಿ ಬಳಸಲು ರಾಜಾಜ್ಞೆ ಹೊರಟಿತು. ಗಾಂಧೀಜಿ ಪ್ರಭಾವದಿಂದ ಬಂದೀಖಾನೆಯಿಂದ ಭವ್ಯ ಅರಮನೆಯ ತನಕವೂ ಖಾದಿಯ ಮಹತ್ವ ಕಾಣುವಂತಾಯಿತು. ತಗಡೂರು, ಬದನ

ವಾಳು, ಮದ್ದೂರು, ಶ್ರೀರಂಗಪಟ್ಟಣ, ಮಂಡ್ಯ, ಎಡತೊರೆ ಕಡೆ ಪ್ರವಾಸ ಮಾಡಿ ಖಾದಿ ಪ್ರಚಾರ ಕೈಕೊಂಡರು. ಜೊತೆಗೆ ಅಸ್ಪೃಶ್ಯನಿವಾರಣೆ ಬಗ್ಗೆ, ಗೋಮಾಂಸ ನಿಷೇಧ, ಗೋಹತ್ಯ ಮಾಡದಂತೆ, ಹೆಂಡ ಕುಡಿಯದಂತೆ ಸೂಚನೆ ನೀಡಿದರು.

ಮೈಸೂರು ರಾಜ್ಯಕ್ಕೆ ಗಾಂಧೀಜಿ ಬಂದು ಹೋದ ಮೇಲೆ ಖಾದಿಗೆ ಅಗ್ರಸ್ಥಾನ. ಗ್ರಾಮೋದ್ಯೋಗ, ಗೃಹಕೈಗಾರಿಕೆ, ಶಿಕ್ಷಣ ಮೊದಲಾದ ಯೋಜನೆಗಳು ತಲೆ ಎತ್ತಿದವು.

ಗಾಂಧೀಜಿ ಅವರ ಪ್ರವಾಸದಿಂದ ಪ್ರಚೋದನೆಗೊಂಡ ಹಲವಾರು ಜನರು ವಿದೇಶಿ ವಸ್ತ್ರದಹನ ಮಾಡಿ ಖಾದಿ ಧಾರಿಗಳಾದರು! ಖಾದಿ ಬಟ್ಟೆಯ ಬೇಡಿಕೆ ಹೆಚ್ಚಿತು. ಅವುಗಳ ತಯಾರಿಕಾ ಕೇಂದ್ರಗಳು ಗದಗ, ಹುಬ್ಬಳ್ಳಿ, ಬೆಟಗೇರಿ, ಬಿಜಾಪುರ, ಬದನವಾಳು, ತಗಡೂರು, ಐಮಂಗಲಗಳಲ್ಲಿ ಖಾದಿ ಉತ್ಪಾದನಾ ಕೇಂದ್ರಗಳನ್ನು ತೆರೆಯಲಾಯಿತು. ಆಗ ಮುಖ್ಯವಾಗಿ ತಗಡೂರಿನಲ್ಲಿ ರಾಮಚಂದ್ರರಾವ್, ಐಮಂಗಲದಲ್ಲಿ ರಾಜರಾಮ, ಉತ್ತರ ಕರ್ನಾಟಕದ ಕಡೆ ಕೌಜಲಗಿ ಹನುಮಂತರಾಯರು ಖಾದಿ ಕೇಂದ್ರ ಸ್ಥಾಪಿಸಿ ದುಡಿದ ಪ್ರಮುಖರು.

೧೯೪೩ರಲ್ಲಿ ಗಾಂಧೀಜಿ ಅವರು ವಿಶ್ವದ ಪ್ರಸಿದ್ಧ ಉದ್ಯಮಿಯಾಗಿ ಹೆಸರಾಗಿದ್ದ ಅಮೇರಿಕದ ಹೆನ್ರಿಫೋರ್ಡ್ ಅವರಿಗೆ ನೂಲುವ ಚರಕವನ್ನು ನೆನಪಿಗಾಗಿ ಕಳಿಸಿ ಕೊಟ್ಟಿದ್ದರು. ಗಾಂಧೀಜಿ ಅವರ ಗ್ರಾಮೀಣ ಸ್ವಯಂ ಉದ್ಯೋಗ ನೀತಿಯನ್ನು ಮೆಚ್ಚಿಕೊಂಡವರಲ್ಲಿ ಫೋರ್ಡ್ ಒಬ್ಬರಾಗಿದ್ದರು.

ಗಾಂಧಿ-ಚರಕ :

ಗಾಂಧೀಜಿ ಚರಕದ ಬಗ್ಗೆ ಎ ಭಾವನೆ ತಾಳಿದ್ದರು. ಎಂಬುದಕ್ಕೆ ಒ ನಿದರ್ಶನ ಕೊಡಬಹುದು.

ಸಾಮ್ಯವಾದಿಯೊಬ್ಬ ಗಾಂಧಿ ಅವರನ್ನು ಭೇಟಿ ಮಾಡಿ ನಿಮ್ಮ ಗ್ರಾಮ ದ್ಯೋಗ ಚಳವಳಿ ಯಂತ್ರಕುಲಕ್ಕೆ ಯಿಟ್ಟ ರಾಮಬಾಣದಂತಿದೆ!" ಎ ಕೇಳಿದ.

ಆಗ ಗಾಂಧೀಜಿ ನೂಲುತ್ತಿದ್ದರು. ರಾಟಿಯೇ ಒಂದು ಯಂತ್ರವಲ್ಲವೆ ಎಂದರು.

'ನಾನು ಹೇಳಿದ್ದು ಈ ಯಂತ್ರ ಭಾರಿ ಯಂತ್ರ' ಎಂದ ಆತ.

'ಏನು ಸಿಂಗರ್ ಹೊ ಯಂತ್ರವೇ ! ಅದು ಗ್ರಾಮೋದ್ಯೋಗ ಬರುತ್ತದೆ. ಜನರ ಬಾಯಿಗೆ ಮಣ್ಣು ಹ ಅವರಿಗೆ ಕೆಲಸ ತಪ್ಪಿಸದೆ ನಾಲ್ಕು ಹೆಚ್ಚಾಗಿ ಕೊಡಿಸುವ ಯಾವ ಯಂತ್ರ ದರೂ ಸರಿ. ಆದರೆ ಮನುಷ್ಯ ಅದ ತನ್ನ ಹಿಡಿತದಲ್ಲಿಟ್ಟುಕೊಳ್ಳುವಂತಿರಬೇ ಹಾಗೇ ಅದಕ್ಕೆ ಅಡ್ಡಿಯಾಗಬಾರ ಎಂದರು ಗಾಂಧೀಜಿ. ಸೋಮಾರಿತನಕ್ಕೆ ಯಂತ್ರ ರಾಟೆಯಲ್ಲಿದೆ? ನೋ ನಿನ್ನೊಂದಿಗೆ ಮಾತಾಡುತ್ತಾ ನಾ ಕಾಸು ದೇಶಕ್ಕೆ ಲಾಭ ಮಾಡಿದೆ. ಯಾರ ಮಾಡಿದರೂ ಯಂತ್ರ (ರಾಟೆ) ನಿಲ್ಲ ಎಂದರು.

ಒಮ್ಮೆ ನಂದಿ ಬೆಟ್ಟದಲ್ಲಿ ವಿಶ್ರಾಂತಿ ಯುತ್ತಿದ್ದಾಗ ಗಾಂಧೀಜಿ ಅವರ ಭೇ ಮೈಸೂರು ರಾಜ್ಯದ ಉನ್ನತಾಧಿ

ತೊಬ್ಬರು ಬಂದಿದ್ದರು. "ಬಡವರಿಗೆ ಧ್ಯಾತ್ಮಿಕ ಅವಶ್ಯಕತೆ ಇದೆ. ಇದನ್ನು ಟ್ಟು ಆರ್ಥಿಕ ಚಿಂತನೆ ಬಗ್ಗೆ ಏಕೆ ಒತ್ತಿ ಳುತ್ತೀರಿ ನೀವು?" ಎಂದು ಕೇಳಿದರು.

"ನೀವು ಹೇಳುವುದು ವಿದ್ಯಾವಂತರ ಷಯದಲ್ಲಿ ಸರಿ ಇರಬಹುದು. ರಾಟೆಯ ರ್ಥಿಕ ಅಂಶವನ್ನು ಅಂಥವರಿಗೆ ಹೇಳು ವುದೇ ಇಲ್ಲ ನಾನು. ನೂಲನ್ನು ನೂತು ಖಾದಿಯನ್ನು ಧರಿಸಿದ ಮಾತ್ರಕ್ಕೆ ಅವರಿಗೆ ಬಡವರಲ್ಲಿರುವ ಸಹಾನುಭೂತಿಯನ್ನು ತೋರಿಸಿದ ಹಾಗೆ. ಬಡವರಿಗೆ ಹಾಗಲ್ಲ. ಬಡವರಿಗೆ ಅರ್ಥವೇ ಆಧ್ಯಾತ್ಮ ಹಸಿವಿನಿಂದ ಕಂಗಾಲಾಗಿರುವ ಜನಕೋಟಿಗೆ ಬೇರೆ ಯಾವುದೂ ಸೇರದು. ಅದರ ಬದಲು ಅನ್ನ ವನ್ನು ಅವರಿಗೆ ನೀಡಿದರೆ ನಿಮ್ಮನ್ನು ದೇವ ರಂತೆ ಕಂಡಾರು. ಅಲ್ಲವೆ?" ಎಂದು ಉತ್ತ ರಿಸಿದರು.

'ವಿಶ್ರಾಂತಿ ಪಡೆಯಿರಿ' ಎಂದು ಹೇಳಿ ಅಲ್ಲಿಂದ ಹೋಗುವುದರಲ್ಲಿದ್ದ ವ್ಯಕ್ತಿಯಕಡೆ ತಿರುಗಿ ಗಂಧೀಜಿ "ನನಗೆ ಎಲ್ಲಿಯ ವಿಶ್ರಾಂತಿ! ರಾಟೆಯ ಮಾತು ಬಂದರೆ ನಾನು ಹೇಗೆ ತಡೆಯಲಿ? ಯಾರಾದರು ಆ ಬಗ್ಗೆ ಕೇಳಿದರೆ ಒಳಗಿನಿಂದ ಒಂದು ಜ್ವಾಲಾಮುಖಿಯೇ ರ್ಭಗ್ ಎನ್ನುತ್ತದೆ. ಇದು ರಾಷ್ಟ್ರದ ರೋಗ ಇದರ ಮುಂದೆ ನನ್ನ ಖಾಯಿಲೆ ಏನು ಮಹಾ?" ಎಂದರು.

ಇದೇ ಸಂದರ್ಭದಲ್ಲಿ ಬೆಂಗಳೂರಿಂದ ಮೆಥಾಡಿಸ್ಟ್ ಮಿಷನ್ನಿನ ಶಾಲಾ ವಿದ್ಯಾರ್ಥಿ ನಿಯರು ನಂದಿಬೆಟ್ಟಕ್ಕೆ ಪ್ರವಾಸ ಬಂದಿ ದ್ದರು. ಅವರಿಗೆ "ಖಾದಿ ಎಂದರೆ ಕೈ ನೂಲಿನ ಬಟ್ಟೆ, ಅದನ್ನು ನೂಲುವವರು ಬಡವರು" ಅದನ್ನು ನೀವೆಲ್ಲಾ ಕೊಂಡು ಧರಿಸಿದರೆ ಅವರಿಗೆ ಒಂದೆರಡು ಕಾಸು ಸಿಗು ತ್ತದೆ, ಅದಕ್ಕೆ ಅವರು ಉಪ್ಪೋ ಮೆಣಸಿನ ಕಾಯೋ, ಕಾಯಿಪಲ್ಯವೋ ಕೊಳ್ಳುತ್ತಾರೆ, ನೀವೂ ನೂಲಬೇಕು" ಎಂದು ಹೇಳಿ ಆ ಪುಟ್ಟ ಮಕ್ಕಳ ಮನಮುಟ್ಟುವಂತೆ ತಿಳಿಸಿ ದ್ದರು.

ಇದೇ ಸಂದರ್ಭದಲ್ಲಿ ಓರ್ವ ಪಾದ್ರಿ ಗಾಂಧೀಜಿ ಅವರನ್ನು ಭೇಟಿ ಮಾಡಲು ಬಂದಿದ್ದರು. ಈತ ಯಂತ್ರನಾಗರೀಕತೆಯ ಪ್ರೇಮಿ!

'ಗಿರಣಿಗಳ ಮುಂದೆ ಕೈನೂಲು ನಿಂತೀತೇ" ಎಂಬ ಅಪಸ್ವರ ಈತನದು. ಅದಕ್ಕೆ ಗಾಂಧೀಜಿ ಉತ್ತರ "ರಾಟೆ ಸಾರ್ವತ್ರಿ ಕವಾದರೆ ಉಪವಾಸ ಬೀಳುವುದು ಕೊನೆ ಗೊಳ್ಳುತ್ತದೆ. ವಿದೇಶಿ ಬಟ್ಟೆಯನ್ನು ತಪ್ಪಿಸಿ ದರೆ ಶತಕೋಟಿ ಹಣ ನಮ್ಮಲ್ಲೇ ಉಳಿಯು ತ್ತದೆ. ನೂಲುವುದು, ನೇಯುವುದು ದೃಢ ವಾಗಿ ಆದರೆ ಅದರ ಸುತ್ತಲೂ ಉದ್ಯೋಗ ಗಳು ಬೆಳೆಯುತ್ತವೆ. ಜೊತೆಗೆ ಕರಕುಶಲಿ ಗಳೂ ಸುಖವಾಗಿ ಬಾಳುತ್ತಾರೆ. ಎಲ್ಲ ಹಳ್ಳಿ ಗಳ ಪುನರ್ನಿರ್ಮಾಣವಾಗುತ್ತದೆ' ಎಂದರು.

"ಸ್ವದೇಶಿ ಗಿರಣಿ ಬಟ್ಟೆ ಏಕೆ ಬೇಡ?' ಅಂದರೆ ನಿರುದ್ಯೋಗವನ್ನು ತೊಲಗಿಸಲು. ಶೋಷಕ ಜನಾಂಗವನ್ನು ಪ್ರೋತ್ಸಾಹಿಸಲು ಸ್ವದೇಶಿ ಬಟ್ಟೆ ಬಳಸಬೇಕು. ಇದರಿಂದ ಕೆಲವೇ ಶ್ರೀಮಂತ ವರ್ಗದ ಹಿಡಿತದಲ್ಲಿರುವ ಗಿರಣಿ ಮಾಲೀಕರಿಂದ ದೀನದಲಿತ ಕಾರ್ಮಿ ಕರ ಶೋಷಣೆ ತಪ್ಪೀತು! ಶ್ರೀಮಂತ ಬಡವ ಎಂಬ ಅಸಮಾನತೆ ಹೋಗಲಾಡಿಸಲು ಈ ಖಾದಿ ಬಹು ಪ್ರಮುಖ ಪಾತ್ರ

ವಹಿಸುತ್ತದೆ. ವಿಜಾಪುರ ಜಿಲ್ಲೆ ಬರಗಾಲ ಪೀಡಿತವಾದಾಗ ಐದು ಸಾವಿರ ರಾಟೆಗಳನ್ನು ಹಂಚುವ ಯೋಜನೆ ಮಾಡಲಾಗಿತ್ತು. ಚರಕಾ ಸಂಘ ಮಾಡಿದ ಕೆಲಸವನ್ನು ಗಾಂಧೀಜಿ ಬಹಳವಾಗಿ ಮೆಚ್ಚಿಕೊಂಡಿದ್ದರು. ಉತ್ತರ ಕನಾವಟದಲ್ಲಿ ಗಾಂಧೀಜಿ ಸಂಚಾರ ಮಾಡಿ ಖಾದಿ ಪ್ರಚಾರ ಮಾಡಿದ್ದು ಕನ್ನಡಿಗರು ಮರೆಯುವಂತಹದಲ್ಲ.

ಒಮ್ಮೆ ಭಾರತದ ದಂಡನಾಯಕ ಜನರಲ್ ಕಾರಿಯಪ್ಪನವರು ಗಾಂಧೀಜಿ ಅವರನ್ನು ಭೇಟಿ ಮಾಡಿದ್ದರು. ಭಾರತದ ಅಂದಿನ ಸ್ಥಿತಿ ಬಗ್ಗೆ ಲಂಡನ್ನಿನಲ್ಲಿ ಒಂದು ಹೇಳಿಕೆ ನೀಡಿದ್ದರು. ಅದು ತಪ್ಪು ಎಂದು ಗಾಂಧೀಜಿ 'ಹರಿಜನ' ಪತ್ರಿಕೆಯಲ್ಲಿ ಟೀಕಿಸಿದ್ದರು. ಕಾರಿಯಪ್ಪನವರಿಗೆ ತಮ್ಮ ತಪ್ಪು ಒಪ್ಪಿಗೆಯೇ ಈ ಭೇಟಿಯ ಸಂದರ್ಭವಾಗಿತ್ತು. "ಅಹಿಂಸೆ ಏನೂ ಮಾಡದು. ಬಲವಾದ ದಂಡಿದ್ದರೇನೇ ಪ್ರಮುಖ ರಾಷ್ಟ್ರವಾದೀತು' ಎಂಬ ತಮ್ಮ ಹೇಳಿಕೆ ತಪ್ಪಾಯಿತು. ಯುದ್ಧಗಳಿಂದ ಯಾವುದೂ ಬ
ಹರಿಯಲಾರದು. ಶಾಂತಿ ಅಹಿಂಸೆಯೊಂದೆ
ಇದಕ್ಕೆ ಸೂಕ್ತ ಮಾರ್ಗ" ಎಂಬ ದಂ
ನಾಯಕರ ಮಾತು ಕೇಳಿ ಗಾಂಧೀಜಿ ಅಚ್ಚ
ಗೊಂಡರು. ಅಗಲೂ ನೂಲುತ್ತಲೇ ಉತ್ತ
ಸುತ್ತಿದ್ದರು.

"ತಾವು ಕಾಶ್ಮೀರಕ್ಕೆ ಹೋಗಿ ಬನ್ನಿ ಅ
ಶಾಂತ ವಾತಾವರಣ ನಿರ್ಮಿಸಿ ಬನ್ನಿ
ಎಂದರು ಬಾಪೂಜಿ.

ಕಾರಿಯಪ್ಪನವರು ಕಾಶ್ಮೀರಕ್ಕ
ಹೋದರು. ಅಲ್ಲೆಲ್ಲಾ ಸಮರದ ಬದಲ
ಜನರಲ್ಲಿ ಸಮರಸ ವಾತಾವರಣ ಕಲ್ಪಿ
ಹಿಂದಿರುಗಿದರು. ಗಾಂಧೀಜಿ ಅವರನ
ಭೇಟಿಮಾಡಲು ಕಾರಿಯಪ್ಪನವ
ಹೋದಾಗ ಅವರಿಗೆ ದೊರೆತದ್ದು ಗಾಂಧಿ
ಕಳೇಬರಹ ಮಾತ್ರ. ಶ್ರೀ ಸಾಮಾನ್ಯರಿ
ದಂಡನಾಯಕರವರೆಗೆ ಗಾಂಧೀಜಿ ಅ
ಪ್ರಭಾವಕ್ಕೆ ಒಳಗಾದವರೇ ಹೆಚ್ಚು. ಆದ
ಗಾಂಧೀಜಿ ಅವರ ಖಾದಿ ಪ್ರಚಾರದ ಕನ
ಅಷ್ಟಾಗಿ ನನಸಾಗಲಿಲ್ಲ.

ತನಗೆ ಅಗತ್ಯವಿದ್ದಷ್ಟನ್ನು ಮಾತ್ರ ಪಡೆಯುವುದು ಧರ್ಮ. ಆದಕ್ಕಿಂತ ಹೆಚ್ಚಾಗಿ ಪಡೆದರೆ ಕಳ್ಳತನ ಮಾಡಿದಂತೆಯೇ.

ಸತ್ಯವೇ ದೇವರು ದೇವರೇ ಸತ್ಯ.

—ಗಾಂಧೀಜಿ

ವೀರಾಂಗನೆ ಕಸ್ತೂರಿಬಾ

ಎನ್. ಮಂಜುನಾಥ
೨೬ ಎ, ೨ ನೇ ಮುಖ್ಯರಸ್ತೆ, ೧೬ ನೇ ತಿರುವು
ವಿದ್ಯಾರಣ್ಯಪುರ ಮೈಸೂರು–೫೭೦ ೦೦೮

೧೯೨೦ ರಲ್ಲಿ ಮಹಾತ್ಮ ಗಾಂಧೀಜಿಯವರು ಭಾರತದಲ್ಲಿ ಆಡಳಿತಾರೂಢರಾಗಿದ ಬ್ರಿಟಿಷರ ಆಳ್ವಿಕೆಯನ್ನು ವಿರೋಧಿಸಿ, 'ಅಹಿಂಸಾತ್ಮಕ ಸತ್ಯಾಗ್ರಹದ ಹೋರಾಟ ಆರಂಭಿಸಿದ್ದರು. ಫಲವಾಗಿ ೧೯೨೨ ರಲ್ಲಿ ಬ್ರಿಟಿಷ್ ಸರ್ಕಾರ ಗಾಂಧೀಜಿಯವರಿಗೆ ೬ ವರ್ಷ ಸೆರೆಮನೆವಾಸ ಶಿಕ್ಷೆ ವಿಧಿಸಿತು.

ಈ ಸಮಾಚಾರ ಕಾಡ್ಗಿಚ್ಚಿನಂತೆ ಭಾರತದೆಲ್ಲೆಡೆ ಹಬ್ಬಿತು. ಕಸ್ತೂರಿ ಬಾ ಒಬ್ಬ ವೀರಾಂಗನೆಯಂತೆ ಈ ಘಟನೆಯನ್ನು ಸಹಿಸಿಕೊಂಡರು. ಆ ಸಂದಿಗ್ಧ ಪರಿಸ್ಥಿತಿಯಲ್ಲಿ ಅವರು ಭಾರತೀಯರಿಗೆ ನೀಡಿದ ಸಂದೇಶ ಹೀಗಿತ್ತು.

"ನನ್ನ ಪತಿಯವರಿಗೆ ಆರು ವರ್ಷ ಕಾರಾಗೃಹವಾಸದ ಶಿಕ್ಷೆ ಬ್ರಿಟಿಷರು ವಿಧಿಸಿದ್ದಾರೆ. ಈ ಶಿಕ್ಷೆ ಉಗ್ರವಾದುದೇ. ಇದರಿಂದ ನನಗೂ ಮಾನಸಿಕವಾಗಿ ನೋವುಂಟಾಗಿದೆ. ಆದರೆ ಈ ಸಮಯದಲ್ಲಿ, ನಾವು ದುಃಖಿಗಳಾದರೆ, ವ್ಯಥೆಪಟ್ಟರೆ ನಮ್ಮ ಆತ್ಮಸ್ಥೈರ್ಯ ಕುಗ್ಗುವುದು, ಅಧೀರರನ್ನಾಗಿಸುವುದು. ಆದ್ದರಿಂದ ನಾವೆಲ್ಲರೂ ಸಂಯಮ ಕಳೆದುಕೊಳ್ಳದೆ ಒಟ್ಟಾಗಿ ಬಾಪೂಜಿಯವರು ತೋರಿದ ರಚನಾತ್ಮಕ ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳೋಣ. ಹೇಗೆಂದರೆ ೧) ಖಾದಿಬಟ್ಟೆ ಧರಿಸುವುದು. ೨) ಸ್ವದೇಶಿ ವಸ್ತುಗಳನ್ನು ಬಳಸುವುದು. ೩) ವಿದೇಶಿ ವಸ್ತ್ರಗಳನ್ನು ತ್ಯಜಿಸುವುದು. ೪) ದುಶ್ಚಟಗಳಿಂದ ದೂರವಿರುವುದು. ೫) ಸತ್ಕಾರ್ಯಗಳಲ್ಲಿ ತೊಡಗುವುದು. ೬) ಮಾನವೀಯ ಗುಣಗಳಿಗೆ ಸಂಚಕಾರಿಗಳಾದ ದ್ವೇಷ ಈರ್ಷ್ಯೆ ತ್ರಿಕರ್ಣ ಶುದ್ಧಿಗೆ ವಿರುದ್ಧವಾಗಿ ನಡೆದುಕೊಳ್ಳದಿರುವುದು. ಆಗಲೇ ಗಾಂಧೀಜಿಯವರಿಗೆ ಸಂತೋಷವಾಗುವುದು. ಆಗ ಸತ್ಪಥಿಕ ಭಾರತೀಯರ ಅಹಿಂಸಾತ್ಮಕ ಹೋರಾಟಕ್ಕೆ ಬ್ರಿಟಿಷರು ಗೌರವ ನೀಡಿ, ಗಾಂಧೀಜಿಯವರಿಗೆ ವಿಧಿಸಿರುವ ಜೈಲು ಶಿಕ್ಷೆ ಕಡಿಮೆಯಾಗಿ ಶೀಘ್ರದಲ್ಲಿಯೇ ಬಿಡುಗಡೆ ಹೊಂದುವರು.

'ಬಾ' ಅವರು ಸ್ಥಿತಪ್ರಜ್ಞರಾಗಿ ಭಾರತೀಯ ಜನತೆಗೆ ನೀಡಿದ ಸಂದೇಶ ಭಾರತೀಯರನ್ನು ಕ್ರಿಯಾಶೀಲರನ್ನಾಗಿಸಿತು. ದೇಶದೆಲ್ಲೆಡೆ 'ಖಾದಿ ಮತ್ತು ಚರಕ'ದ ಪ್ರಚಾರ ಹಬ್ಬಿತು. ಜನತೆ ವಿದೇಶಿ ವಸ್ತ್ರಗಳಿಗೆ ಮಾರುಹೋಗದೆ, ಧೂಮಪಾನ, ಮದ್ಯಪಾನ, ಇತ್ಯಾದಿ ದುಶ್ಚಟಗಳಿಂದ ದೂರವಾಗಿ, ಜಾಗೃತರಾದರು.

'ಬಾ' ಅವರು ಹಳ್ಳಿ-ನಗರಗಳಿಗೆ ಹೋಗಿ ಜನತೆಯಲ್ಲಿ ಉತ್ಸಾಹ ತುಂಬಿದರು.

ಮೂಲ: ಶ್ರೀ ಚೌಧರಿ, ಜಿ. ಎಸ್. ಧಾರಾಸಿಂಹ ಅವರ ಲೇಖನ.

ಗಾಂಧೀಜಿ ೧೯೩೦ರಲ್ಲಿ ಬ್ರಿಟಿಷರ ವಿರುದ್ಧ ಎರಡನೆಯ ಅಹಿಂಸಾತ್ಮಕ ಸಮರ ಆರಂಭಿಸಿದರು. ಅದುವೇ 'ಉಪ್ಪಿನ ಸತ್ಯಾಗ್ರಹ'. ಬ್ರಿಟಿಷ್ ಸರ್ಕಾರ ಉಪ್ಪಿನ ಮೇಲೆ ವಿಧಿಸಿದ್ದ ಅಧಿಕ ತೆರಿಗೆಯನ್ನು ವಿರೋಧಿಸಿ ಗಾಂಧೀಜಿ ಡಾಂಡೀ (ದಂಡೀ) ಯವರೆಗೆ ಪಾದಯಾತ್ರೆ ಮಾಡುವುದಾಗಿ ಘೋಷಿಸಿದರು. 'ನಾವೇನು ಮಾಡುವುದು'? ಇದು ಅವರ ಪ್ರಜ್ಞಾವಂತ-ಅನುಯಾಯಿಗಳ ಪ್ರಶ್ನೆ. ಇದಕ್ಕೆ ಉತ್ತರಿಸುತ್ತಾ ಕರಮಚಂದ ಗಾಂಧಿಯವರ ಸುಪುತ್ರ ಉತ್ತರಿಸಿದ್ದು ಹೀಗೆ "ಸರ್ಕಾರದ ವಿರುದ್ಧ ಕಾನೂನು ಉಲ್ಲಂಘಿಸಿ ಸೆರೆಮನೆಗೆ ಹೋಗುವುದಕ್ಕಿಂತ ಮದ್ಯದ ಅಂಗಡಿ, ವಿದೇಶಿ ವಸ್ತ್ರಗಳನ್ನು ಮಾರುವ ಅಂಗಡಿಯ ಮುಂದೆ ಧರಣಿ ಹೂಡಿರಿ. ಖಾದಿಯ ಮತ್ತು ಸ್ವದೇಶಿ ವಸ್ತುಗಳ ಪ್ರಚಾರ ಮಾಡಿರಿ"

ಈ ಮಧ್ಯೆ 'ಸ್ವರಾಜ್ಯ ಸಂಘ' ಸ್ಥಾಪನೆಯಾಯಿತು. ಭಾರತೀಯ ಸಹೋದರಿಯರೆಲ್ಲರೂ ಸ್ವರಾಜ್ಯ ಸಂಘದ ಸದಸ್ಯೆರಾದರು. 'ಕಸ್ತೂರಿ ಬಾ' ಅವರು ಇದರ ಮುಂದಾಳುತನ ವಹಿಸಿಕೊಂಡರು. ಬಡವ-ಬಲ್ಲಿದರೆನ್ನದೆ ಎಲ್ಲಾ ಸ್ತ್ರೀಯರು 'ಸ್ವರಾಜ್ಯ ಸಂಘ'ಕ್ಕೆ ಸೇರಿದರು. ಸಹೋದರಿಯರೆಲ್ಲರೂ ಮದ್ಯದ ಅಂಗಡಿಯ ಮುಂದೆ ಧರಣಿ ಮಾಡಿದ್ದರಿಂದ ಸಾರಾಯಿ ಮಾರಾಟ ನಿಂತು ಹೋಯಿತು. ಇದರಿಂದ ಸರಾಯಿ ಅಂಗಡಿ ಮಾಲೀಕ, ಸರ್ಕಾರ ಮತ್ತು ಮದ್ಯ ವ್ಯಸನಿಗಳೆಲ್ಲರೂ ಚಿಂತಾಕ್ರಾಂತರಾದರು.

ಬ್ರಿಟಿಷ್ ಸರ್ಕಾರವು ಸತ್ಯಾಗ್ರಹಿಗಳ ಗುಡಿಸಲು-ಮನೆಗಳಿಗೆ ಬೆಂಕಿ ಹಚ್ಚಿ ನಾಶಪಡಿಸಿತು. ಎದೆಗುಂದದ ದೇಶ ಪ್ರೇಮಿಗಳು ಒಗ್ಗಟ್ಟಾಗಿ 'ಭಾರತ ದೇಶ ಸ್ವಾತಂತ್ರ್ಯ
ಪಡದೇ ತೀರಬೇಕೆಂಬ ಉತ್ಕಟ ಬಯಕೆ
ಅಚಲ ವಿಶ್ವಾಸವಿಟ್ಟು ನ್ಯಾಯವಾ
ಅಹಿಂಸಾ ಮಾರ್ಗದಲ್ಲಿ ಮುನ್ನಡೆದರು
ಗಾಂಧೀಜಿ ಪುನಃ ಬಂಧನಕ್ಕೆ ಒಳಗಾದರು
'ಬಾ' ಅವರು ದೇಶವಾಸಿಗಳಿಗೆ ಆತ್ಮಸ್ಥೈ
ತುಂಬುತ್ತಾ ಹೀಗೆಂದರು.

"ಕಳೆದ ನಾಲ್ಕೈದು ವಾರಗಳ ಹಿಂ
ಬಾಪೂಜಿ ನಮಗೆ ಬಹಳಷ್ಟು ಹಿತನು
ಗಳನ್ನು ನುಡಿದು ಸನ್ಮಾರ್ಗವನ್ನು ತೋ
ದ್ದಾರೆ. ಹಾಗಾಗಿ ಅವರು ತೋರಿ
ಸತ್ಪಥದಲ್ಲೇ ಮುನ್ನಡೆಯೋಣ ಬನ್ನಿ
'ಬಾ' ಮುಂದುವರೆದು ಹೇಳುತ್ತಾ
"ಗಾಂಧೀಜಿಯವರನ್ನು ಬಂಧಿಸಿರುವ
ಕ್ಕಾಗಿ ದೇಶವಾಸಿಗಳಲ್ಲಿ ಅಶಾಂತಿ ಖಂ
ವ್ಯಾಪಿಸಬಾರದು.

ಆದರೆ ಬ್ರಿಟಿಷರ ಕೈ ಕೆಳಗೆ ದುಡಿಯು
ರುವ ಎಲ್ಲಾ ಹಿರಿಯ-ಕಿರಿಯ ಅಧಿಕಾರಿಗ
ಮತ್ತು ಸರ್ಕಾರಿ ನೌಕರರು ನೌಕರಿಯ
ತ್ಯಜಿಸಿ, ನಮ್ಮ ಭಾರತೀಯ ಸಿಪಾಯಿಗ
ಭಾರತೀಯರ ಮೇಲೆ ಗುಂಡುಹಾರಿಸ
ದನ್ನು ನಿರಾಕರಿಸಬೇಕು. ವಕೀಲ
ನಿರಪರಾಧಿ ಭಾರತೀಯರ ಪರವ
ವಕಾಲತ್ತು ಮಾಡುವುದು, ವಿದ್ಯಾರ್ಥಿ
ಅಹಿಂಸಾತ್ಮಕವಾಗಿ ಸತ್ಯಾಗ್ರಹ ಮ
ವುದು, ವ್ಯಾಪಾರಿಗಳು ವಿದೇಶೀ ಮಾಲ
(ಸರಕುಗಳು) ಖರೀದಿಸುವುದನ್ನು ನಿರಾ
ಬೇಕು. ಇದೇ ನನ್ನ ಅಪೇಕ್ಷೆ. ಇದೇ
ಸಂದೇಶ."

ಗಾಂಧೀಜಿಯವರು ಬಂಧಿಯ
ಅನಂತರ ದೇಶದ ನಾಲ್ಕಾಕಡೆ,

ಮೇಲೆ ವಿಧಿಸಿದ್ದ ಕಾನೂನು ಮುರಿದು ಬಿತ್ತು. ಕಾರಣ ವಿದ್ಯಾರ್ಥಿ, ವಿದ್ಯಾರ್ಥಿನಿಯರೆಲ್ಲರೂ ಶಾಲಾ-ಕಾಲೇಜು ತರಗತಿಗಳನ್ನು ಬಹಿಷ್ಕರಿಸಿ ಸ್ವತಃ 'ಉಪ್ಪು ತಯಾರಿಸತೊಡಗಿದ್ದರಿಂದ, ಬ್ರಿಟಿಷರ ವಿರುದ್ಧವಾಗಿ ವಕೀಲರು ನ್ಯಾಯಾಲಯದ ಕಾರ್ಯಕಲಾಪಗಳನ್ನು ಬಹಿಷ್ಕರಿಸಿದ್ದರಿಂದ ಸರ್ಕಾರಿ ನೌಕರರು ನೌಕರಿಯನ್ನು ತ್ಯಜಿಸಿದ್ದರಿಂದ, ಭಾರತೀಯರು 'ವಿದೇಶಿ ವಸ್ತ್ರಗಳನ್ನು ಖರೀದಿಸದೆ ಇದ್ದದರಿಂದ ಸತ್ಯಾಗ್ರಹ ಯಶಸ್ವಿಯಾಯಿತು. ಇದನ್ನು ಕಂಡು ಕುಪಿತರಾದ ಬ್ರಿಟಿಷರು ಸತ್ಯಾಗ್ರಹಿಗಳೊಂದಿಗೆ ಕ್ರೂರವಾಗಿ ವರ್ತಿಸಿದರು. ನಿರಪರಾಧಿ ಭಾರತೀಯರ ಮೇಲೆ ಲಾಟಿ ಪೆಟ್ಟು ಮತ್ತು ಗುಂಡಿನ ಮಳೆ ಕರೆದರು. ಸತ್ಯಾಗ್ರಹಿ ಭಾರತೀಯರ ಗುಂಪಿನ ಮೇಲೆ ಕುದುರೆಗಳನ್ನೋಡಿಸಿದರು. ಮುಳ್ಳಿನ ಮೇಲೆ ಸತ್ಯಾಗ್ರಹಿಗಳನ್ನು ಎಸೆದು ತಮ್ಮ ಕ್ರೌರ್ಯ ಮೆರೆದರು.

ಕಸ್ತೂರಿ ಬಾ ಧೃತಿಗೆಡದೆ ಭಾರತೀಯರನ್ನು ಹುರಿದುಂಬಿಸಿದರು.

ಕಸ್ತೂರಿ ಬಾ ಗಾಯಾಳುಗಳಾಗಿದ್ದ ಸತ್ಯಾಗ್ರಹಿಗಳ ಶುಶ್ರೂಷೆ ಮಾಡುತ್ತಾ ಅವರಲ್ಲಿ ಧೈರ್ಯ ತುಂಬಿದರು.

ಪ್ರಮುಖ ಸ್ಥಳಗಳಿಗೆ 'ಬಾ' ಭೇಟಿ ಕೊಟ್ಟು ಜನತೆಗೆ ಅವಶ್ಯವಾಗಿದ್ದ ಆತ್ಮವಿಶ್ವಾಸ ತುಂಬಿ, ಉತ್ಸಾಹಿಗಳನ್ನಾಗಿಸಿದರು.

ಅವಿರತ ಪರಿಶ್ರಮದ ಕಾರಣ 'ಕಸ್ತೂರಿ ಬಾ'ರ ಆರೋಗ್ಯ ಕೆಟ್ಟಿತು. ಭಾರತೀಯರನ್ನು 'ಪ್ರಜ್ಞಾವಂತ ನಾಗರಿಕ'ರನ್ನಾಗಿಸುತ್ತಿದ್ದುದನ್ನು ಕಂಡ ಬ್ರಿಟಿಸರು 'ಬಾ' ಅವರನ್ನು ಸೆರೆಮನೆಯಲ್ಲಿ ಇಟ್ಟರು.

೧೯೩೨, ೧೯೩೩, ೧೯೩೯, ಮತ್ತು ೧೯೪೨ರಲ್ಲಿ 'ಬಾ' ಅವರು ಸೆರೆಮನೆಯಲ್ಲಿದ್ದರು. ಸೆರೆಮನೆಯಲ್ಲಿಯೂ ಜೊತೆಯಲ್ಲಿದ್ದ ಸಹೋದರಿಯರಿಗೆ ಧೈರ್ಯ ಮತ್ತು ಉತ್ಸಾಹ ತುಂಬುತ್ತಿದ್ದರು.

'ಬಾ ಅವರು ಸ್ವತಃ ಕಷ್ಟಗಳನ್ನು ಅನುಭವಿಸುತ್ತಾ ಸಹೋದರಿಯರ ಸೇವೆ ಮಾಡುತ್ತಾ ಅವರಲ್ಲಿ ಪ್ರೇರಣೆ ತುಂಬುತ್ತಲೇ ಇದ್ದರು.

ಬಾಪೂಜಿ ತಮ್ಮ ಆತ್ಮಕಥೆಯಲ್ಲಿ 'ಬಾ' ಅವರನ್ನು ಕುರಿತು ಹೀಗೆಂದಿದ್ದಾರೆ. "ಕಸ್ತೂರಿಬಾ ನನ್ನ ಜೀವನದ ಉದ್ದಕ್ಕೂ ಪೋಷಕಳಾಗಿದ್ದಳು. ಆಕೆ ಇಲ್ಲದಿದ್ದರೆ ನಾನು ಅನಾಥನಾಗುತ್ತಿದ್ದೆ. ಅವಳ ಸಹನೆಯೇ ನನಗೆ ಅಹಿಂಸೆಯ ಪಾಠ ಕಲಿಸಿತು. ಅದೇ ನನ್ನ ತಾರಕ ಮಂತ್ರವಾಯಿತು. ಆಕೆ ನನಗೆ ಗುರು ಸಮಾನಳು.

ಹೀಗೆ ಗಾಂಧೀಜಿಯವರ ವಿಜಯದ ರೂವಾರಿ ಬಾ ಆಗಿದ್ದರಿಂದ ಅವರು "ರಾಷ್ಟ್ರ ಮಾತಾ ಕಸ್ತೂರಿ ಬಾ" ಆಗಿದ್ದಾರೆ.

ಆತ್ಮೀಯ ಸ್ನೇಹಿತರು

ಡಾ|| ಸ. ಜ. ನಾಗಲೋಟಿಮ

೨೫ 'ಶಾಂತಾ' ಬಸವ ಕಾಲನಿ
ಬೆಳಗಾವಿ-೫೯೦ ೦೧೦

ಸ್ನೇಹವೆಂಬುವುದೇನು ? ಕೃತಕ ಪ್ರದರ್ಶನವೆ ?
ಸಾಹಸದ್ಯೋತಕವೆ ? ಬರಿದೆ ಬೂಟಾಟಿಕೆಯೆ ?
ಸಾಹಚರ್ಯದ ಸೇತು, ಮಧುರಭಾವನೆಗಳಿಗೆ
ವಾಹನವದೇ ಬದುಕು ಉಲ್ಲಾಸ ಆತ್ಮಸೂನು

ನಾನು ೧೯೭೧ರಲ್ಲಿ ಯಾವುದೋ ಒಂದು ತರಬೇತಿಗೆಂದು ಅಮೇರಿಕೆಗೆ ಹೋಗಿದ್ದೆ. ಕ್ಯಾಲಿಫೋರ್ನಿಯಾದ ಒಂದು ಕಾಲೇಜಿನಲ್ಲಿ ನನ್ನ ಒಂದು ಉಪನ್ಯಾಸ ಏರ್ಪಡಿಸಿದರು. ಉಪನ್ಯಾಸ ಕೇಳಲು ಕಾಲೇಜಿನ ಅಧ್ಯಾಪಕರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಬಂದಿದ್ದರು. ಅಂದು ನಾನು ಮಾತಾಡಿದ ವಿಷಯ "ಪ್ಯಾಥೊಲಜಿ ಮ್ಯುಸಿಯಂ ಇಸ್ ಎ ಲಿವ್ಹಿಂಗ್ ಕ್ರಿಯೇ-ಚರ್" ಎಂದು. ಕನ್ನಡದಲ್ಲಿ ಹೇಳುವುದಾದರೆ "ಪ್ಯಾಥೊಲಜಿ ಮ್ಯುಸಿಯಂ ಒಂದು ಜೀವಂತ ಪ್ರಾಣಿ."

ನನಗೆ ಆ ಊರಲ್ಲಿ ಪರಿಚಯಸ್ಥರು ಇರಲಿಲ್ಲ. ನನ್ನ ವಸತಿಯನ್ನು ಕಾಲೇಜಿನ ಅತಿಥಿ ಗೃಹದಲ್ಲಿ ಮಾಡಿದ್ದರು. ಚಳಿಯನ್ನು ಬಿಟ್ಟರೆ ನನಗೆ ಎಲ್ಲವೂ ಅನುಕೂಲವಿತ್ತು. ಸ್ವತಂತ್ರನಾಗಿ ಕಾಲೇಜಿನ ಆವರಣದಲ್ಲಿ ಸುತ್ತು ಹೊಡೆಯಲು, ಅವರಿವರನ್ನು ಮಾತನಾಡಿಸಲು ಆಸ್ಪದ ಇತ್ತು. ಬೇಕಾದಾಗ ಮಲಗಲು, ಓದಲು ಸಾಧ್ಯವಿತ್ತು. ಒಟ್ಟನಲ್ಲಿ ಆ ಸ್ಥಳ ನನಗೆ ಹಿಡಿಸಿತ್ತು. ಕಾಲೇಜ ಆವರಣದಲ್ಲಿ ನಾನು ಸುಮಾರು ಒಂದು ವಾ ಕಾಲ ಕಳೆಯಬೇಕಿತ್ತು. ಉಪನ್ಯಾಸವನ ನಾನು ಅಲ್ಲಿಗೆ ಹೋದ ಎರಡನೇ ದಿನ ಇಟ್ಟಿದ್ದರು. ನಾನು ನನ್ನ ಖಾಯಂ ವೇ ದಲ್ಲಿದ್ದೆ. ಅಂದರೆ ಪ್ಯಾಂಟು ಹಾಗೂ ಬಿಳಿ ಬುಶರ್ಟ್. ಹೆಗಲ ಮೇಲೆ ಒಂದು ಉಣ್ಣೆ ಶಾಲು ಇತ್ತು. ಹಣೆಯ ಮೇಲೆ ವಿಭೂ ಇರುತ್ತಿತ್ತು. ಒಟ್ಟನಲ್ಲಿ ನೋಡ ಅಮೇರಿಕನ್ನರಿಗೆ ಒಂದು ವಿಚಿತ್ರ ಪ್ರಾ ಯಂತೆ ಕಾಣುತ್ತಿದ್ದೆ. ಎಲ್ಲರೂ ನನ್ನ ನೋಡಿ ಇವನು ಹೀಗೇಕೆ? ಎನ್ನುವ ಮುಖ ಮಾಡುತ್ತಿದ್ದರು. ಯಾಕೆಂದರೆ ಅನೇಕ ಜನ ಭಾರತೀಯರಿದ್ದರು. ಅ ಅವರು ಉಳಿದವರಂತೆ ಬಟ್ಟೆಬರೆಯನ್ನು ಧ ಅಮೇರಿಕನ್ ಬಾಳಿಗೆ ಹೊಂದಿಕೊಂಡಿದ್ದ

ಉಪನ್ಯಾಸ ಮುಂಜಾನೆ ೯.೩ ಇತ್ತು. ೧೦-೩೦ಕ್ಕೆ ಉಪನ್ಯಾಸ ಮ ಸಿದೆ. ಎಲ್ಲರೂ ಸಂತೋಷದಿಂದ ಕೈ ಕು ದರು. ಮೆಚ್ಚುಗೆ ಹೇಳಿದರು. ಅಲ್ಲಿಯ

ಅವರ ನನ್ನ ನಡುವೆ ಇದ್ದ ಪರದೆ ಸರಿದಂತೆ ಆಗಿತ್ತು. ಒಂದು ತಾಸಿನ ಮೊದಲು ನನಗೆ ಅವರೆಲ್ಲ ಅಪರಿಚಿತರಾಗಿದ್ದರು. ಉಪನ್ಯಾಸ ಮುಗಿದ ಮೇಲೆ ಒಮ್ಮೆಲೇ ಸ್ನೇಹಿತರಾದರು. "ಗುಡ್ ಫೆಲೋ? "ಗುಡ್ ಸ್ಪೀಕರ್" ಆಗಿಬಿಟ್ಟೆ. ಇದೆಲ್ಲ ನನಗೂ ಖುಷಿ ಕೊಟ್ಟಿತು. ಉಪನ್ಯಾಸ ಪ್ರಾರಂಭ ಮಾಡುವಾಗ ಹೆದರಿಕೆ ಹಿಂಜರಿಕೆ ಇದ್ದುವು. ನಾನು ಮಾತನಾಡುವ ಇಂಗ್ಲಿಷ್ ಭಾಷೆ ಅವರಿಗೆ ಅರ್ಥವಾಗುವುದೋ ಇಲ್ಲವೋ ಎಂಬ ಶಂಕೆಯೂ ಇತ್ತು. ಎಲ್ಲರ ಮುಖದ ಮೇಲಿನ ತೃಪ್ತಿ ಕಂಡು 'ಸರಿಹೋಯಿತು ಮಹಾರಾಯ' ಎಂದೆ. ಒಟ್ಟಿನಲ್ಲಿ ಒಂದು ತಾಸಿನ ಉಪನ್ಯಾಸ ನನ್ನನ್ನು ಅವರಿಗೆ ಪರಿಚಯ ಮಾಡಿಸಿತು. ಹಲವಾರು ಹಿರಿಯ ಪ್ರಾಧ್ಯಾಪಕರು ನನ್ನನ್ನು ತಮ್ಮ ತಮ್ಮ ವಿಭಾಗಕ್ಕೆ ಬರಲು ಆಮಂತ್ರಿಸಿದರು. ಎಲ್ಲಕ್ಕಿಂತಲೂ ಕಡೆಗೆ ಒಬ್ಬ ಎತ್ತರದ ಕಟ್ಟುಮಸ್ತಾದ ಆಳು ನಿಂತಿದ್ದರು. ಮೆಲ್ಲಮೆಲ್ಲನೇ ಹೆಜ್ಜೆ ಹಾಕುತ್ತ ನನ್ನ ಕಡೆಗೆ ಬಂದರು. ಕೈಕುಲುಕಿ "ಆಯ್ ಲೈಕ್ಡ್ ಯು, ಆಯ್ ಲೈಕ್ಡ್ ಯು" ಎಂದು ಹೇಳಿದರು. ಅಷ್ಟರಲ್ಲಿ ನನ್ನ ಕಾಳಜಿ ಮಾಡುತ್ತಿದ್ದ ವ್ಯಕ್ತಿ ಲಗುಬಗೆಯಿಂದ ನಮ್ಮ ಹತ್ತಿರ ಬಂದು ಹೇಳಿದರು "ಇವರು ನಮ್ಮ ಕಾಲೇಜಿನ ಡೀನ್. ಅವರನ್ನು ನಾವೆಲ್ಲ 'ಜೋನ್' ಎಂದು ಕರೆಯುತ್ತೇವೆ." ಎಂದು ಪರಿಚಯಿಸಿದರು. ಅವರನ್ನು ಕಾಣಲು ನನಗೂ ಹೆಮ್ಮೆ ಅನಿಸಿತು.

ಡೀನ್ ಅವರು ಹೇಳಿದರು "ಡಾ॥ ನಾಗ್ ನೀವು ಅತಿಥಿ ಗೃಹದಲ್ಲಿ ಉಳಿಯಲಾಗದು. ಅಲ್ಲಿ ಬೇರೆ ಅತಿಥಿಗಳು ಬರುವವರಿದ್ದಾರೆ. ನೀವು ನನ್ನ ಮನೆಯಲ್ಲಿ ನನ್ನ ಸಂಗಡ ಇರಬೇಕು. ಒಪ್ಪಿಗೆ ತಾನೆ?" ಎಂದರು. ನಾನು "ಇದು ನನ್ನ ಸುದೈವ. ನಿಮ್ಮಂಥವರ ಅತಿಥಿಯಾಗುವುದು ನನ್ನ ಪುಣ್ಯ" ಎಂದೆ. ಮಾತನಾಡುತ್ತ ಅವರು ನನ್ನನ್ನು ನಾನು ಇದ್ದ ಅತಿಥಿ ಗೃಹಕ್ಕೆ ಕರೆದೊಯ್ದರು. ನನ್ನ ಗಂಟು ಗದಡಿಗಳನ್ನೆಲ್ಲ ಜೋಡಿಸಿ ಹೊತ್ತುಕೊಂಡು ತಮ್ಮ ಕಾರಿನ ಕಡೆಗೆ ನಡದೇಬಿಟ್ಟರು. ನಾನು ಚಿಕ್ಕ ಬಾಲಕನಂತೆ ಉಳಿದುದನ್ನೆಲ್ಲ ಹೊತ್ತುಕೊಂಡು ಅವರ ಹಿಂದೆ ಹಿಂದೆ ಓಡಿದೆ. ಕಾರಿನಲ್ಲಿ ಕುಳಿತು ಅವರು ಇರುವ ಬಂಗ್ಲೆಗೆ ಹೋದೆವು. ಅದು ಕಾಲೇಜಿನಿಂದ ಸುಮಾರು ೪೦ ಕಿಲೋಮೀಟರ್ ದೂರ. ನಾನು ಕೇಳಿದೆ "ಏನು ಇದು ಕಾಲೇಜಿನಿಂದ ಬಹಳ ದೂರವಾಗುವುದಲ್ಲ?" ಜೋನ್ ನಕ್ಕರು. "ಇದು ಬಹಳ ಸಮೀಪ. ನಾನು ಕೇವಲ ೧೦–೧೫ ಮಿನಿಟುಗಳಲ್ಲಿ ಕಾಲೇಜಿಗೆ ತಲುಪುತ್ತೇನೆ. ಉಳಿದ ಕೆಲವರು ಕನಿಷ್ಠ ೨–೩ ತಾಸು ತೆಗೆಯುವರು. ಅಂದರೆ ಅವರು ಕಾಲೇಜಿನಿಂದ ೨೦೦–೩೦೦೦ ಕಿಲೋಮೀಟರ್ ದೂರದಲ್ಲಿ ವಾಸಿಸುವರು." ಅಮೇರಿಕೆಯಲ್ಲಿ ಈಗ ದೂರವನ್ನು ಕಿಲೋಮೀಟರ್‌ಗೆ ಬದಲಾಗಿ ಮಿನಿಟು—ತಾಸುಗಳಲ್ಲಿ ಹೇಳುತ್ತಾರೆ ಎಂಬುದು ಗಮನಕ್ಕೆ ಬಂದಿತು.

ಅಂದು ಸಂಜೆ ಅವರ ಪತ್ನಿ ಬಂದರು. ಅವರ ಪರಿಚಯವಾಯಿತು. ಕೆಲ ಮಿನಿಟುಗಳಲ್ಲೇ ಆತ್ಮೀಯರೆನಿಸಿದರು. ಸಂಜೆಯ ಊಟಕ್ಕೆಂದು ನನ್ನನ್ನು ಸಮೀಪದ ಒಂದು ಹೊಟೇಲಿಗೆ ಕರೆದುಕೊಂಡು ಹೋದರು. ಅಲ್ಲಿ ಸಸ್ಯಾಹಾರಿ ಊಟ ದೊರೆಯುತ್ತಿತ್ತು. "ಡಾ॥ ನಾಗ್ ನೀವು ಇರುವಷ್ಟು ದಿನ ನಾವಿಬ್ಬರೂ ಸಸ್ಯಾಹಾರಿಗಳಾಗುತ್ತೇವೆ.

ಅನಂತರ ನಾವಿಬ್ಬರೂ ಒಬ್ಬರನ್ನೊಬ್ಬರು ತಿಂದು ತೇಗುತ್ತೇವೆ" ಎಂದು ನಗಹತ್ತಿದ್ದರು. ಭರ್ಜರಿ ಊಟವಾಯಿತು. ಆ ಥಂಡಿಯಲ್ಲೂ ಆಯಿಸ್ಕ್ರೀಮ್ ಸೇವಿಸಿ ಮನೆಗೆ ಬಂದೆವು.

ನನಗೊಂದು ಒಳ್ಳೆಯ ಕೊಠಡಿ ಕೊಟ್ಟಿದ್ದರು. ಅಲ್ಲಿ ಎಲ್ಲವೂ ಅನುಕೂಲ ಇತ್ತು. ಇನ್ನು ಮಲಗುವ ಸಮಯ. ಒಮ್ಮೆಲೇ ಜೋನ್ ಅವರ ಪತ್ನಿ ಒಂದು ಸೂಚನೆ ಮುಂದಿಟ್ಟರು. ಅದೆಂದರೆ ಅಂದು ನಾನೆಲ್ಲ ನಮ್ಮ ನಮ್ಮ ಕೊಠಡಿಗಳಲ್ಲಿ ಮಲಗದೇ ನಾವು ಕುಳಿತ ದಿವಾನಖಾನೆಯ ರತ್ನಗಂಬಳಿಯ ಮೇಲೆ ಹರಟೆ ಕೊಚ್ಚುತ್ತ ಮಲಗುವುದು. ಇದನ್ನು ಕೇಳಿ ಜೋನ್ ಅವರು 'ಅದ್ಭುತ ಸೂಚನೆ' ಎಂದು ತಾವು ಸಿದ್ಧ ಎಂದು ನನ್ನ ಕಡೆಗೆ ನೋಡಿದರು. ನಾನೋ ಅವರ ಅತಿಥಿ. ಗೊಂದಲದಲ್ಲಿ ಬಿದ್ದಿದ್ದರೂ ನಕ್ಕು ಒಳ್ಳೆಯದೆಂದೆ. ಇದ್ದ ಸೀಠೋಪಕರಣಗಳನ್ನು ಬದಿಗೆ ಸರಿಸಿ ಚಿಕ್ಕ ಮಕ್ಕಳು ಮಲಗುವ ರೀತಿ ಮೂವರು ಅಲ್ಲಿಯೇ ಹೊರಳಿದೆವು.

ನನ್ನ ಮನದಲ್ಲಿ ಗೊಂದಲವೋ ಗೊಂದಲ. ಅವರೋ ಅಷ್ಟು ಶ್ರೀಮಂತರು. ಅಮೇರಿಕೆಯಲ್ಲಿಯ ಕಾಲೇಜಿನ ಡೀನ್. ಅವರ ಮಡದಿಯೂ ದೊಡ್ಡ ಹುದ್ದೆಯಲ್ಲಿದ್ದಾರೆ. ಮುಜುಗರದಲ್ಲಿ ಮುಳುಗಿದ್ದೆ. ಆದರೆ ಅವರ ಆತ್ಮೀಯತೆಯ ಹೊಳೆಯಲ್ಲಿ ತೇಲುತ್ತಲಿದ್ದೆ. ನನಗೆ ಅರಿವಿಲ್ಲದಂತೆ ನಾನು ಒಂದು ಮಾತನ್ನು ಜೋನ್ ಅವರಿಗೆ ಕೇಳಿಬಿಟ್ಟೆ.

"ಅಲ್ಲಾ, ನಾವು ಮೂವರು ಅಲ್ಪ ಸಮಯದಲ್ಲೇ ಇಷ್ಟೊಂದು ಆತ್ಮೀಯರಾದೆವಲ್ಲ! ಒಬ್ಬರನ್ನೊಬ್ಬರು ಅನೇಕ ವರ್ಷಗಳಿಂದ ಬಲ್ಲೆವು ಎಂದೆನಿಸುತ್ತಿದೆ. ಇದು ಹೇಗೆ?" ಎಂದೆ.

ಜೋನ್ ಅವರು ನಗುತ್ತ ಹೇಳಿದರು. "ನೋಡ್ರಿ ಡಾ!! ನಾಗ್, ನಮಗೆಲ್ಲ ಆತ್ಮೀಯರು ಸ್ನೇಹಿತರು ಹಾಗೂ ಚಿರಪರಿಚಿತ ಗೆಳೆಯರು ಜಗತ್ತಿನ ತುಂಬ ಹರಡಿಕೊಂಡಿದ್ದಾರೆ. ನಾವೆಲ್ಲ ಬಹಳ ಆತ್ಮೀಯರೇ, ಆದರೆ ದುರ್ದೈವ ದಿಂದ ನಾವು ಒಬ್ಬರನ್ನೊಬ್ಬರು ಭೇಟಿ ಆಗಿರುವುದಿಲ್ಲ. ಒಮ್ಮೆ ಒಬ್ಬರನ್ನೊಬ್ಬರು ಕಂಡರೆ ಸಾಕು ಆತ್ಮೀಯತೆ ತಕ್ಷಣ ಬೆಳೆಯುತ್ತದೆ. ನಾವು ಅನ್ಯೋನ್ಯ ಆಗುತ್ತೇವೆ. ಈಗ ವಿಚಾರಿಸಿರಿ. ನಾನು ನೀವು ಹುಟ್ಟಿನಿಂದಲೇ ಆತ್ಮೀಯರು ಹಾಗೂ ಪರಿಚಿತರು. ಆದರೆ ನಾನು ಅಮೇರಿಕೆಯಲ್ಲಿ ಹುಟ್ಟಿ ಬೆಳೆದಿರುವೆ. ನೀವು ಭಾರತದಲ್ಲಿ ಬೆಳೆದಿರುವಿರಿ. ಕಾರಣ ನಾವು ಒಬ್ಬರನ್ನೊಬ್ಬರು ಕಂಡಿರಲಿಲ್ಲ. ಇಂದು ಮುಂಜಾನೆ ನೋಡಿದೆವು. ಆತ್ಮೀಯತೆ ಬಿಚ್ಚಿ ಕೊಂಡಿತು. ಒಬ್ಬರನ್ನೊಬ್ಬರು ಗುರುತಿಸಿದೆವು. ಇದು ನನ್ನ ನಂಬಿಕೆ. ನಾವು ಆತ್ಮೀಯರಾಗಿರದೇ ಹೋಗಿದ್ದರೆ ಪರಿಚಿತರಲ್ಲದಿದ್ದ ಇಬ್ಬರ ನಡುವೆ ಆಕರ್ಷಣೆ ಇರುತ್ತಿರಲಿಲ್ಲ. ನಾನು ನಿಮ್ಮನ್ನು ಮನೆಗೆ ಕರೆಯುತ್ತಿರಲಿಲ್ಲ. ನನ್ನ ಹೆಂಡತಿ ಹಜಾರದಲ್ಲಿ ಮಲಗು ಯೋಚನೆಯನ್ನೂ ಮಾಡುತ್ತಿರಲಿಲ್ಲ. ನಮ ನಮ್ಮ ಬೆಡ್‌ರೂಂಗಳಲ್ಲಿ ಬೋಲ್ಟ್ ಹಾ ಕೊಂಡು ಮಲಗುತ್ತಿದ್ದೆವು." "ಇಂಥವನ ನಾವು ನಮ್ಮ ಜೀವನದಲ್ಲಿ ಆಗಾಗ ಕಾಣುತ್ತೇವೆ. ಒಬ್ಬ ವ್ಯಕ್ತಿಯನ್ನು ಕಂಡೊಡನೆಯೆ ಅವನು ನನ್ನ ಸ್ನೇಹಿತ ಎನ್ನುವ ಭಾವ ಬರುತ್ತದೆ. ಕೂಡಲೇ ಮಾತಾಡುತ್ತೇ ಹೊಂದಿಕೊಳ್ಳುತ್ತೇವೆ."

ಆ ಹಿರಿಯರ ಮಾತು ನನಗಂತೂ ನಿ ಎನಿಸುತ್ತದೆ.



ಶ್ರೀ ಜಯಚಾಮರಾಜ ಒಡೆಯರ್

ಜನನ : ೧೯೧೯ರ ಜುಲೈ ೧೮ ನಿಧನ : ೧೯೭೪ರ ಸೆಪ್ಟೆಂಬರ್ ೨೩

ಬಹುಮುಖ ಪ್ರತಿಭೆಯ ಆದರ್ಶ ಪ್ರಭು ಶ್ರೀ ಜಯಚಾಮರಾಜ ಒಡೆಯರ್

ವಿ. ಶ್ರೀನಿವಾಸ

ನಂ. ೮/೪೫೫, ಜಕ್ಕಸಂದ್ರ ಬಡಾವಣೆ
೧ ನೇ ಬ್ಲಾಕ್, ೧ ನೇ ಮೇನ್, ಕೋರಮಂಗಲ
ಬೆಂಗಳೂರು–೫೬೦ ೦೩೪

ಮೈಸೂರಿನ ಯದುವಂಶದ ೨೫ನೆಯ ಹಾಗೂ ಕಟ್ಟಕಡೆಯ ಅರಸರಾದ ಶ್ರೀ ಜಯಚಾಮರಾಜ ಒಡೆಯರ್ (೧೯೧೯–೧೯೭೪) ಅವರು ಬಹುಮುಖ ಪ್ರತಿಭೆಯ ಅಪೂರ್ವ ದೊರೆ, ರಾಜರ್ಷಿ. ಎಲ್ಲರೂ ಸಿಂಹಾಸನವನ್ನೇರಿ ರಾಜರಾದರೆ, ಇವರು ಸಿಂಹಾಸನದಿಂದಿಳಿದು ರಾಜರಾದರು! ಪರಂಪರಾಗತ ರಾಜ ಸಿಂಹಾನವನ್ನು ಬಿಟ್ಟು, ಕನ್ನಡ ಜನತೆಯ ಹೃದಯ ಸಿಂಹಾಸನವನ್ನಲಂಕರಿಸಿದರು! ಸ್ವಾತಂತ್ರ್ಯ ನಂತರದ ಬದಲಾದ ರಾಜಕೀಯ ಪರಿಸ್ಥಿತಿಗೆ ತಾವು ಹೊಂದಿಕೊಂಡ ಅನ್ಯಾದೃಶ ರೀತಿಯಿಂದಲೂ, ತಮ್ಮ ಅಪೂರ್ವ ಬಹುಮುಖ ಬೌದ್ಧಿಕ ಸಾಧನೆಗಳಿಂದಲೂ, ಅವರು ರಾಜರಾಗಿದ್ದಾಗ ಗಳಿಸಿದ್ದಕ್ಕಿಂತಲೂ ಹೆಚ್ಚಿನ ಯಶಸ್ಸನ್ನೂ, ಕೀರ್ತಿಯನ್ನೂ. ರಾಜಪದವಿಯನ್ನು ಬಿಟ್ಟನಂತರ ಗಳಿಸಿದರು, 'ಅಸಾಮಾನ್ಯ ಸಾಮಾನ್ಯ'ರಾಗಿ! ಸ್ವಾಮಿ ವಿವೇಕಾನಂದ ಮತ್ತು ಡಾ|| ರಾಧಾಕೃಷ್ಣನ್‌ರವರ ತರುವಾಯ, ಅವರು ಭಾರತದ ಶ್ರೇಷ್ಠ ಸಾಂಸ್ಕೃತಿಕ ರಾಯಭಾರಿಯೆಂದು ವಿಖ್ಯಾತರಾದರು.

ಶಾಶ್ವತ ಕೊಡುಗೆ

ಭಾರತದ ರಾಷ್ಟ್ರಪತಿಯಾಗುವ ಅರ್ಹತೆ ಮತ್ತು ಸಾಮರ್ಥ್ಯಗಳನ್ನು ಪಡೆದಿದ್ದ ನಮ್ಮ ಮಹಾರಾಜರು ಮೈಸೂರು ಸಂಸ್ಥಾನದ ಅರಸರಾಗಿ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ರಾಜ್ಯಪಾಲರಾಗಿ ಸಲ್ಲಿಸಿದ ಸೇವೆ ಅಮೋಘವಾದದ್ದು, ಸ್ಮರಣೀಯವಾದದ್ದು. ಆದರೆ, ಈ ಸೇವೆಗಿಂತಲೂ ಅಮೋಘವಾದದ್ದು, ಚಿರಸ್ಮರಣೀಯವಾದದ್ದು, ಅವರ ನೆನಪನ್ನು ಸದಾ ಹಸಿರಾಗಿ ಉಳಿಸತಕ್ಕದ್ದು ಅವರ ಸಾರಸ್ವತ ಸೇವೆ–ಭಾರತೀಯ ತತ್ವಜ್ಞಾನಕ್ಕೆ ಆಧ್ಯಾತ್ಮ ಸಾಹಿತ್ಯಕ್ಕೆ, ಕನ್ನಡ ಭಾಷೆಗೆ, ಕರ್ಣಾಟಕ ಸಂಗೀತಕ್ಕೆ ಅವರಿತ್ತ ಅಮೋಘ ಕೊಡುಗೆ. ಅದೇ ಅವರ ಜೀವನದ ಮೇರು ಸಾಧನೆಯೂ ಹೌದು.

ಶ್ರೇಷ್ಠ ತತ್ವಜ್ಞಾನಿ

ಇತ್ತೀಚಿನ ಭಾರತದ ಇತಿಹಾಸದಲ್ಲಿಯೇ, ಮಾಜಿ ರಾಷ್ಟ್ರಪತಿ ದಿವಂಗತ ಡಾ| ರಾಧಾಕೃಷ್ಣನ್ ಅವರನ್ನು ಬಿಟ್ಟರೆ, ಈ ಶತಮಾನದ ಶ್ರೇಷ್ಠ ಭಾರತೀಯ ತತ್ವಜ್ಞಾನಿಗಳಾಗಿದ್ದ ಶ್ರೀ ಜಯಚಾಮರಾಜ ಒಡೆಯರು ಹಲ

ವಾರು ಪ್ರೌಢ ಗ್ರಂಥಗಳ ಕರ್ತೃ. 'ದತ್ತಾತ್ರೇಯ ಮಾರ್ಗ ಮತ್ತು ಧ್ಯೇಯ' ಅವರ ಕೃತಿರತ್ನ. 'ಸುರೇಶ್ವರಾಚಾರ್ಯ', 'ಗೀತೆ ಮತ್ತು ಭಾರತೀಯ ಸಂಸ್ಕೃತಿ,' 'ಮತಧರ್ಮ ಮತ್ತು ಮಾನವ,' 'ವೈದಿಕ ಧರ್ಮದಲ್ಲಿ ಆತ್ಮ ಮತ್ತು ಬ್ರಹ್ಮ'—ಇವು ಅವರ ಇತರ ಕೃತಿಗಳಲ್ಲಿ ಕೆಲವು. ಇವೆಲ್ಲವೂ ಆಂಗ್ಲ ಭಾಷೆಯಲ್ಲಿವೆ.

ಅನೋಘ ವಿಚಾರಧಾರೆ

ಅದ್ವೈತಿಗಳೂ, ಶಾಸ್ತ್ರ ಸಂಪ್ರದಾಯ-ನಿಷ್ಠರೂ ಆದ ಪ್ರಭುಗಳು ತಮ್ಮ ಕೃತಿಗಳಲ್ಲೆಲ್ಲ ವೈದಿಕ ಧರ್ಮದ ವೈಶಾಲ್ಯ-ವೈಶಿಷ್ಟ್ಯಗಳನ್ನು, ಭಾರತೀಯ ಸಂಸ್ಕೃತಿಯ ಹಿರಿಮೆ-ಗರಿಮೆಗಳನ್ನು ವಿದ್ವತ್ಪೂರ್ಣವಾಗಿ ಪ್ರತಿಪಾದಿಸಿರುವರಲ್ಲದೆ, ಆಧುನಿಕ ಜಗತ್ತಿಗೆ ಭಾರತದ ವಿಶೇಷ ಸಂದೇಶದ ಅಗತ್ಯ, ಔಚಿತ್ಯಗಳನ್ನು ಕುರಿತು ವಿವೇಚಿಸಿದ್ದಾರೆ.

"ಮಾನವ ಜನಾಂಗವು ಇಂದು ಎದುರಿಸುತ್ತಿರುವ ಗಂಡಾಂತರ ಜಗತ್ತಿನ ನೈತಿಕ ದಿವಾಳಿತನದ ಫಲ. ಇತಿಹಾಸದ ಮತ್ತಾವುದೇ ಕಾಲದಲ್ಲಿ, ಮಾನವ ಕುಲದ ಸುದೀರ್ಘ, ಊರ್ಧ್ವಮುಖ ಯಾತ್ರೆಯಲ್ಲಿ ಇಂಥ ಕ್ರೂರ, ಕಠೋರ ಪರಿಸ್ಥಿತಿ ಉದ್ಭವಿಸಿದ್ದಿಲ್ಲ. ಭಯಾನಕ, ವಿನಾಶಕಾರಿ ಬಾಂಬುಗಳನ್ನು ಆಸ್ಫೋಟಿಸುವ ನಮ್ಮ ಉನ್ಮಾದದಿಂದಾಗಿ, ಮಾನವನ ನೋವು-ನರಳಾಟಗಳ ಬಗೆಗೆ ನಾವು ತಳೆದಿರುವ ಕ್ರೂರ, ಅಲಕ್ಷ್ಯ ಮನೋಭಾವದಿಂದಾಗಿ, ನಾವು ಅಪಾಯಕಾರಿ ಘಟ್ಟವನ್ನು ತಲಪಿದ್ದೇವೆ ಎಂದರೆ, ಈ ಗಂಡಾಂತರದಿಂದ ಪಾರಾಗಿ ಭೂಲೋಕದಲ್ಲಿ ಯಾವುದೇ ಜೀವರಾಶಿ ಉಳಿಯುವುದು ಸಾಧ್ಯವೇ ಎಂದು ವಿಚಾರವಂತರೆಲ್ಲರೂ ಆಲೋಚಿಸುತ್ತಿದ್ದಾರೆ. ಜಗತ್ತಿನ [illegible] ಅಪಾಯದ ನೆಲೆಯೆನಿಸಿಕೊಳ್ಳದಿರು[illegible] ಸ್ಥಳವೇ ಇಲ್ಲವೆನ್ನಬಹುದು. ಇಡೀ ಜಗತ್ತ[illegible] ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದೆ.

"ನಿಸರ್ಗವನ್ನು ಜಯಿಸುವಲ್ಲಿ ವಿಜ್ಞಾನ[illegible] ಆಶ್ಚರ್ಯಕರವಾದ ಪ್ರಗತಿಯನ್ನು ಸಾಧಿ[illegible] ರುವುದಾದರೂ, ಅದು ಜೀವನದ, ಮುಖ್ಯ[illegible] ವಾಗಿ, ಮಾನವ ಜೀವನದ ರಹಸ್ಯವನ್[illegible] ಕಂಡುಹಿಡಿಯುವುದರಲ್ಲಿ ನಿಜವಾಗಿಯ[illegible] ವಿಫಲಗೊಂಡಿದೆ.

"ಐಹಿಕ ವಿಷಯಗಳಲ್ಲಿ ಮಗ್ನವಾ[illegible] ಕಂಗಾಲಾಗಿರುವ ನಮ್ಮ ಜಗತ್ತಿಗೆ ಭಾರತ[illegible] ವಿಶೇಷ ಸಂದೇಶವೊಂದಿದೆ. ಅದೇ ನಂಬಿ[illegible] ಮತ್ತು ಶಾಂತಿಯ ಸಂದೇಶ. ವಿಶ್ವದ ಪ್ರ[illegible] ಯೊಂದು ಚಲನ-ವಲನದ ಹಿಂದೆಯೂ ದಾ[illegible] ತೋರಿ ಸಮಾಧಾನ ನೀಡುವ ದೈವೀ ಹ[illegible] ವೊಂದಿದೆ ಎಂಬ ನಂಬಿಕೆಯ ಸಿದ್ಧಿಗೆ, ಸಾಕ್[illegible] ತ್ಕಾರಕ್ಕೆ ಸತತ ಅಭ್ಯಾಸ, ಧ್ಯಾನ ಮತ್[illegible] ಅಚಲ ಧರ್ಮ ಶ್ರದ್ಧೆಗಳಿಂದ ಮನಶ್ಶಾಂ[illegible] ಯನ್ನು ಗಳಿಸಿಕೊಳ್ಳುವುದೇ ಮಾರ್ಗ.

"ವಿಜ್ಞಾನವು ಜಗತ್ತನ್ನು ಕೋ[illegible] ಕೋಣೆಗಳಾಗಿ ವಿಂಗಡಿಸಿದೆ, ಅಣು-ಅ[illegible] ಗಳಾಗಿ ವಿಭಜಿಸಿದೆ ಕೂಡ. ಮಾನವ ವಿ[illegible] ಬ್ರಹ್ಮಾಂಡದ ಒಳಗಿರುವ ಬದಲು ಅದ[illegible] ಹೊರಗೆ ನಿಂತಿರುವಂತೆ ತೋರುತ್ತ[illegible] ನಮ್ಮ ಪೂರ್ವಜರು ಇಡೀ ವಿಶ್ವವೊಂದ[illegible] ಒಂದಾಗಿ ಬಾಳುವ ಮೂಲ ವಿವೇಕವನ್[illegible] ಬೆಳೆಸಿಕೊಂಡಿದ್ದರು. "ಪೂರ್ಣಮದ[illegible] ಪೂರ್ಣಮಿದಂ ಪೂರ್ಣಾತ್ ಪೂರ್[illegible] ಮುದಚ್ಯತೆ! ಪೂರ್ಣಸ್ಯ ಪೂರ್ಣಮಾದಾ[illegible] ಪೂರ್ಣಮೇವಾವಶಿಷ್ಯತೆ." ಇಡೀ ವಿ[illegible] ಅದರ ಪ್ರತಿಯೊಂದು ಭಾಗ ಪೂರ್[illegible] ಅದೇ ಬ್ರಹ್ಮದ ಪೂರ್ಣತೆ.

"ಈ ರೀತಿ ಆಲೋಚಿದರೆ, ಮಾನವ ಮತ್ತು ಜಗತ್ತುಗಳ ನಡುವೆ ಯಾವ ಘರ್ಷಣೆಯೂ ಉಂಟಾಗಲಾರದು. ಎರಡರ ಅಸ್ತಿತ್ವವೂ ಒಂದೇ ವಿಶ್ವದಲ್ಲಿ, ಬ್ರಹ್ಮಮಯ ವಿಶ್ವದಲ್ಲಿ.

"ರಾಜಕೀಯ, ಆರ್ಥಿಕ, ವೈಜ್ಞಾನಿಕ ಮತ್ತು ತಾಂತ್ರಿಕ ರಂಗಗಳಲ್ಲಿ ಪೈಪೋಟಿಯಿಂದಾಗಿ ಉದ್ಭವಿಸಿರುವ ಘರ್ಷಣೆ ಮತ್ತು ಒಡಕುಗಳು ಮಾನವ ಭ್ರಾತೃತ್ವಕ್ಕೆ ಧಕ್ಕೆಯುಂಟು ಮಾಡುತ್ತಿರುವ ಇಂದಿನ ಯುಗದಲ್ಲಿ ಅಂಥ ಪೂರ್ಣತೆ ಮತ್ತು ಏಕತೆಯ ಅರಿವಿನ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಯೋಗ್ಯ ಅಧ್ಯಯನ ಮತ್ತು ಚಿಂತನೆಗಳ ಮೂಲಕ ಮಾತ್ರವೇ ಮಾನವರ ನಡುವೆ ಸದ್ಭಾವನೆ ಮತ್ತು ಪರಸ್ಪರ ಅರಿವನ್ನು ಮೂಡಿಸುವುದು ಸಾಧ್ಯ. ನೈಜ ಜ್ಞಾನವೇ, ನಿಜವಾದ ವಿದ್ಯೆಯೇ ಮಾನವ ಕುಲವು ಎದುರಿಸುತ್ತಿರುವ ಕೆಡುಕುಗಳಿಗೆಲ್ಲ ಅತ್ಯುತ್ತಮ ಪರಿಹಾರ."

(ಗೀತೆ ಮತ್ತು ಭಾರತೀಯ ಸಂಸ್ಕೃತಿ)

ಇತರ ಕೃತಿಗಳು :

ಒಡೆಯರ್ ಅವರ ಪಾಂಡಿತ್ಯ, ಗ್ರಂಥ ರಚನಾ ಸಾಮರ್ಥ್ಯಗಳು, ತತ್ವಜ್ಞಾನ, ಆಧ್ಯಾತ್ಮ ಮತ್ತು ಭಾರತೀಯ ಅಲಂಕಾರ ಶಾಸ್ತ್ರಗಳಿಗಷ್ಟೇ ಸೀಮಿತಗೊಂಡಿರಲಿಲ್ಲ. ಅವರು ಇತರ ವಿಷಯಗಳಿಗೂ ಸಂಬಂಧಿಸಿದಂತೆ ಅನೇಕ ಶ್ರೇಷ್ಠ ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಭಾರತೀಯ ಅರಣ್ಯಗಾರಿಕೆ." ಜೀವನದಲ್ಲಿ ನೀರಿನ ಪಾತ್ರ' ಮತ್ತು 'ಭಾರತದ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ನದಿಗಳು' ಎಂಬ ಗ್ರಂಥಗಳು ಉಲ್ಲೇಖಾರ್ಹ. ಅವರು ಬರೆದಿರುವ ಸಣ್ಣ ಕತೆಗಳ ಸಂಕಲನವೂ ಗಮನಾರ್ಹ.

ಉಪನ್ಯಾಸಗಳು ಮತ್ತು ಭಾಷಣಗಳು

ವಿಶ್ವ ಸಂಚಾರಿಗಳಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರು ಜಗತ್ತಿನ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಭಾರತೀಯ ತತ್ವಜ್ಞಾನ, ಆಧ್ಯಾತ್ಮ ಮತ್ತು ಅಲಂಕಾರ ಶಾಸ್ತ್ರ (ಈಸ್ಥೆಟಿಕ್) ಗಳಿಗೆ ಸಂಬಂಧಿಸಿದ ವಿದ್ವತ್ಪೂರ್ಣ ಉಪನ್ಯಾಸಗಳನ್ನು ನೀಡಿದ್ದರು. ಅವು ಅಮೂಲ್ಯ ಕೊಡುಗೆಯಾಯಿತು.

ಮಹಾರಾಜರ ಕನ್ನಡ ಸೇವೆ

ಶ್ರೀ ಜಯಚಾಮರಾಜ ಒಡೆಯರವರಿಗೆ ಕನ್ನಡನಾಡು-ನುಡಿಗಳ ಬಗ್ಗೆ ಅಪರಿಮಿತ ಅಭಿಮಾನ. ೧೯೫೩ರಲ್ಲಿ ರಾಜ್ಯಗಳ ಭಾಷಾವಾರು ಪುನರ್ವಿಂಗಡಣೆಗಾಗಿ ರಚಿಸಲಾಗಿದ್ದ ಫಜಲ್ ಅಲಿ ಆಯೋಗದ ಮುಂದೆ ಅವರು ಆಡಿದ ನುಡಿಗಳು ಚಿರಸ್ಮರಣೀಯ: "ನಮ್ಮ ರಾಜಪದವಿ ಹೋದರೂ ಚಿಂತೆಯಿಲ್ಲ. ಕನ್ನಡಿಗರೆಲ್ಲ ಒಂದಾಗಲಿ, ಮುಂದಾಗಲಿ. ಕರ್ನಾಟಕ ಏಕೀಕರಣವಾಗಲಿ." ಪ್ರಭುಗಳು ಕರ್ನಾಟಕ ಏಕೀಕರಣಕ್ಕೆ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದು ಮಾತ್ರವೇ ಅಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತಿನ ಪೋಷಕರಾಗಿ, ಕನ್ನಡ ವಿದ್ವಜ್ಜನರಿಗೆ ಆಶ್ರಯದಾತರಾಗಿ, ನಾಡು-ನುಡಿಗಳಿಗೆ ಅಮೋಘ ಸೇವೆ ಸಲ್ಲಿಸಿದರು. ಎಲ್ಲಕ್ಕಿಂತ ಮಿಗಿಲಾಗಿ, ಅವರು ವೈದಿಕ ಸಾಹಿತ್ಯ ಗಂಗೆಯನ್ನು ದೇವ ಭಾಷೆಯಿಂದ ಕನ್ನಡ ಭಾಷೆಗೆ ಕರೆದು ತಂದ ಆಧುನಿಕ ಭಗೀರಥ!

ಶ್ರೀ ಜಯಚಾಮರಾಜೇಂದ್ರ ಗ್ರಂಥ ಮಾಲೆ

ಕನ್ನಡ ಜನತೆಯ ಆತ್ಮೋದ್ಧಾರಕ್ಕಾಗಿ ಶ್ರೀ ಜಯಚಾಮರಾಜ ಒಡೆಯರು ಪ್ರಾರಂಭಿಸಿದ ಅಪೂರ್ವ ಗ್ರಂಥ ಮಾಲೆ ಮಹತ್ತು-ಬೃಹತ್ತುಗಳೆರಡರಲ್ಲಿಯೂ ಅಸಾಧಾರಣವಾದದ್ದು, ಈ ಮಾಲೆಯಲ್ಲಿ ಪ್ರಕಟವಾಗಿರುವ ಸುಮಾರು ಎರಡೂವರೆ ಲಕ್ಷ ಪುಟಗಳಷ್ಟು ಬೃಹತ್ ಸಂಖ್ಯೆಯ ೩೨೮ ಸಂಪುಟಗಳ ಒಂದುಕಟ್ಟಿನ ಬೆಲೆ ಕೇವಲ ೧೭೫೦ ರೂ. ಇಷ್ಟೊಂದು ಮಹತ್ವಪೂರ್ಣ ಪ್ರಕಟನ ಕಾರ್ಯ ಜಗತ್ತಿನ ಮತ್ತಾವ ಭಾಷೆಯಲ್ಲಿಯೂ ಆಗಿಲ್ಲವೆಂದು ಜರ್ಮನ್ ವಿದ್ವಾಂಸರೊಬ್ಬರು ನುಡಿದಿದ್ದಾರೆ !

ಪ್ರಕಟಿತ ಕೃತಿಗಳು

ಈ ಮಾಲೆಯಲ್ಲಿ ಪೂಜಾಫಲ ಪ್ರಯೋಗ ಮಹಾತ್ಮ್ಯ ಉಪಾಖ್ಯಾನಗಳಿಗೆ ಸಂಬಂಧಿಸಿದ ಅನೇಕ ಗ್ರಂಥಗಳಲ್ಲದೆ, ಮತ್ಸ್ಯ, ಕೂರ್ಮ, ವಾಯು, ವರಾಹ, ನಾರದೀಯ, ಕಲ್ಕಿ, ವಾಮನ, ವಿಷ್ಣು, ನರಸಿಂಹ, ಬ್ರಹ್ಮಪದ್ಮ, ಗಣೇಶ, ಮಾರ್ಕಂಡೇಯ, ಮುಂತಾದ ಪುರಾಣಗಳೂ, ಆನಂದ ಅಧ್ಯಾತ್ಮ, ಅದ್ಭುತರಾಮಾಯಣಗಳೂ, ಸೂತ ಶಂಕರಗಾರ್ಗ್ಯ ಸಂಹಿತೆಗಳೂ, ಶಿವತತ್ವ ಸುಧಾನಿಧಿ, ಹಾಲಾಸ್ಯ ಮಾಹಾತ್ಮ್ಯ ದೇವಿಭಾಗವತ, ಶಿವರಹಸ್ಯ, ಯೋಗ ವಾಸಿಷ್ಠ, ಉಪನಿಷತ್, ಭಗವದ್ಗೀತೆ, ಬ್ರಹ್ಮಸೂತ್ರ ಭಾಷ್ಯಾದಿಗಳೂ ಮೂಲ, ಕನ್ನಡ ಅನುವಾದ, ಟೀಕೆ-ಟಿಪ್ಪಣಿ ಸಹಿತ ಪ್ರಕಟವಾಗಿವೆ !

ಋಗ್ವೇದದ ಕನ್ನಡ ಅನುವಾದ

ಈ ಮಾಲೆಯ ಅತ್ಯಂತ ಮಹ[…] ಪೂರ್ಣ ಪ್ರಕಟಣೆಯೆಂದರೆ, ಮೂವತ[…] ಸಂಪುಟಗಳಲ್ಲಿ ಪ್ರಕಟವಾಗಿರುವ ಋಗ್ವೇ[…] ಸಂಹಿತೆ. ಋಗ್ವೇದದ ಕನ್ನಡ ಅನುವಾದ[…] ಸಮಗ್ರವೂ ಸಂಪೂರ್ಣವೂ ಆಗಿದ್ದು[…] ಕನ್ನಡ ಆಧ್ಯಾತ್ಮಿಕ ಸಾಹಿತ್ಯಕ್ಕೆ ಅದೊಂ[…] ಅತ್ಯಮೂಲ್ಯ ಕೊಡುಗೆಯಾಗಿದೆ. ಉಳಿ[…] ಮೂರು ವೇದಗಳ ಸಮಗ್ರ ಕನ್ನಡ ಅ[…] ವಾದಗಳನ್ನು ಪ್ರಕಟಿಸುವ ಉದ್ದೇಶವಿದ್ದಿ[…] ದರೂ, ಆ ಮಹೋದ್ದೇಶ ಕಾರಣಾಂ[…] ಗಳಿಂದ ಈಡೇರದೆ ಹೋದದ್ದು ಕನ್ನಡಿಗ[…] ದುರ್ದೈವ.

ವೈದಿಕ ಸಾಹಿತ್ಯವನ್ನೆಲ್ಲ ಮತ್ತೊಂ[…] ಭಾಷೆಗೆ ಅನುವಾದ ಮಾಡಿಸಿ ಟೀಕೆ-ಟಿಪ್ಪ[…] ಸಹಿತ ಪ್ರಕಟಿಸುವುದು ನಾಲ್ಕಾರು ಸಂ[…] ಗಳಿಗೂ ಸುಲಭ ಸಾಧ್ಯವಲ್ಲದ ಕಾರ್ಯ[…] ಬೃಹತ್ ಕಾರ್ಯವನ್ನು ಮಹಾರಾ[…] ರೊಬ್ಬರೇ ಹತ್ತಾರು ಲಕ್ಷ ರೂಪಾಯಿಗ[…] ಸ್ವಂತ ವೆಚ್ಚದಿಂದ ಅತ್ಯಲ್ಪ ಕಾಲದ[…] ಬಹುಮಟ್ಟಿಗೆ ಸಾಧಿಸಿ ಕನ್ನಡಿಗರೆಲ್ಲ[…] ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಸಂಗೀತಕ್ಕೆ ನೀಡಿದ ಕೊಡುಗೆ

ಶ್ರೀ ಜಯಚಾಮರಾಜ ಒಡೆಯ[…] ದೊರೆಗಳಲ್ಲಿ ಸಂಗೀತಗಾರರು, ಸಂಗೀ[…] ಗಾರರಲ್ಲಿ ದೊರೆಗಳು. ವಂಶ ಪಾರಂಪರ್ಯ[…] ವಾಗಿ, ವಿಶೇಷವಾಗಿ, ಮಾತೆಯಿಂದ ಬಂ[…] ಸಂಗೀತಾಭಿರುಚಿಯನ್ನು ಬಾಲ್ಯದಿಂದಲ[…] ಬೆಳೆಸಿಕೊಂಡು ಬಂದ ಶ್ರೀಮನ್ಮಹಾರಾಜ[…] ಸಂಗೀತ ಸೇವೆ, ಸಾಧನೆ ಅಮೋ[…] ವಾದದ್ದು. ಆಚಂದಾರ್ಕವಾಗಿ ಉಳಿಯ[…]

ವಂಥದ್ದು. ಪಾಶ್ಚಾತ್ಯ ಮತ್ತು ಭಾರತೀಯ ಸಂಗೀತ ಪದ್ಧತಿಗಳೆರಡರಲ್ಲಿಯೂ ಅವರಿಗೆ ವಿಶೇಷ ಆಸಕ್ತಿ, ಮತ್ತು ಪರಿಣತಿ.

ಪಾಶ್ಚಾತ್ಯ ಸಂಗೀತ

ಮಹಾರಾಜರ ಪಾಶ್ಚಾತ್ಯ ಸಂಗೀತ ಪ್ರೌಢಿಮೆ ಅಪೂರ್ವವಾದದ್ದು, ಅಚ್ಚರಿಗೊಳಿಸುವಂಥದು. ಪಿಯಾನೊ ಮತ್ತು ಪೈಪ್ ಆರ್ಗನ್ ನುಡಿಸುವುದರಲ್ಲಿ ಅವರು ನಿಪುಣರು, ನಿಷ್ಣಾತರು. ೧೯೩೭ ರಲ್ಲಿ ತಮ್ಮ ೧೮ ನೆಯ ವಯಸ್ಸಿನಲ್ಲಿಯೇ ಲಂಡನ್ನಿನ ಗಿಲ್ಡ್‌ಹಾಲ್ ಸಂಗೀತ ಶಾಲೆಯ 'ಲೈಸೆನ್ಸಿಯೇಟ್' ಪಡೆದ ಶ್ರೀ ಜಯಚಾಮರಾಜ ಒಡೆಯರ್ ಎಂಟು ವರ್ಷಗಳ ನಂತರ, ೧೯೪೫ ರಲ್ಲಿ ಟ್ರಿನಿಟಿ ಸಂಗೀತ ಕಾಲೇಜಿನ ಗೌರವ ಫೆಲೋ ಆದರು. ಮುಂದೆ, ಅವರು ಗೌರವ ಡಾಕ್ಟರೇಟ್ ಪಡೆದರು. ಕಡೆಗೆ, ಅವರು ಆ ವಿದ್ವತ್ಸಂಸ್ಥೆಯ ಉಪ ಪೋಷಕರೂ ಆದರು. ಅಂದಮೇಲೆ, ಅವರು ಪಾಶ್ಚಿಮಾತ್ಯ ಸಂಗೀತದಲ್ಲಿ ಅಪಾರ ವಿದ್ವತ್ತನ್ನು, ಪ್ರೌಢಿಮೆಯನ್ನು ಗಳಿಸಿಕೊಂಡಿದ್ದರೆಂದು ಪ್ರತ್ಯೇಕವಾಗಿ ಹೇಳಬೇಕೆ?

ವ್ಯಾಗ್ನರ್, ಮಾಹ್ಲರ್ ಬಾಕ್, ಬೀಥೊವೆನ್ ಮುಂತಾದ ಪಾಶ್ಚಾತ್ಯ ಸಂಗೀತ ಪ್ರಭೃತಿಗಳು ಮಹಾರಾಜರಿಗೆ ಅಚ್ಚುಮೆಚ್ಚು. ಅವರ ಬಳಿ ಇದ್ದ ಪಾಶಾತ್ತ್ಯ ಸಂಗೀತ ಧ್ವನಿಮುದ್ರಿಕೆಗಳ ಭಂಡಾರ, ಬಹುಶಃ, ಇಡೀ ಭಾರತದಲ್ಲಿಯೇ ಅತಿ ದೊಡ್ಡದು. ಅವರು ಅನೇಕ ಪಾಶ್ಚಾತ್ಯ ಸಂಗೀತ ವಿದ್ವಾಂಸರ, ವಾಗ್ಗೇಯಕಾರರ ಗೌರವಾದರಗಳಿಗೆ ಪಾತ್ರರಾಗಿದ್ದರು. ಅನೇಕ ಪಾಶ್ಚಾತ್ಯ ಸಂಗೀತ ವಿದ್ವಾಂಸರು ತಮ್ಮ ಕೃತಿಗಳನ್ನು ಪ್ರಭುಗಳಿಗೆ ಅಂಕಿತ ಮಾಡಿದ್ದಾರೆ.

ಕರ್ನಾಟಕ ಸಂಗೀತದ ಶ್ರೇಷ್ಠ ವಾಗ್ಗೇಯಕಾರ

ಕರ್ನಾಟಕ ಸಂಗೀತವನ್ನು ಆಳವಾಗಿ ಅಭ್ಯಾಸಮಾಡಿ, ತಾವೇ ಸ್ವತಃ ಕೀರ್ತನೆಗಳನ್ನು ರಚಿಸಿರುವ ಶ್ರೀ ಜಯಚಾಮರಾಜ ಒಡೆಯರ್ ಕರ್ನಾಟಕ ಸಂಗೀತ ಶ್ರೇಷ್ಠ ವಾಗ್ಗೇಯಕಾರರಲ್ಲೊಬ್ಬರು. ಅವರ ಕೃತಿಗಳು ಸಂಸ್ಕೃತ ಭಾಷೆಯಲ್ಲಿವೆ. ದೈವ ಮಹಿಮಾ ವರ್ಣನೆ, ಕರ್ತೃವಿನ ಆಂತರಿಕ ಭಕ್ತಿನಿವೇದನೆ ಅನನ್ಯಶರಣತಾ ಭಾವ-ಇವು ಈ ಕೀರ್ತನೆಗಳ ತಿರುಳು, ಅಂತರಾರ್ಥ. ಮಹಾರಾಜರು ಶ್ರೀ ವಿದ್ಯಾದೇವತೆಯ ಉಪಾಸಕರಾದುದರಿಂದ, ಅವರು ಮುತ್ತುಸ್ವಾಮಿ ದೀಕ್ಷಿತರಿಂದ ವಿಶೇಷವಾಗಿ ಪ್ರೇರಿತರಾಗಿದ್ದಾರೆ, ಪ್ರಭಾವಿತರಾಗಿದ್ದಾರೆ ಎನ್ನಲಡ್ಡಿಯಿಲ್ಲ. ಮುತ್ತುಸ್ವಾಮಿ ದೀಕ್ಷಿತರ 'ಕಮಲಾಂಬಾ ನವವರ್ಣ ಕೃತಿಗಳು' ನಮ್ಮ ಮಹಾರಾಜರ ಕೃತಿ ರಚನಾ ಪಥದಲ್ಲಿ ದಾರಿ ದೀವಿಗೆಗಳಾಗಿದ್ದಿರಬೇಕು. ದೀಕ್ಷಿತರ ಕೃತಿಗಳ ಆಳ, ವಿಸ್ತಾರ, ಗಾಂಭೀರ್ಯ, ಔನ್ನತ್ಯ, ಪ್ರಭಾವ-ಎಲ್ಲವೂ ಪ್ರಭುಗಳ ಕೃತಿಗಳಲ್ಲಿ ಎದ್ದುಕಾಣುತ್ತವೆ. "ಶಾಸ್ತ್ರ ದೃಷ್ಟಿಯಿಂದಲೂ, ಭಾವ ರಸಪಾರಮ್ಯ ದೃಷ್ಟಿಯಿಂದಲೂ ಅವು ಬಹುಮಟ್ಟಿಗೆ ದೀಕ್ಷಿತರ ಕೃತಿಗಳೊಡನೆ ಸಮತೂಗಬಲ್ಲುವು."

ಕೃತಿಗಳು

ಶ್ರೀ ಜಯಚಾಮರಾಜ ಒಡೆಯರು ಒಟ್ಟು ೯೪ ಕೃತಿಗಳನ್ನು ರಚಿಸಿದ್ದಾರೆ. ಕೃತಿಗಳ ಸಂಖ್ಯೆ ಅಷ್ಟೇನೂ ದೊಡ್ಡದಲ್ಲವಾದರೂ, ಒಂದೊಂದು ಕೃತಿಯೂ ಒಂದೊಂದು ಆಣಿ ಮುತ್ತು, ಅಪೂರ್ವ ಗೀತರತ್ನ!

ದೇವತಾ ಸ್ತೋತ್ರಗಳು

ಈ ಕೃತಿಗಳೆಲ್ಲವೂ ವಿವಿಧ ದೇವತೆಗಳ ಸ್ತೋತ್ರಗಳು. ೯೪ ಕೀರ್ತನೆಗಳಲ್ಲಿ ೬೦ ಅಂಬಿಕೆಗೆ ಮೀಸಲು. ಉಳಿದ ದೇವತೆಗಳ ಪಾಲು ಇಂತಿದೆ: ೧) ಗಣೇಶ : ೧೧ ೨) ಸರಸ್ವತಿ : ೨ ೩) ಲಕ್ಷ್ಮಿ : ೨ ೪) ವಿಷ್ಣು : ೪ ಮತ್ತು ೫) ಈಶ್ವರ : ೧೫

ಶ್ರೀ ವಿದ್ಯಾ ಅಂಕಿತ

ಮಹಾರಾಜರ ಹಲವು ಕೃತಿಗಳಲ್ಲಿ ಶ್ರೀಗುರುಚಿತ್ರಭಾನಂದ, ರಾಜಯೋಗೀಂದ್ರ ವಂದಿತಾಂ, ನಾಗಲಿಂಗವರಪುತ್ರಂ, ಧರಣೀಪಾಲಾರ್ಚಿತಾಂ ಎಂಬ ಪ್ರಯೋಗಗಳೂ ಇರುವುವಾದರೂ, ಬಹುತೇಕ ಕೃತಿಗಳಲ್ಲಿ ಶ್ರೀ ವಿದ್ಯಾಪರ ದೇವತಾಂ, ಶ್ರೀ ವಿದ್ಯಾನಿಲಯಂ, ಶ್ರೀ ವಿದ್ಯೇ ಎಂಬ ಪ್ರಯೋಗಗಳೇ ಇರುವುದರಿಂದ, ಅವರು ತಮ್ಮ ಇಷ್ಟದೇವತೆಯಾದ ಶ್ರೀವಿದ್ಯಾ-ಮೈಸೂರು ಅರಸರ ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿಯ ಅಪರಾವತಾರ-ಅಂಕಿತವನ್ನೇ ತಮ್ಮ ಕೃತಿಗಳಿಗೆ ಅಳವಡಿಸಿಕೊಂಡಿದ್ದಾರೆನ್ನಬಹುದು. ಯಾವ ಅಂಕಿತವೂ ಇಲ್ಲದ ರಚನೆಗಳೂ ಕೆಲವಿವೆ.

ಭಿನ್ನರಾಗಗಳು

ಪ್ರಭುಗಳು ತಮ್ಮ ೯೪ ಕೃತಿಗಳಿಗೆ ೯೪ ಭಿನ್ನ ರಾಗಗಳನ್ನು ಬಳಸಿದ್ದಾರೆ. ಅವುಗಳ ಪೈಕಿ ೩೧ ಸುಪ್ರಸಿದ್ಧ ಮೇಳರಾಗಗಳಾದರೆ, ೬೩ ವಿಭಿನ್ನ ಜನ್ಯರಾಗಗಳು. ಉದಾಹರಣೆಗೆ, ಸರಸ್ವತಿ ವಿಷಯಕವಾದ 'ವಂದೇ ಹಂಸದಾ', ಹಂಸನಟನಿಯಲ್ಲಿರುವ 'ಪಾಹಿ ಶ್ರೀ ರಾಜೇಶ್ವರಿ', ಧೀರ ಶಂಕರಾಭರಣ ಜನ್ಯವಾದ ಕೋಕಿಲಭಾಷಿಣಿಯಲ್ಲಿರುವ 'ಶ್ರೀ ವಿದ್ಯಾಮೋಹಿನಿ' ಮತ್ತು ವಿಜಯವಸಂತದಲ್ಲಿರುವ 'ವಿಮಲಾಂಬಿಕಾ' ಕೃತಿಗಳನ್ನು ಹೆಸರಿಸಬಹುದು. ನೀಲವೇಣಿಯಲ್ಲಿರುವ 'ಬಾಲಕೃಷ್ಣಂಭಜೇಹಂ' ಅವರ ಅಪೂರ್ವ ಕೃತಿರತ್ನ.

ಹೊಸ ಮತ್ತು ಅಪರೂಪವಾದ ರಾಗಗಳ ಬಳಕೆ :

ಹೊಸ ಹಾಗೂ ಅಪರೂಪವಾದ ರಾಗಗಳ ಬಳಕೆಯಲ್ಲಿ ನಮ್ಮ ಮಹಾರಾಜರು ಎತ್ತಿದ ಕೈ. ಅವರ ಹೊಸ ರಾಗಗಳಲ್ಲಿ "ಜಯಸಂವರ್ಧಿನಿ" ಬಲು ಸುಂದರವಾದುದು. ಸುಪ್ರದೀಪರಾಗ ಅಪರೂಪವಾದ ರಾಗಗಳಲ್ಲೊಂದು. ಆ ರಾಗದಲ್ಲಿದ್ದುದು ಒಂದೇ ಒಂದು ಕೃತಿ-ತ್ಯಾಗರಾಜರ "ವರಶಿಖಿವಾಹನ." ನಮ್ಮ ಮಹಾರಾಜರು ಈ ರಾಗದಲ್ಲಿ ವಿನಾಯಕಪರವಾದ "ಪಾಹಿಮಾಂ ಶ್ರೀ ಪಂಚಮತಂಗ" ಎಂಬ ಬಹು ಅಪೂರ್ವವಾದ ಕೃತಿಯನ್ನು ರಚಿಸಿ ಕೃತಾರ್ಥರಾಗಿದ್ದಾರೆ.

ಸುಪ್ರಸಿದ್ಧ, ಜನಪ್ರಿಯ ಕೃತಿಗಳು

ಅವರ "ಚಿಂತಯಾಮಿ" (ಹಿಂದೋಳ ರಾಗ), "ಜಾಲಂಧರ ಮಾಶ್ರಯೇ"

(ಗಂಭೀರನಟ), "ಕ್ಷೀರಸಾಗರಶಯನ" (ಮಾಯಾಮಾಳವ ಗೌಳ), "ಮಹಾಗಣಪತೇ" (ಅಠಾಣ), "ಭೂರಿಭಾಗ್ಯಲಹರಿ" (ಪ್ರತಾಪವರಾಳಿ), "ಬ್ರಹ್ಮಾಂಡವಲಯೇ" (ಮಲಹ), "ದುರ್ಗಾದೇವಿ ಸಂರಕ್ಷ ತುಮಾಂ"(ಧರ್ಮವತಿ) ಮತ್ತು "ಶಿವಶಿವ ಶಿವಭೊ" (ನಾದನಾಮಕ್ರಿಯೆ) ಇವು ಶ್ರೀ ಜಯಚಾಮರಾಜ ಒಡೆಯರ್ ಅವರ ಬಹು ಪ್ರಸಿದ್ಧವಾದ, ಜನಪ್ರಿಯ ಕೃತಿಗಳಲ್ಲಿ ಕೆಲವು ಮಾತ್ರ.

ಧ್ರುವಾದಿ ಸಪ್ತತಾಳಗಳ ವಿವಿಧ ಜಾತಿಗಳಲ್ಲಿ ರಚಿತವಾಗಿರುವ ಈ ಕೃತಿಗಳು ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳಿಂದ ಕೂಡಿದ್ದು, ವಿಳಂಬ ಹಾಗೂ ಮಧ್ಯ ನಡೆಯಲ್ಲಿವೆ.

ಹೆಚ್ಚುತ್ತಿರುವ ಜನಪ್ರಿಯತೆ

ಶ್ರೀ ಜಯಚಾಮರಾಜ ಒಡೆಯರ ಅತ್ಯದ್ಭುತ ಕೃತಿ ರಚನಾ ಸಾಮರ್ಥ್ಯ ಬೆಳಕಿಗೆ ಬರಲು ಕೆಲವು ಕಾಲವೇ ಹಿಡಿಯಿತು. ಇತ್ತೀಚಿನ ವರ್ಷಗಳಲ್ಲಿ ಅವರ ಕೃತಿಗಳು ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿರುವುದು ಸಂತೋಷದ ಸಂಗತಿ. ಭಾರತರತ್ನ ಡಾ॥ ಎಂ. ಎಸ್. ಸುಬ್ಬುಲಕ್ಷ್ಮಿಯವರು ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಮಹಾಧಿವೇಶನದಲ್ಲಿ ಮಹಾರಾಜರ "ಶಿವಶಿವಭೊ" ಕೃತಿಯನ್ನು ಹಾಡಿ, ವಾಗ್ಗೇಯಕಾರ ಶ್ರೀ ಜಯಚಾಮರಾಜ ಒಡೆಯರನ್ನು ಇಡೀ ಜಗತ್ತಿಗೇ ಪರಿಚಯ ಮಾಡಿಕೊಟ್ಟರು.

"ಈ ಕೃತಿಗಳ ಭಾಷೆ ಕ್ಲಿಷ್ಟ. ಸಂಸ್ಕೃತ ತಿಳಿಯದವರಿಗೆ ಗ್ರಹಿಸಲು ತೊಡಕು" ಎಂದಿದ್ದಾರೆ, ಸಂಗೀತ ವಿದ್ವಾನ್ ಶ್ರೀ ಚನ್ನಕೇಶವಯ್ಯನವರು.

ಒಟ್ಟಿನಲ್ಲಿ, ಕರ್ನಾಟಕ ಸಂಗೀತ ಪ್ರಪಂಚದ ಶ್ರೇಷ್ಠ ವಾಗ್ಗೇಯಕಾರರಾದ ತ್ಯಾಗರಾಜ, ಮಹಾರಾಜ, ಸ್ವಾತಿತಿರುನಾಳ್, ಮುತ್ತುಸ್ವಾಮಿ ದೀಕ್ಷಿತರು, ಮೈಸೂರು ವಾಸುದೇವಚಾರ್ಯರು ಇವರ ಅಗ್ರ ಪಂಕ್ತಿಯಲ್ಲಿ ವಾಗ್ಗೇಯಕಾರ ಶ್ರೀ ಜಯಚಾಮರಾಜ ಒಡೆಯರಿಗೆ ಒಂದು ಸ್ಥಾನ ಮೀಸಲು. ಕರ್ನಾಟಕ ಸಂಗೀತದ ಇತಿಹಾಸದಲ್ಲಿ ಅವರ ಹೆಸರು ಆ ಚಂದ್ರಾರ್ಕವಾಗಿ ಉಳಿಯುತ್ತದೆ.

ತಾವೇ ಶ್ರೇಷ್ಠ ಗಾಯಕರೂ, ವಾದಕರೂ, ವಾಗ್ಗೇಯಕಾರರೂ ಆಗಿದ್ದ ಮೈಸೂರಿನ ಕಡೆಯ ದೊರೆ ತಮ್ಮ ವಂಶದ ಭವ್ಯ ಪರಂಪರೆಯನ್ನು ಮುಂದುವರಿಸಿ, ತಮ್ಮ ಆಸ್ಥಾನದಲ್ಲಿ ಸಂಗೀತಕ್ಕೂ, ಸಂಗೀತ ವಿದ್ವಾಂಸರಿಗೂ ವಿಶೇಷ ಪ್ರೋತ್ಸಾಹ ನೀಡಿದರು. ಅಲ್ಲದೆ, ಅವರು ಕೇಂದ್ರ ಸಂಗೀತ-ನಾಟಕ ಅಕಾಡೆಮಿಯ ಅಧ್ಯಕ್ಷರಾಗಿಯೂ, ಸ್ಥಾಯೀ ಸಲಹಾ ಸಮಿತಿಯ ಸದಸ್ಯರಾಗಿಯೂ ಸ್ಮರಣೀಯ ಸೇವೆ ಸಲ್ಲಿಸಿದರು.

"ಶ್ರೀ ಜಯಚಾಮರಾಜ ಒಡೆಯರ ಸ್ಮರಣೆಯನ್ನು ವರ್ಷಕ್ಕೊಂದು ಬಾರಿಯಾದರೂ ಜನರ ಮನಸ್ಸಿಗೆ ತರುತ್ತಾ, ಅವರ ಆದರ್ಶಗಳನ್ನು ಚಿರಂಜೀವಿಯಾಗುವಂತೆ ಮಾಡುವುದು ದೇಶಕ್ಕೊಂದು ದೊಡ್ಡ ಸೇವೆಯಾದೀತು."

—ಡಾ॥ ಡಿ. ವಿ. ಗುಂಡಪ್ಪ.

ಅಮೃತೋದಯ

ಸರಸ್ವತಿ ಬಡೆಕ್ಕಿಲ
ಎಂ.ಐ.ಜಿ– ೧೦ನೇ ಅಡ್ಡರಸ್ತೆ
೩ನೇ ಮುಖ್ಯ ರಸ್ತೆ, ೧ನೇ ಹಂತ, ೬ನೇ ಘಟ್ಟ
ಶಾರದಾದೇವಿನಗರ, ಮೈಸೂರು–೫೭೦ ೦೨೩

ಸುಖೀವ್ಯಕ್ತಿ ವರ್ತಮಾನದಲ್ಲಿ ಸಂತೃಪ್ತ, ಭೂತದ ಬಗ್ಗೆ ಅಲಿಪ್ತ ಭವಿಷ್ಯದ ಬಗ್ಗೆ ನಿರ್ಲಿಪ್ತ. ಆದ್ದರಿಂದ ಈಗ ಇಲ್ಲಿ "ಅಮೃತೋದಯ !"

ಹಲವಾರು ವರ್ಷ ವಿಶ್ವಪರ್ಯಟನೆಯಲ್ಲಿ ಕಾಲಕಳೆದ ಮೇಲೆ ನನ್ನ ಹುಟ್ಟೂರಿಗೆ— ದೊಡ್ಡಪ್ಪನ ಮಗ 'ರೈಲೀ'ಯ ಮನೆಗೆ— ಬಂದಿದ್ದೆ. ಇದುವರೆಗೂ ಬೇರೆಲ್ಲೂ ಹೋಗದೆ ನಮ್ಮ ಹಿರಿಯರ ಹೊಲಗದ್ದೆಯಲ್ಲೇ ಅತ ಶಾಶ್ವತವಾಗಿ ನೆಲಸಿಬಿಟ್ಟಿದ್ದ. ಅದು, ಇದು ಮಾತಾಡಿಕೊಳ್ಳುತ್ತಾ ಗದ್ದೆಯ ಏರಿಯ ಮೇಲೆ ನಡೆದು, ಅಲ್ಲೊಂದು ಮರದ ದಿಮ್ಮಿಯ ಮೇಲೆ ನಾವಿಬ್ಬರೂ ಕುಳಿತೆವು. ನಾನು ನಮ್ಮಣ್ಣನಿಗೆ ಲಂಡನ್, ಪ್ಯಾರಿಸ್, ಮ್ಯಾಡ್ರಿಡ್, ನ್ಯೂಯಾರ್ಕ್ ನಗರಗಳ ಕಥೆಗಳನ್ನು ಹೇಳುತ್ತಿದ್ದಾಗ ಆಸಕ್ತಿಯಿಂದ ಆಲಿಸುತ್ತಾ ಖುಶಿಪಡುತ್ತಿದ್ದರೂ ಅವನ ಕೈಗಳು ಹರಿತವಾದ ಕತ್ತಿಯಿಂದ ಮರದ ಗೆಲ್ಲೊಂದನ್ನು ಕೆತ್ತುವುದರಲ್ಲಿ ಮಗ್ನವಾಗಿದ್ದುವು.

ಘಟ್ಟನೆ ಮೆಲುಗಾಳಿಗೆ ಅದುರುತ್ತಿದ್ದ ಎಲೆಗಳ ಮೃದು ಮರ್ಮರಧ್ವನಿ ನನ್ನನ್ನು ಆಕಡೆಗೆ ಸೆಳೆಯಿತು. ಗಾಳಿಯನ್ನು ಸೀಳುತ್ತಾ ಆಕಾಶದುದ್ದಕ್ಕೂ ಹಾರಿಹೋದ ಹಕ್ಕಿಯೊಂದರ ದೀರ್ಘಸುಸ್ವರ ತಾನೇ ತಾನವಾ... ನನ್ನ ಕಿವಿಗಳನ್ನು ತಟ್ಟಿ ಎಚ್ಚರಿಸಿತು ನಾನು ಹೇಳ ಹೊರಟಿದ್ದ ಕಥೆ ಮರೆತ... ಹೋಯಿತು. ಹಕ್ಕಿಯ ಮಧುರ ಆಲಾಪ... ಎಲೆಗಳ ನರ್ತನ, ಗಾಳಿಯೊಡನೆ ನುಡಿ... ಪಿಸುಮಾತು, ದಶಕಗಳ ಹಿಂದಕ್ಕೆ ನನ್ನನ್ನು ಕರೆದೊಯ್ದುವು. ಅಂದೊಂದು ದಿ... ಇಂಥದೇ—ವಿವರಿಸಲಾಗದ, ಶಬ್ದಗಳಿ... ನಿಲುಕದ, ಆನಂದಾನುಭವ–ಇದೇ ಬಯ... ನಲ್ಲಿ ನನಗಾಗಿತ್ತು.

ಆಗ ನನಗೆ ಕೇವಲ ೧೫ ವರ್ಷ ರೈಲೀ... ೨೦. ರೈಲೀ ಅಂದೇ ಉಳುಮೆ ಮುಗಿ... ಬಿಡಬೇಕಾಗಿತ್ತು. ಅದಕ್ಕಾಗಿ ರಾತ್ರಿಯೆ... ಕೆಲಸಮಾಡುವುದೆಂದು ತೀರ್ಮಾನಿಸಿದ್ದ... ನಾನು ಆಗತಾನೆ ಟ್ರ್ಯಾಕ್ಟರ್ ನಡೆಸ... ಕಲಿತುಕೊಂಡಿದ್ದೆ; ಅಣ್ಣನಿಗೆ ಸಹಾ... ಮಾಡುವ ಉತ್ಸಾಹದಿಂದಿದ್ದೆ. ನಾವಿಬ್ಬರ...

ಆಧಾರ : ಲೇಖನ : ಎಟರ್‌ನಲ್ ಸನ್‌ರೈಸ್, ಕೃತಿ : ಮೇಕಿಂಗ್ ದಿ ಮೋಸ್ಟ್ ಆಫ್ ಯುವ... ಲೈಫ್—ಎ ರೀಡರ್ಸ್ ಡೈಜೆಸ್ಟ್ ಗೈಡ್.

ಸರದಿಯಲ್ಲಿ ಸ್ವಲ್ಪ ಉಳುವುದು, ಮತ್ತೆ ಸ್ವಲ್ಪ ಹೊತ್ತು ಒಣಹುಲ್ಲ ರಾಶಿಯಲ್ಲಿ ಮಲಗಿ ನಿದ್ರಿಸುವುದು, ಪುನಃ ಎದ್ದು ಟ್ರ್ಯಾಕ್ಟರ್ ನಡೆಸುವುದು, ಈ ರೀತಿ ಮಾಡುತ್ತಾ ಇದ್ದೆವು. ನಮ್ಮ ಸಹಾಯಕ ನಡುರಾತ್ರಿಯ ಸಮಯ ನಮಗೆ, ಕಾಫಿ, ಸ್ಯಾಂಡ್‌ವಿಚ್, ತರಲಿದ್ದ. ಹೊಲದ ಬದಿಯಲ್ಲಿ ಹುಲ್ಲ ರಾಶಿಯ ಮೇಲೆ ನಿದ್ರೆಯ ಪಾಳಿ ಮುಗಿದು ನಾನು ಎಚ್ಚರಗೊಂಡಾಗ ರಾತ್ರಿ ಹನ್ನೊಂದೂವರೆಗಂಟೆ. ದಿಗಂತದ ಆಕೊನೆಯಲ್ಲಿ ಚಂದ್ರ ಮೆಲ್ಲನೆ ಮೂಡಿ ಬರುತ್ತಾ ಇದ್ದ. ಅನತಿದೂರದಲ್ಲಿ ಟ್ರ್ಯಾಕ್ಟರ್ ರಭಸದಿಂದ ಮುನ್ನುಗ್ಗುತ್ತಾ ಇತ್ತು. ಉಳುಮೆಯ ಸಾಲುಗಳ ಮೇಲೆ ಬೆಳಕು ಚೆಲ್ಲುತ್ತಾ ಅದು ಮುಂದಕ್ಕೆ ಸಾಗುತ್ತಿದ್ದಾಗ ಬೆಳಕು ಸಾಲುಗಳನ್ನು ನುಂಗುತ್ತಾ ಹೋಗುತ್ತಿದೆಯೋ ಎಂಬಂತೆ ಭಾಸವಾಗುತ್ತಿತ್ತು. ಸಾಲಿನ ಕೊನೆಗೆ ತಲುಪಿದೊಡನೆ ರೈಲೀ ಟ್ರ್ಯಾಕ್ಟರ್‌ನಿಂದ ಕೆಳಕ್ಕೆ ಜಿಗಿದ. ಕೈಯಲ್ಲೊಂದು ಪುಸ್ತಕವಿತ್ತು. ಟ್ರ್ಯಾಕ್ಟರಿನ ಬೆಳಕಿನಲ್ಲಿ ಒಂದರ್ಧ ನಿಮಿಷ ಓದಿದ. ಕವನವೊಂದನ್ನು ಕಂಠಪಾಠ ಮಾಡತೊಡಗಿದ್ದ. 'ವಾಲ್ಟ್‌ವ್ಹಿಟ್‌ಮನ್' ಬರೆದ ಕವನವದು —"ಸೇಬುಗಳ ಅರಳಿಸಿದ ಶ್ರೀಮಂತ ನೆಲವೇ! ಅದೊ ನೋಡು! ನಗೆಬೀರು! ಬಂದ ಪ್ರಿಯಕರನು!"—

ಇಪ್ಪತ್ತು ವರ್ಷದ ರೈಲೀ ಅತಿಯಾದ ಓದುಗ. ಆ ಹಳ್ಳಿಯಲ್ಲಿ ಅವನಷ್ಟು ಓದುವವರು ಯಾರೂ ಇಲ್ಲವೆಂದು ಅಲ್ಲಿಯ ವಾಚನಾಲಯದ ಮುಖ್ಯಸ್ಥ ಯಾವಾಗಲೂ ಹೇಳುವುದಿತ್ತು.

ಕಣ್ಣ ಮುಂದಿನ ದೃಶ್ಯವನ್ನು ನೋಡುತ್ತಿದ್ದಂತೆ ವಿಚಿತ್ರವಾದೊಂದು ಪ್ರಕಾಶ ನನ್ನೆಡೆಗೆ ಹರಿದು ಬರುತ್ತಿರುವಂತೆ, ನನ್ನ ಮೇಲೆಯೇ ಕೇಂದ್ರೀಭವಿಸಿದಂತೆ ಕಂಡಿತು. ಮೂಡಿಬಂದ ಚಂದ್ರ, ಟ್ರ್ಯಾಕ್ಟರ್, ವಿಶಾಲ ಬಯಲು, ಬಯಲನ್ನು ಸುತ್ತುವರಿದ ಮರಗಳು, ಒಣಹುಲ್ಲರಾಶಿ, ನಾಲ್ಕೂ ದಿಕ್ಕುಗಳ ದೃಶ್ಯಾವಳಿ ಒಮ್ಮೆಗೇ ಕಣ್ಮುಂದೆ ನಿಂತಂತಾಯಿತು. ಮಾಯೆಯ ಬೆಳಕು ನವುರಾಗಿ ಎಲ್ಲೆಡೆ ಹಾಸಿದಂತಾಯ್ತು. ಉಸಿರಾಡಿದರೂ ಈ ಸೌಂದರ್ಯ ಅದೃಶ್ಯವಾದೀತೆಂದು ನಿಸ್ತಬ್ಧನಾಗಿ ಎವೆ ಇಕ್ಕದೆ ನೋಡಿದೆ. ಕಾಲವು ನಿಶ್ಚಲವಾದಂತೆನಿಸಿತ್ತು ಅದರ ಚಲನೆ ಮತ್ತೆ ಎಂದೂ ಆರಂಭಗೊಳ್ಳದಿರಲೆಂದು ಆಶಿಸಿದ್ದೆ.

ಇಂದು, ಮತ್ತೊಮ್ಮೆ ಹಲವು ವರ್ಷ ಕಳೆದಾದ ಮೇಲೆ, ಈ ಮರದ ದಿಮ್ಮಿಯ ಮೇಲೆ ಅದೇ ಅನಿರ್ವಚನೀಯ ಆನಂದದ ಸಾಕ್ಷಾತ್ಕಾರವಾಯಿತು. ಆ ದೃಶ್ಯದೊಳಗೆ ನಾನಿದ್ದೆ. ಅದರ ಒಂದಂಶವಾಗಿದ್ದೆ. ರೈಲಿಗೆ ಅದನ್ನು ವಿವರಿಸಲು ಪ್ರಯತ್ನಿಸಿದೆ. ಅದು ಅಸಾಧ್ಯವೆಂದೂ ನನಗೆ ಗೊತ್ತಿತ್ತು. ಹಿಂದಿನ ಬಾರಿ ಕಂಡ ಅದ್ಭುತವನ್ನು ಮತ್ತೊಮ್ಮೆ ನೆನೆದೆ, ರೈಲೀ ತಲೆದೂಗಿದ. ತತ್‌ಕ್ಷಣ ನನಗೆ ಒಂದು ವಿಚಾರ ಸ್ಪಷ್ಟವಾಯಿತು. ರೈಲೀಗೆ ಇವೆಲ್ಲಾ ಗೊತ್ತಿದೆಯೆಂದು, ಅದನ್ನು ಸ್ವತಃ ಅನುಭವಿಸಿರುವನೆಂದು ಅರ್ಥವಾಯಿತು.

"ಇದರ ರಹಸ್ಯ ನಿನಗೆ ಗೊತ್ತಿದೆ ಹಾಗಿದ್ದರೆ! ಏನದು?" ನಾನು ವಿಸ್ಮಯದಿಂದ ಕಿರಿಚಿಕೊಂಡೆ. ರೈಲೀ ತನ್ನ ಕೈಯಲ್ಲಿದ್ದ ಚೂರಿಯನ್ನು ಪಕ್ಕದಲ್ಲಿರಿಸಿ, ಹೇಳಿದ—

ಯಾರೂ ಅದನ್ನು ವಿವರಿಸಲಾರರು, ಅದು ವರ್ಣನಾತೀತ. ನಾನು ಓದಿದ ಹಲವು ಪುಸ್ತಕಗಳಲ್ಲಿ ಅದರ ಸೂಚನೆ ಇದೆ. ಇಂಗಿತ ವಿದೆ. ಆದರೆ ಮೊದಲು ನಾನದನ್ನು ಅನುಭವಿಸಿದ್ದೆ—ನಿನ್ನಂತೆ. ಅದನ್ನು ಬರೆಯು ಹೊರಟವರಿಗೂ ಅದು ಅನುಭವಕ್ಕೆ ಬಂದಿತ್ತು. ಅವರೆಲ್ಲರಿಗೂ ಇದೇ ಆನಂದ! ಇದೇ ಅನುಭಾವ!

"ಆದರೆ ಏನದು?"

"ಅದನ್ನು ಒಂದೇ ವಾಕ್ಯದಲ್ಲಿ ಹೇಳುವು ದಾದರೆ, ಅದು ಹೀಗೆ—ಸಂಪೂರ್ಣ ಪ್ರಜ್ಞೆ ಆನಂದ ತರುವುದು. ನಿಗೂಢರಹಸ್ಯಗಳ ಲ್ಲೊಂದು ಎಂದರೆ ವಿಶ್ವದಲ್ಲಿ ಸಹಜರೂಪದ ಆನಂದ ಅಡಕವಾಗಿರುವುದು, ಪ್ರಕೃತಿಯಲ್ಲಿ ನಮ್ಮ ಸುತ್ತುಮುತ್ತು ನಾವು ನೋಡುವ ಸೂರ್ಯೋದಯ, ಸೂರ್ಯಾಸ್ತ, ಜಲ ಪಾತ, ಯಾವುದೋ ಒಂದು ವಿಶಿಷ್ಟ ವೆನಿಸುವ ಕಲ್ಲುಬಂಡೆ, ಒಂದು ಹುಲ್ಲು ಚಿಗುರು, ಯಾವುದಾದರೊಂದರಲ್ಲಿ ನಿಮ್ಮ ಬುದ್ಧಿ, ಮನಸ್ಸು, ಇಂದ್ರಿಗಳನ್ನು ತೆರೆದಿರಿಸಿ ಕೊಂಡರೆ—ಆಗ ಆನಂದ ಝಲ್ಲನೆ ನಿಮ್ಮನ್ನಾವರಿಸುವುದು.

ನಿಮ್ಮನ್ನು ತೆರೆದುಕೊಳ್ಳುವುದೆಂದರೆ, ನಿಜವಾಗಿಯೂ ನಿಮ್ಮನ್ನು ನೀವು ಅರಿತವ ರಾಗಿರುವುದು, ಭೂತ ಭವಿಷ್ಯತ್ಕಾಲಗಳನ್ನು ಸ್ವಲ್ಪ ಹೊತ್ತಿಗಾದರೂ ಮರೆತುಬಿಡುವುದು. ಟಿ. ಎಸ್. ಈಲಿಯಟ್‌ರ ಕವನ ವರ್ಣಿಸಿ ದಂತೆ—ಅನವರತ ಚಲಿಸುತ್ತಿರುವ ಈ ವಿಶ್ವ ದಲ್ಲಿರುವ ನಿಶ್ಚಲ ಬಿಂದು ಎಂದರೆ ವರ್ತಮಾನ ಕಾಲ, ಸತ್ಯವಾದ ವಾಸ್ತವ ವೆಂದರೆ ವರ್ತಮಾನ! ಭೂತಕಾಲ ಕಳೆದು

ಹೋಗಿದೆ ಅದು ಇನ್ನಿಲ್ಲ! ಭವಿಷ್ಯ ಇನ್ನೂ
ಬಂದಿಲ್ಲ. ಇರುವುದು ಒಂದೇ ವರ್ತಮಾ
ಮಾತ್ರ.

ಬಹುಕಾಲದ ಹಿಂದೆ, ನಿನಗೆ ಸೌಂದರ್ಯ
ಸಾಕ್ಷಾತ್ಕಾರವಾಗಲು ಕಾರಣ—ಅಪರಿಚಿ
ವಾದ, ಸಾಮಾನ್ಯವಲ್ಲದ ಪರಿಸ್ಥಿತಿ. ಹುಲ್ಲಿ
ರಾಶಿಯ ಮೇಲೆ ಮಲಗಿದ್ದ ನಿನಗೆ ಎಚ್ಚರ
ದಾಗ ಎಲ್ಲವೂ ತಲೆಕೆಳಗಾದಂತೆ ಕಂಡಿ
ಬೇಕು. ನೀನು ಭವಿಷ್ಯದ ಯೋಚನೆಮಾಡ
ವುದನ್ನು ನಿಲ್ಲಿಸಿದೆ. ಭೂತಕಾಲವನ
ಮರೆತೆ. ಅಲ್ಲಿ ನೀನು 'ಈಗ'ದಲ್ಲಿದ್ದೆ. ಚಿ
ಮಕ್ಕಳಿಗೆ ಇಂಥಕ್ಷಣಗಳು ಬಹುಸುಲಭವಾ
ಮೇಲಿಂದ ಮೇಲೆ ಲಭಿಸುತ್ತ
ಬೆಳೆಯುತ್ತ ಬಂದಂತೆ ಆಶಕ್ತಿಯನ್ನು ಕಳೆ
ಕೊಳ್ಳುತ್ತವೆ. ಆತ್ಮಾನಂದದ ಮಸುಕ
ಸ್ಮರಣೆ ಅದನ್ನು ಮತ್ತೊಮ್ಮೆ ಪಡೆಯ
ಕೆಲವರಿಗೆ ಪ್ರೇರಣೆಯಾಗುವುದಿದೆ. ಅವ
ತಮ್ಮ ಮುಂದಿನ ಜೀವನಪೂರ್ತಿ ಅ
ಅನ್ವೇಷಣೆಯಲ್ಲಿ ತೊಡಗುತ್ತಾರೆ. ಅ
ನೆಂದು ವಿಶ್ಲೇಷಿಸುತ್ತಾರೆ. ಆದರೆ ಹೆಚ್ಚಾ
ಅದೊಂದು ಗುರಿ ಮುಟ್ಟಲಾಗದ ಪ್ರಯ
ವಾಗಿಬಿಡುವುದು. ತಮ್ಮ ಅಂತಿಮ ಘಳಿಗೆ
ವರೆಗೂ ಹೇಳಲಾಗದ ನಿರಾಶೆಯ
ಆಯುಷ್ಯವನ್ನು ಕಳೆಯುತ್ತಾರೆ.

'ಸ್ಕೋಪೆನ್ ಹೋವರ್' ಇನ್ನೊ
ರೀತಿಯ ಜನರ ಬಗ್ಗೆ ಹೇಳುತ್ತಾರೆ
ಮನುಷ್ಯರಲ್ಲಿ ಹೆಚ್ಚಿನವರೆಲ್ಲ ಕಸ ಎ
ನವರು. ಅರ್ಥಾತ್ ರಸವಿರುವುದನ್ನು ಗಮ
ಸದೆ, ಕಸವನ್ನೇ ಆಯ್ದುಕೊಳ್ಳುವವರು

ಒಂದು ಸುಂದರ ಕಾಡಿನೊಳಗ
ಹೋಗುತ್ತಿದ್ದರೆ ಅವರ ಮನಸ್ಸಿನಲ್ಲಿ ಮ

ಬರುವ ವಿಚಾರಗಳು ಹೆಚ್ಚಾಗಿ ಹೀಗಿರುತ್ತವೆ—"ಈ ಮರದಿಂದ ನನಗೆಷ್ಟು ಲಾಭವಾದೀತು? ಇದರಿಂದ ಎಷ್ಟು ಘನ ಅಡಿ ಮೋಪು ಸಿಗಬಹುದು? ಕಳೆದ ವರ್ಷ ಎಷ್ಟೋ ಗಳಿಸಿಕೊಂಡೆ ಈ ವರ್ಷ ಇನ್ನೂ ಹೆಚ್ಚು ಗಳಿಸಬೇಕು." ಇತ್ಯಾದಿಯಾಗಿ ಅವರೆಲ್ಲ ಒಂದೋ ಭೂತಕಾಲದ ಬಗ್ಗೆ, ಇಲ್ಲವೆ ಭವಿಷ್ಯದ ಬಗ್ಗೆ ಯೋಚಿಸುತ್ತಿರುತ್ತಾರೆ. ಮುಂದೆ "ಹೀಗಾದೇನು," "ಹಾಗಾದೇನು" ಎಂದು ಕಲ್ಪನೆ ಮಾಡಿಕೊಳ್ಳುವರೇ ವಿನಾ ಇಂದು ನಾನೆಲ್ಲಿದ್ದೇನೆ, ಏನಾಗಿರುವೆ ಇದರ ಬಗ್ಗೆ ಚಿಂತಿಸುವುದಿಲ್ಲ. ಅವರೆಂದೂ ವರ್ತಮಾನದಲ್ಲಿರುವುದಿಲ್ಲ.

ಆ ಕಾಡಿನೊಳಕ್ಕೆ ಕಲಾವಿದನೋ, ಕವಿಯೋ ಬರುತ್ತಾನೆ ಎಂದಿಟ್ಟುಕೊಳ್ಳಿ. ಅವನಿದುವರೆಗೂಒಂದೇ ಒಂದು ಚಿತ್ರವನ್ನೂ ಬಿಡಿಸಿಲ್ಲ. ಒಂದು ಮರದ ಮುಂದೆ ಅದನ್ನು ನೋಡುತ್ತಾ ನಿಲ್ಲುತ್ತಾನೆ. ಆತ ಅದರಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ತನ್ನ ಭವಿಷ್ಯದ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಯೋಚಿಸುವವನೂ ಅವನಲ್ಲ. ಕಾಡಿನ ಸೌಂದರ್ಯವನ್ನಾಸ್ವಾದಿಸುವುದೊಂದೇ ಅವನ ಉದ್ದೇಶ. ತನಗಾಗಿ ಮಾಡಿಕೊಂಡ ಹಂಚಿಕೆ ಯಾವುದೂ ಅವನಲ್ಲಿಲ್ಲ. ತನ್ಮಯತೆಯಿಂದ ನೋಡುತ್ತಿದ್ದರೆ ಅಲ್ಲಿ ಆತನ 'ಸ್ವ' ಮರೆತು ಹೋಗುತ್ತದೆ. ಕಾಲ ನಿಶ್ಚಲವಾಗುತ್ತದೆ. ಅವನ ಅಸ್ತಿತ್ವ ಕೇವಲ ವರ್ತಮಾನದಲ್ಲಿದೆ. ಮರಗಿಡ ಬಳ್ಳಿಗಳ ಆ ನೋಟದಲ್ಲಿ ಆತನ ಪಂಚೇಂದ್ರಿಯಗಳು ಮನೋಬುದ್ಧಿಗಳನ್ನೊಳಗೊಂಡು, ಕೇಂದ್ರೀಕರಿಸಿವೆ. ಸುತ್ತೆಲ್ಲ ಕೇವಲ ಸೌಂದರ್ಯ. ಆನಂದ ಯಾರೂ ಕೇಳದೇ ಅಲ್ಲಿಗೆ ಬಂದು ಸೇರುತ್ತದೆ.

"ನೀನು ಅದನ್ನು ಹೇಗೆ ವರ್ಣಿಸುತ್ತೀ ಎಂಬುದು ಇಲ್ಲಿ ಮುಖ್ಯವಲ್ಲ. ನಿನ್ನ ಅನುಭೂತಿ, ನಿನ್ನ ಮೇಲಾಗುವ ಪರಿಣಾಮ, ಅದೇ ಗಣನೆಗೆ ಪಾತ್ರವಾಗುವುದು. ಕೆಲವರು ಈ ರೀತಿ ನಂಬುತ್ತಾರೆ—ವಿಶ್ವದಲ್ಲಿ ಏನೇನೆಲ್ಲ ಇದೆಯೋ ಅದೆಲ್ಲಾ—ಗಾಳಿಗೆ ತೊನೆದಾಡುವ ಗೋಧಿಯ ಹೊಲ, ದೂರ ದಿಗಂತದಲ್ಲಿ ಕಾಣುವ ಮೋಡ ಮುಸುಕಿದ ಬೆಟ್ಟಗಳ ಸಾಲು, ಹತ್ತಿಯ ರಾಶಿಯಂತೆ ಆಕಾಶದ ಉದ್ದ-ಅಗಲಕ್ಕೂ ಹರಡಿರುವ ಬೆಳ್ಮುಗಿಲ ಹಿಂಡು ಮೆಲ್ಲಮೆಲ್ಲನೆ ಸರಿಯುತ್ತ ಜಾರುತ್ತ ಸಾಗುವ ನೋಟ, ಚಳಿಗಾಲದ ಮೊದಲ ಹಿಮಪಾತ, ಎಲ್ಲದರಲ್ಲೂ ಒಂದೊಂದು ಅಸ್ತಿತ್ವವಿದೆ. ಅದರಲ್ಲಿ ಅದರದೇ ಆತ್ಮವಿದೆ. ಜಡವಿರಲಿ, ಚೇತನವಿರಲಿ, ಎಲ್ಲ ವಸ್ತುಗಳಲ್ಲೂ ಇಂಥ ಭಾವವನ್ನು ಭಾವಿಸಬಲ್ಲೆವಾದರೆ, ಆಗ ಅವೆಲ್ಲದರ ಮೇಲೆ ಪ್ರೀತಿ ಹುಟ್ಟುವುದು. ಆನಂದಾತಿಶಯ ಹೊಂದಲು ಬೇಕಾದ ಮುಖ್ಯ ಮೂಲ ಸ್ರೋತಸ್ಸೇ ಪ್ರೇಮ. ಆದರೆ ನಮ್ಮ ಪ್ರೀತಿ ಅದನ್ನು ವಶಪಡಿಸಿಕೊಳ್ಳುವುದರಲ್ಲಿರಕೂಡದು.

ಇದನ್ನು ಸಮರ್ಪಕ ಶಬ್ದಗಳಲ್ಲಿ ವಿವರಿಸಿದವನು ವಿಲಿಯಂ ಬ್ಲೇಕ್. "ಆನಂದವನ್ನು ತನಗಾಗಿ ಬಂಧಿಸಹೊರಡುವುದೆಂದರೆ, ಆ ಪುಟದೇಳುವ, ಅನಂತ ಆಗಸದಲ್ಲಿ ಹಾರಾಡುವ ಆ ಚೈತನ್ಯಬಿಂದುವನ್ನು ಚುಂಬಿಸಿ ಯಾರು ಕೃತಾರ್ಥರಾಗುತ್ತಾರೋ ಅವರು ಶಾಶ್ವತವಾದ, ಅಮೃತಮಯವಾದ ಸೂರ್ಯೋದಯದಲ್ಲಿ ಬಾಳುತ್ತಿರುತ್ತಾರೆ."

ಮಾರ್ಟಿನ್ ಬ್ಯೂಬರ್ ಹೇಳುವುದು ಹೀಗೆ—"ವಸ್ತುಗಳನ್ನು, ಗಿಡಮರಗಳನ್ನು

೭

ಜಗತ್ತಿನ ಎಲ್ಲ ಮನುಷ್ಯರನ್ನು, ಕೋಟಿ ಕೋಟಿ ಜೀವಿಗಳನ್ನು, ನಕ್ಷತ್ರಗಳನ್ನು ಕೂಡ "ತ್ವಂ" ಅರ್ಥಾತ್ 'ನೀನು' ಎಂಬುದಾಗಿ ತಿಳಿದುಕೊಂಡಾಗ ಮಾತ್ರ ನಾವು ಜಗತ್ತನ್ನು ಪ್ರೀತಿಸಬಲ್ಲೆವು ಮತ್ತು ಅದೇ ಭಾವದಿಂದ, ಪ್ರೇಮದಿಂದ—ಅವನ್ನು ಕರೆದಾಗ ಅವು ಖಂಡಿತವಾಗಿ ಅದಕ್ಕೆ ಪ್ರತಿಕ್ರಿಯೆ ತೋರುತ್ತವೆ. ಇದುವೇ ಪರಮ–ಆನಂದ–ಆನಂದಕ್ಕೆ ಆನಂದದ ಪ್ರತಿಕ್ರಿಯೆ."

ರೈಲೀ ಮುಂದುವರಿಸುತ್ತಾ ಹೇಳಿದ—"ನನ್ನ ಅಭಿಪ್ರಾಯದಲ್ಲಿ, ಕಾಲದ ಬಂಧನವಿಲ್ಲದ, ಅಮರ ಸೌಂದರ್ಯವನ್ನು ಕ್ಷಣ ಹೊತ್ತಾದರೂ ನೋಡುವ ಅವಕಾಶ ಎಲ್ಲರಿಗೂ ಇದೆ. ನಮ್ಮ ದಿನ ನಿತ್ಯದ ಕೆಲಸಗಳಲ್ಲಿ—ಉದಾಹರಣೆಗೆ, ನಾವು ತೋಟದ ಕಳೆ ಕೀಳುತ್ತಿದ್ದೇವೆ ಅಥವಾ ಹಣ್ಣೋ ಕಾಯೋ ಕೊಯ್ಯುತ್ತಿದ್ದೇವೆ, ಇಲ್ಲವೆ ಗದ್ದೆಯ ಹುಣಿಯನ್ನು ಕೆತ್ತುತ್ತಿದ್ದೇವೆ—ಎಂದಿಟ್ಟುಕೊಳ್ಳೋಣ. ಇವಕ್ಕೆಲ್ಲ ಬೇಕಾಗಿರುವುದು ನಮ್ಮ ಪ್ರಜ್ಞೆಯ ಕೇವಲ ನೂರ ಒಂದನೇ ಭಾಗ. ಉಳಿದ ತೊಂಬತ್ತೊಂಬತ್ತು ಭಾಗವನ್ನೂ ನಾಳಿನ ಬಗ್ಗೆ ಹಗಲು ಕನಸುಗಳನ್ನು ನೇಯಲು ಅಥವಾ ನಿನ್ನೆಗಳ ಬೃಹತ್ ಕಂತೆಗಳನ್ನು ಕೆದಕಲು, ಕಳೆದ ದಿನಗಳನ್ನು ಮತ್ತೆ ಮತ್ತೆ ಮೆಲುಕು ಹಾಕಲು ಉಪಯೋಗಿಸುತ್ತಾ ಇರುತ್ತೇವೆ. ಅದಕ್ಕೆ ಬದ

ಲಾಗಿ ನಮ್ಮದೇ ಕೈಗಳ ಚಲನ ವಲನಗಳನ್ನು

ನಿರೀಕ್ಷಿಸತೊಡಗಿದರೆ, ಮೆಲುವಾಗಿ ಕಂಪಿಸ

ತ್ತಿರುವ ಒಂದು ಎಲೆಯ ಕಡೆಗೆ ಗಮನ

ಹರಿಸಿದರೆ, ನಮ್ಮ ತ್ವಚೆಯ ಮೇಲೆ ಹರಿದು

ಬರುವ ಸೂರ್ಯರಶ್ಮಿಯ ಸ್ಪರ್ಶವನ್ನು

ಮನಸ್ಸಿನೊಳಗೆ ತಂದುಕೊಂಡರೆ, ನಮ

ಕೂದಲ ಎಳೆಗಳ ನಡುವೆ ಹಾದುಹೋಗುವ

ತಂಗಾಳಿಯನ್ನು ಅನುಭವಿಸಿದರೆ ಮತ್ತು

ಸದಾ ಕಾಲ ಎಡೆಬಿಡದೆ, ನಮ್ಮ ಮನದೊಳಕ್ಕೆ

ನುಗ್ಗಿ ಕೋಲಾಹಲ ಉಂಟು ಮಾಡುತ್ತಲಿ

ಇರುವ ಭೂತಕಾಲದ ಇಲ್ಲವೆ ಭವಿಷ್ಯತ್ಕಾಲದ

ಆಲೋಚನೆಗಳಿಂದ ಕ್ಷಣಮಾತ್ರಕ್ಕಾದರೂ

ವಿಮೋಚನೆ ಪಡೆದುಕೊಂಡರೆ, ಆಗ ಅ

ಮೂಡುವುದು ಆನಂದದ ಬುಗ್ಗೆ. ಈ

ಪ್ರಯತ್ನವನ್ನು ಕೇವಲ ಒಂದು ಸೆಕೆಂಡಿ

ದಶಾಂಶ ಸಾಧಿಸಿಕೊಂಡರೂ ಆನಂ

ಉದ್ಭವಿಸುವುದು. "ನಿಮ್ಮ ಕಣ್ಣುಗಳ

ಆ ಹೊಸ ಬೆಳಕಿನಿಂದಾಗಿ ಪ್ರಕಾಶಮಾ

ವಾಗುವುವು"—ಮುಂದುವರಿದು ರೈಲಿ

ಹೇಳಿದ—ಇಂಥ ಕ್ಷಣದಲ್ಲಿ ಯಾವನೋ

ಅಪರಿಚಿತ ನಿಮ್ಮ ಮುಂದೆ ಹಾದುಹೋದ

ನೀವು ಆತನೆಡೆಗೆ, ಆತ ನಿಮ್ಮೆಡೆಗೆ ದೃ

ವಿನಿಮಯ ಮಾಡಿದಿರಾದರೆ ಆಗ ಆತನ

ಕೂಡ, ನಿಮ್ಮೊಡನೆ ಈ ರಹಸ್ಯಮ

ಬೆಳಕಿನ ಬಲೆಯೊಳಗೆ ಭಾಗಿಯಾಗುತ್ತಾನೆ

* * * * *

ರೈಲೀಯನ್ನು ಬೀಳ್ಕೊಟ್ಟು ಪಟ್ಟಣಕ್ಕೆ ಒಂಟಿಯಾಗಿ ಹಿಂತಿರುಗುತ್ತಿದ್ದಾಗ, ಒಂದು ತಿರುವಿನ ಬಳಿ ಕಾರನ್ನು ನಿಲ್ಲಿಸಿದೆ. ಅಲ್ಲಿದ್ದ ಅಡ್ಡರಸ್ತೆಯಲ್ಲಿ ನಿಧಾನವಾಗಿ ನಡೆಯತೊಡಗಿದೆ. ಬೀಸುತ್ತಿದ್ದ ಗಾ


ಆಹ್ಲಾದಕರವಾಗಿತ್ತು. ಪೊದೆಯೊಂದರ ಎ

ಯನ್ನು ಕಿತ್ತು ಅದರಲ್ಲಿ ಆನಂದವನ

ಹುಡುಕತೊಡಗಿದೆ. ಆದರೆ ತಕ್ಷಣ ನ

ಅರಿವಾದದ್ದು—ಗಾಳಿಯು ನನ್ನ ಕಾರ್ಯಕ್ರಮಗಳ ಬಗ್ಗೆ ಯೋಚಿಸತೊಡಗಿದ್ದೆನೆಂದು, ಪುನಃ ಸಾವರಿಸಿಕೊಂಡು ಎಲೆಯನ್ನು ಪರೀಕ್ಷಿಸಿದೆ, ಎವೆ ಇಕ್ಕದೆ ನೋಡಿದೆ!—ಆದರೆ ಮನದೊಳಗೆ ಬೇರೆಯೇ ನಾಟಕ ನಡೆದಿರುವುದು ಗೊತ್ತಾಯಿತು. ಕಳೆದು ಹೋದ ಯಾವುದೋ ಕ್ಷುಲ್ಲಕ ಸಂಗತಿಯನ್ನು ನೆನಪಿಸಿಕೊಳ್ಳತೊಡಗಿದ್ದೆ !

ನಿರಭ್ರ ಆಕಾಶದಿಂದ ಎಲ್ಲ ಸದ್ದುಗಳನ್ನಡಗಿಸಿ ಸಿಡಿಲ ಗರ್ಜನೆ ಕೇಳಿಸಿತು. ಆದರ ಹಿಂದಿನಿಂದಲೇ ಉಂಟಾದ ನಿಸ್ತಬ್ಧತೆಯಲ್ಲಿ, ನನ್ನ ಮನಸ್ಸಿನ ಎಲ್ಲ ಭಾವನೆಗಳನ್ನು ವ್ಯಾವರ್ತನೆಗೊಳಿಸುವಂತೆ ಲಾರ್ಕ್ ಹಕ್ಕಿಯ ಸಂಗೀತ ಲಹರಿ! ಆಕಾಶದುದ್ದಗಲಕ್ಕೂ ನಾದದ ಅಲೆ ಎಬ್ಬಿಸುತ್ತಾ ಪ್ರತಿಧ್ವನಿಸುತ್ತಾ ಗಾಳಿಯನ್ನು ಸೀಳಿಕೊಂಡು ಹೋಯಿತು. ಆ ಕುಕಿಲು ತಾರಸ್ಥಾಯಿಯಲ್ಲಿದ್ದೂ ಮೃದುವಾಗಿತ್ತು. ನಿರ್ಭಯವಾಗಿದ್ದೂ ಎದೆಯೊಳಗಿನ ವ್ಯಥೆಯೆಲ್ಲ ಹೊರಬಂದಂತಿತ್ತು. ತೀವ್ರ ಶಕ್ತಿಶಾಲಿಯಾಗಿದ್ದೂ ಶಾಂತಿ ತುಂಬಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ನೀಳಕಾಲುಗಳ ಹಿಗ್ಗಿಸಿ ಶತಮಾನಗಳ, ಸಹಸ್ರಮಾನಗಳ ಭಾವಶರಧಿಗಳ ದಾಟಿ, ಕಾಲಪರಿಧಿಯ ರೆಕ್ಕೆಗಳ ಕೊಡಹಿ, ವರ್ತಮಾನದ ಹೊಚ್ಚ ಹೊಸತನದ ಸ್ವೀಕೃತಿಯ ಅಮರ ಆನಂದದ ಗೀತೆಯೆಂಬಂತಿತ್ತು. ಮೆಲ್ಲ ಮೆಲ್ಲನೆ ಸೂರ್ಯೋದಯವಾಯಿತು. ಇದು ಆನಂದಮಯ ಅಮೃತೋದಯ !



ಪ್ರಜಾಪ್ರಭುತ್ವದಲ್ಲಿ ಬಲಿಷ್ಠನಿಗಿರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಅದೇ ನಿಜವಾದ ಪ್ರಜಾಪ್ರಭುತ್ವ.

ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು, ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುವುದು ಇದೇ ಅಹಿಂಸಾ ಧರ್ಮ.

—ಗಾಂಧೀಜಿ

ಮುರುಡಿದ ಕಾಯ ಮಾಯದ ಗಾಯ

ಎಸ್. ಆರ್. ಮಾಧುರಾವ್
೩೩೪ ಟಿ.ಕೆ. ಬಡಾವಣೆ
ಬಿ.ಇಡಿ. ಕಾಲೇಜಿನ ಹಿಂಭಾಗ
ಮೈಸೂರು ೫೭೦ ೦೦೯

ನಿಜಜೀವನದಲ್ಲಿ ಸಂಭವಿಸಿದ ಒಂದು ದುರಂತವಿದು : ತರುಣಪ್ರತಿಭೆ ವಿಹರಿಸುತ್ತಿದ್ದ ಮಾಯಾಲೋಕಕ್ಕೂ ವಾಸ್ತವ ಬದುಕು ಇರಿಯುತ್ತಿದ್ದ ಕಠೋರವಾಸ್ತವತೆಗೂ ನಡುವೆ ಹೊಂದಾಣಿಕೆ ಏರ್ಪಡದಾಗ ಮಾಧವ ಆತ್ಮಹತ್ಯೆಗೆ ಶರಣಾಗಿದ್ದಿರಬಹುದು. ಆದರೆ ಆ ಪ್ರತಿಭೆ ಬೀರಿದ್ದ ಉಜ್ಜ್ವಲಕಾಂತಿ ಮಾಧವನ ಗುರು ಮಾಧುರಾಯರ (ಗಣಿತ ಪ್ರಾಧ್ಯಾಪಕರು) ಮನದೊಳಗೆ ಮಿನುಗುತ್ತಿದ್ದು ಹಲವು ವರ್ಷಾನಂತರ ನೂತನ ಸಂಶೋಧನ ಪ್ರಬಂಧವೊಂದರ ಪ್ರಕಾಶನಕ್ಕೆ ಹೇತುವಾಯಿತು. ಈ ಪ್ರಬಂಧದ ಬಾಬ್ತು ಬಂದ ಸಂಭಾವನೆ ಯಾರಿಗೆ ಸಲ್ಲಬೇಕು ? ಇನ್ನು, ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫) ಮಂಡಿಸಿದ "ವಿಶೇಷ ಸಾಪೇಕ್ಷತಾ ಸಿದ್ಧಾಂತ" (೧೯೦೫) ತಿಳಿಸುವ ಒಂದು ಮುಖ್ಯ ಸಂಗತಿ ವೇಗಕ್ಕೆ ಸಂಬಂಧಿಸಿದ್ದು : ವಿಶ್ವದಲ್ಲಿ ಬೆಳಕಿನ ವೇಗವೇ ಗರಿಷ್ಠ (ಸೆಕೆಂಡಿಗೆ ೩೦೦,೦೦೦ ಕಿಮೀ) ; ಯಾವ ವಸ್ತುವೂ ಈ ವೇಗ ಐದಲಾರದು ; ಈ ಮಹಾ ವೇಗದ ಸನಿಹದಲ್ಲಿ ನಮ್ಮ ವ್ಯಾವಹಾರಿಕ ಭೌತ ನಿಯಮಗಳು ಮುರಿದು ಬೀಳುತ್ತವೆ. ದೂರದ ನಕ್ಷತ್ರ ನಮಗೆ ಗೋಚರಿಸುತ್ತಿದೆ ಎಂದರೆ, ಅದರಿಂದ ಹೊರಟ ಬೆಳಕಿನ ಕಿರಣಗಳು ಸೆಕೆಂಡಿಗೆ ೩೦೦,೦೦೦ ಕಿಮೀ ವೇಗದಿಂದ ನಮ್ಮೆಡೆಗೆ ಧಾವಿಸಿಬಂದು ನಮ್ಮ ಕಣ್ಣುಗಳಿಗೆ ಬಡಿಯುತ್ತವೆ ಎಂದರ್ಥ. ಕಿರಣ ಆ ನಕ್ಷತ್ರದಿಂದ ಓಟ ತೊಡಗಿದ ಕ್ಷಣ ಬೇರೆ, ನಮ್ಮನ್ನು ಅದು ತಲಪಿದ ಕ್ಷಣ ಬೇರೆ ! ಆದ್ದರಿಂದ ಇಂದು ರಾತ್ರಿ ನಾವು ನೋಡುವ ನಕ್ಷತ್ರವೆಂದರೆ ಹಿಂದೆಂದೋ ಅಲ್ಲಿ ಇದ್ದುದರ ಕಿರಣಪ್ರತಿನಿಧಿ ಮಾತ್ರ. ಇದು ಹಾಗಿರಲಿ. ಬೆಳಕಿನ ಕಿರಣದ ಜೊತೆ ಅದೇ ವೇಗದಿಂದ ಪಯಣಿಸುವುದು ಸಾಧ್ಯವಾದರೆ ಅಂಥ ಪಯಣಿಗನ ಅನುಭವ ಏನು ? ಈಗ ಈ ಮುಂದಿನ ಲೇಖನವನ್ನು ಸಾವಧಾನದಿಂದ ಓದಿ ; ವಿಜ್ಞಾನ ನಿಶಿತಮತಿ-ಮಾನವೀಯತೆ ಸಂಗಮವಿದು.

೧

ಸುಮಾರು ಇಪ್ಪತ್ತು ಸಂವತ್ಸರಗಳ ಹಿಂದಿನ ಮಾತು. ಅಪ್ರತಿಮ ಮಾನವತಾವಾದಿ, ಅದ್ವಿತೀಯ ವೈಜ್ಞಾನಿಕ ಚಿಂತಕ ಆಲ್ಬರ್ಟ್ ಐನ್‌ಸ್ಟೈನ್ ಅವರ ಜನ್ಮ ಶತಾಬ್ದಿಯ ಸನಿಹದ ವರ್ಷಗಳು. ಅಪೂರ್ವ ಮೆರುಗಿನಿಂದ ಕಂಗೊಳಿಸುವ ಹಲವಾರು ಕೊಡುಗೆಗಳನ್ನು ಭೌತವಿಜ್ಞಾನಕ್ಕೆ ಐನ್‌ಸ್ಟೈನ್ ನೀಡಿದ್ದಾರೆ. ಅವುಗಳಲ್ಲಿ

ವಿಶೇಷ ಸಾಪೇಕ್ಷತೆ (ಸ್ಪೆಷಲ್ ರಿಲೆಟಿವಿಟಿ) ಎಂಬ ಸಿದ್ಧಾಂತ ಚಿರಸ್ಥಾಯಿಯಾಗಿ ನೆಲೆಗೊಂಡಿದ್ದು ಭೌತಶಾಸ್ತ್ರದ ವಿವಿಧ ದಿಶೆಯ ಬೆಳವಣಿಗೆಗಳಿಗೆ ಭದ್ರಬುನಾದಿಯನ್ನು ಒದಗಿಸಿಕೊಟ್ಟಿದೆ.

ಆ ದಿವಸಗಳಲ್ಲಿ ಕಿರಿಯ ವಿದ್ಯಾರ್ಥಿಯೊಬ್ಬ ನನ್ನ ಮನೆಗೆ ಆಗಿಂದಾಗ್ಗೆ ಭೇಟಿ ನೀಡುತ್ತಲಿದ್ದ. ಒಮ್ಮೆ ಆತ ಕೇಳಿದ, "ವಿಶೇಷ ಸಾಪೇಕ್ಷತೆಯ ವಿದ್ಯಮಾನಗಳ ಪೈಕಿ ಮೂಲಭೂತವಾದ ಒಂದೆರಡನ್ನಾದರೂ ಗಣಿತಸಮೀಕರಣಗಳ ನೆರವಿಲ್ಲದೆ ಸಾಮಾನ್ಯ ಜನರಿಗೂ ಅರ್ಥವಾಗುವಂತೆ ತಿಳಿಯಪಡಿಸಲು ಸಾಧ್ಯವೇ ?"

ಆ ವಿದ್ಯಾರ್ಥಿಯ ಹೆಸರು ಮಾಧವ. ಅವನ ಬುದ್ಧಿಶಕ್ತಿ ಬಹಳಷ್ಟೇ ಚುರುಕಿನದಾಗಿತ್ತು. ಆದರೆ ವ್ಯವಹಾರಜ್ಞಾನ ಶೂನ್ಯ. ಎಷ್ಟೇ ಚಿಕ್ಕ ವಿಷಯವನ್ನು ಸಹ ಕಂಠಪಾಠ ಮಾಡಿ ಒಪ್ಪಿಸುವ ಸಾಮರ್ಥ್ಯ ಅವನಿಗಿರಲಿಲ್ಲ. ಜೊತೆಗೆ ಅವನು ಬೆಳೆದು ಬಂದಿದ್ದ ಕೌಟುಂಬಿಕ ಪರಿಸರದ ಆರ್ಥಿಕ (ಹಾಗೂ ಮನೋವೈಜ್ಞಾನಿಕ) ನೆಲೆಗಟ್ಟು ಹೆಚ್ಚು ಆಶಾದಾಯಕವಾಗಿದ್ದಿರಲಾರದೆಂದು ತೋರುತ್ತದೆ. ತಾತ್ತ್ವಿಕ ಚಿಂತನೆಗಳಲ್ಲಿ ಮಾತ್ರ ಈ ಮಾಧವ ತನ್ನನ್ನು ತಾನು ಸಲೀಸಾಗಿ ತೊಡಗಿಸಿಕೊಳ್ಳುತ್ತಿದ್ದ. ಮೀನಿಗೆ ಜಲಸಂಚಾರ ಸಹಜವಿದ್ದಂತೆ ಮಾಧವನಿಗೆ ತತ್ತ್ವವಿಹಾರ ನಿಸರ್ಗದತ್ತವಾಗಿ ಮೈಗೂಡಿಬಂದಿತ್ತು.

"ಆಗಲಯ್ಯ ಪ್ರಯತ್ನಿಸಿ ನೋಡೋಣ" ಎನ್ನುತ್ತ ಮಾಧವನನ್ನು ನಾನು ಅಂದು ಬೀಳ್ಕೊಟ್ಟೆ.

೨

ಭೌತಶಾಸ್ತ್ರಕ್ಕೆ ಸಂಬಂಧಿಸಿದಂತೆ ಇದೀಗ ಒಂದು ಕಾಲ್ಪನಿಕ ಚಿಂತನೆ. ಕೋಟ್ಯನುಕೋಟಿಗಾವುದಗಾವುದಗಳಷ್ಟು ಉದ್ದದ ನೇರ ಸುರಂಗದೊಳಗಡೆ ರೈಲೊಂದು ಧಾವಿಸುತ್ತಿದೆ. ಅದರಲ್ಲಿರುವವರು ಆರು ಮಂದಿ ಪಯಣಿಗರು: ರೈಲಿನ ಹಿಂತುದಿಯಲ್ಲಿ ಮೊದಲನೆಯವ, P1 ; ಮುಂತುದಿಯಲ್ಲಿ ಕೊನೆಯವ, P6 ; ಇವರ ಮಧ್ಯೆ ಸಮ ಸಮ ಅಂತರಗಳಲ್ಲಿ ಇನ್ನುಳಿದ ನಾಲ್ವರು P2, P3, P4, P5. ಅಂತೆಯೇ ಸುರಂಗದೊಳಗೆ ಆರು ಮಂದಿ ಕಾವಲುಗಾರರಿದ್ದಾರೆ: ಸುರಂಗ ಪ್ರವೇಶದ ಬಳಿ ಒಬ್ಬ, K1; ಸುರಂಗಾಂತ್ಯದ ಬಳಿ ಇನ್ನೊಬ್ಬ, K6; ಇವರಿಬ್ಬರ ನಡುವೆ ಸಮ ಸಮ ದೂರಗಳಲ್ಲಿ ಮಿಕ್ಕ ನಾಲ್ವರು, K2, K3, K4, K5. ಈ ಪೈಕಿ ಐದನೆಯ K5 ಕಾವಲುಗಾರನ ಕಣ್ಣುಗಳು ನೇರವಾಗಿ ಆತನ ಕಿವಿಗಳ ಮೇಲಿವೆ. ಎಂದೇ ಸುರಂಗದ ಎರಡೂ ತುದಿಗಳನ್ನು ನಮ್ಮ K5 ಒಟ್ಟೊಟ್ಟಿಗೆ ನೋಡಬಲ್ಲ! ಹಾಗೆ ದೃಷ್ಟಿಸಿದಾಗ ಏಕಕಾಲಿಕವಾಗಿ K5ವಿನ ಒಂದೊಂದು ಕಣ್ಣಿಗೂ ಒಂದೊಂದು ದೃಶ್ಯ ಗೋಚರಿಸುತ್ತದೆ. ಈ ಪೈಕಿ ಎಡಗಣ್ಣಿನ ದೃಶ್ಯದಲ್ಲಿ ಪಯಣಿಗ P1 ಮತ್ತು ಕಾವಲುಗಾರ K1 ಒಬ್ಬರನ್ನೊಬ್ಬರು ಸುರಂಗ ಪ್ರವೇಶದ ಬಳಿ ಸಂಧಿಸಿರುತ್ತಾರೆ ಎಂದು ತಿಳಿಯೋಣ. ಇನ್ನು ಬಲಗಣ್ಣಿನ ದೃಶ್ಯವೂ ಸದೃಶ. ಅದರಲ್ಲಿ ಪಯಣಿಗ P6 ಮತ್ತು ಕಾವಲುಗಾರ K6 ಸುರಂಗಾಂತ್ಯದ ಬಳಿ ಪರಸ್ಪರ ಸಂಧಿಸಿರುತ್ತಾರೆ ಎಂದು ಭಾವಿಸುತ್ತೇವೆ.

ಈಗ ಪ್ರಶ್ನೆ ಇಷ್ಟೆ. ನಮ್ಮ ಐದನೆಯ K5 ಕಾವಲುಗಾರನ ಎದುರಿಗೆ ಇದೇ ಕ್ಷಣ ಯಾವ ಪಯಣಿಗ ಹಾದುಹೋಗುತ್ತಿರುತ್ತಾನೆ?

ಇದೇನು ಮಹಾ ಪ್ರಶ್ನೆ! K5 ಎದುರಿಗೆ P5 ಹಾದು ಹೋಗುತ್ತಿರುತ್ತಾನೆ—ಎನ್ನುವಿರಲ್ಲವೇ? ದುರದೃಷ್ಟ ಎಂದರೆ ನಿಮ್ಮ ಈ ಉತ್ತರ ತೀರ ಕಡಿಮೆ ವೇಗದಲ್ಲಿ ತೆವಳುವ ಸಾಧಾರಣ ರೈಲುಗಳಿಗೆ ಮಾತ್ರ ಸರಿಹೊಂದುತ್ತದೆ. ಆದರೆ ಭೌತಶಾಸ್ತ್ರಜ್ಞರ ಊಹಾಲೋಕದ ಯಕ್ಷಿಣಿ ರೈಲುಗಳ ಪರಿಯೇ ಬೇರೆ. ತಮ್ಮ ಕ್ಷಿಪ್ರಗಾಮಿ ರೈಲುಗಳು ಬೆಳಕಿನ ಕಿರಣಗಳ ಅರ್ಧ ಮುಕ್ಕಾಲು ಅಥವಾ ಅದಕ್ಕೂ ಹೆಚ್ಚಿನ ವೇಗದಿಂದ ಓಡುತ್ತವೆಂದು ಈ ವಿಜ್ಞಾನಿಗಳು ಭಾವಿಸುತ್ತಾರೆ. ಇಂಥ ವಿಪರೀತ ಪರಿಸ್ಥಿತಿಯಲ್ಲಿ ನಮ್ಮ ಕಥೆಯಲ್ಲಿಯ K5ವಿನ ಎದುರು P4 ಹಾದುಹೋಗುತ್ತಿರಬಹುದು. ರೈಲಿನ ವೇಗ ಇನ್ನೂ ಹೆಚ್ಚಿದ್ದರೆ K5ವಿನ ಎದುರು P3 ಹಾದುಹೋಗಬೇಕಾಗುತ್ತದೆ. ವೇಗ ಮತ್ತೂ ಹೆಚ್ಚಿದ್ದರೆ ಅಲ್ಲಿ ಹಾದುಹೋಗುವವ P2 ಆಗಿರುತ್ತಾನೆ!....

೩

ಎಲಾ, ಇದು ಹೇಗೆ ಶಕ್ಯ ಎಂದು ನೀವು ಈಗಾಗಲೇ ತಾಳ್ಮೆಗೆಡುತ್ತಿರಬಹುದು. ಮೇಲಿನ ಪ್ರಸಂಗದಲ್ಲಿ K5 ಕಾವಲುಗಾರನ ಎದುರು P5ವಿಗಿಂತ ಹಿಂದಿನ ಒಬ್ಬ ಪಯಣಿಗ ಹಾದು ಹೋಗುತ್ತಿರಬಹುದು ಎಂಬ ಬಗ್ಗೆ ಯುಕ್ತ ಸಮರ್ಥನೆಯೊಂದನ್ನು ನಾನು ನೀಡಬೇಕಲ್ಲವೇ? ಇಂಥ ಸಮರ್ಥನೆಯನ್ನು ರೂಪಿಸುವಲ್ಲಿ ಸಫಲನೇನೋ ಆದೆ. ಆದರೆ ಆ ಕುರಿತು ನಾನು ಅನುಸರಿಸಿದ ತರ್ಕಮಾರ್ಗ ತುಸು ಬಳಸಿನದಾಗಿತ್ತು.

K5ವಿನ ಎದುರಿನ ಪಯಣಿಗ P2 ಅಥವಾ P3 ಅಥವಾ P4 ಆಗಿರಬಹುದು ಎಂಬ ಮಾಹಿತಿ ಒಮ್ಮೆ ಲಭ್ಯವಾಯಿತು ಎಂದರೆ ಅಲ್ಲಿಂದ ಮುಂದಕ್ಕೆ ವಿದ್ಯಾರ್ಥಿ ಮಾಧವನ ಆಕಾಂಕ್ಷೆಯನ್ನು ಸುಲಭವಾಗಿ ಈಡೇರಿಸಿಕೊಡಲು ಸಾಧ್ಯ. ಅಂದರೆ ಆ ಮಾಹಿತಿಯನ್ನು ಆಧರಿಸಿ ಗಣಿತ ನಿರಕ್ಷರಿಗಳಾದಿಯಾಗಿ ಸಮಸ್ತರಿಗೂ ಅರ್ಥವಾಗುವಂತೆ ವಿಶೇಷ ಸಾಪೇಕ್ಷತೆಯ ಕೆಲವೊಂದು ವಿದ್ಯಮಾನಗಳನ್ನು ಮನವಟ್ಟು ಮಾಡಿಕೊಡಬಹುದು. ಪ್ರಸಕ್ತ ಬರಹದ ಮಟ್ಟಿಗಾದರೋ ಈ ದಿಸೆಯಲ್ಲಿಯ ವಿವರಗಳು ಅಪ್ರಕೃತವಾಗುವ ಕಾರಣ ಅವುಗಳ ಬಗ್ಗೆ ಇಲ್ಲಿ ಚರ್ಚಿಸುವುದಿಲ್ಲ.

ಹಲವಾರು ದಿವಸಗಳ ಬಳಿಕ ಮಾಧವ ಮತ್ತೆ ನನ್ನನ್ನು ಸಂಧಿಸಿದಾಗ ಏತನ್ಮಧ್ಯೆ ನಾನು ನೇಯ್ದಿರಿಸಿದ್ದ ಸುರಂಗ ಮತ್ತು ರೈಲಿನ ಪ್ರಕರಣದ ಬಗ್ಗೆ ಇಬ್ಬರೂ ಸವಿಸ್ತಾರವಾಗಿ ವಿವೇಚಿಸಿದೆವು. ಕಥನದ ಸ್ವಾರಸ್ಯವನ್ನೇನೋ ಅವನು ಗ್ರಹಿಸಿದ. ಆದರೆ ಪೂರ್ಣ ತೃಪ್ತನಾದಂತೆ ತೋರಲಿಲ್ಲ.

ತರುವಾಯದ ಭೇಟಿಯಲ್ಲಿ ಮಾಧವ ಹೆಚ್ಚು ಉತ್ಸುಕವಾಗಿ ಕಂಡುಬಂದ. K5 ಕಾವಲುಗಾರನ ಎದುರು P5 ಪಯಣಿಗ ಹಾದುಹೋಗುತ್ತಿರಬೇಕಾಗಿಲ್ಲ ಎಂದು ತೋರಿಸುವ ಒಂದು ಸರಳಮಾರ್ಗ ಅವನಿಗೆ ಹೊಳೆದಿತ್ತು. ಬೆಳಕಿಗಿಂತ ಕಡಿಮೆ ವೇಗದಲ್ಲಿ ಚಲಿಸುವ ರೈಲಿನ ಬದಲು ಬೆಳಕಿನಷ್ಟೇ ವೇಗವಾಗಿ ಧಾವಿಸುವ ರೈಲನ್ನು ಕಲ್ಪಿಸಿ

ಕೊಂಡರೆ ವಿಷಯ ಸ್ಪಷ್ಟವಾಗಿಬಿಡುತ್ತದೆ ಎಂದು ಅವನು ವಿವರಿಸಿದ. ಸುರಂಗ ಪ್ರವೇಶದ ಬಳಿ K1 ಕಾವಲುಗಾರನೂ P1 ಪಯಣಿಗನೂ ಸಂಧಿಸಿದ್ದಾರಷ್ಟೆ? ಈ ದೃಶ್ಯದ ಬೆಳಕು ಎಷ್ಟು ವೇಗದಿಂದ ಮುನ್ನಾಗುತ್ತಲಿದೆಯೋ ಅಷ್ಟೇ ವೇಗದಿಂದ ನಿಮ್ಮ ರೈಲು ಸಹ ಮುಂದೆ ಮುಂದೆ ಚಲಿಸಿ ಬರಲಿ. ಹೀಗಾದಾಗ ನಮ್ಮ K 5 ಕಾವಲುಗಾರನ ಸಮೀಪಕ್ಕೆ ಸದರಿ ದೃಶ್ಯದ ಬೆಳಕಿನ ಜೊತೆ ಜೊತೆಯಲ್ಲೇ ರೈಲಿನಲ್ಲಿರುವ P1 ಪಯಣಿಗ ಕೂಡ ಧಾವಿಸಿ ಬರುತ್ತಿರುತ್ತಾನೆ. ಆದ್ದರಿಂದ K5ವಿನ ಕಣ್ಣಿನೊಳಗಡೆ ಆ ದೃಶ್ಯ ಮೂಡುವ ಸಮಯದಲ್ಲಿ ಆತನ ಎದುರಿಗೆ ಖುದ್ದು P1 ಪಯಣಿಗನೇ ಇದ್ದುಬಿಡುತ್ತಾನೆ! ನೋಡಿ, ಹೇಗಿದೆ ನಮ್ಮ ಮಾಧವನ ತರ್ಕದ ಮೋಡಿ: K5 ಎದುರು ಹಾದು ಹೋಗುತ್ತಿರುವ ಪಯಣಿಗ P5 ಅಲ್ಲ, P4 ಅಲ್ಲ, P3 ಅಲ್ಲ, P2 ಕೂಡ ಅಲ್ಲ! ಆತ ಖುದ್ದು P1 ಆಗಿರುತ್ತಾನೆ.

ಇದು ಬೆಳಕಿನಷ್ಟೇ ವೇಗದಿಂದ ಚಲಿಸುವ ರೈಲಿನ ವೈಖರಿ. ಬೆಳಕಿಗಿಂತ ತುಸು ಕಡಿಮೆ ವೇಗದಿಂದ ರೈಲು ಚಲಿಸುವುದಾದರೆ K5ವಿನ ಎದುರಿಗೆ P4/P3/P2 ಪಯಣಿಗ ಹಾದು ಹೋಗುತ್ತಿರಬೇಕೆಂದು ಈಗ ಯಾರು ಬೇಕಾದರೂ ಸುಲಭವಾಗಿ ತೀರ್ಮಾನಿಸಬಹುದು.

ಈ ಕುರಿತಾಗಿ ಹಿಂದೆ ನಾನು ಅನುಸರಿಸಿದ್ದ ತರ್ಕ ಸುತ್ತುಬಳಸಿನದಾಗಿತ್ತಷ್ಟೆ. ಈಗ ಮಾಧವ ಕಂಡುಕೊಂಡಿದ್ದ ನೂತನ ತರ್ಕ ಮಾರ್ಗದಲ್ಲಿ ಸುತ್ತುಬಳಸುಗಳಿರಲೇ ಇಲ್ಲ. ನಾನು ತುಳಿದಿದ್ದ ಹಳೆಯ ಮಾರ್ಗಕ್ಕಿಂತ ಅದು ಬಹಳಷ್ಟೇ ಆಕರ್ಷಕವಾಗಿತ್ತು.

೬

ಕಾಲ ಕಳೆಯುತ್ತಲೇ ಹೋಯಿತು. ಕಳೆದು ಹೋಗುವುದೇ ಅದರ ನಿತ್ಯ ಜಾಯಮಾನ, ಕೂಡಿಬರುವುದು ಇಲ್ಲವೇ ಇಲ್ಲ....ಅಥವಾ ಇದ್ದರೂ ವಿರಳದಲ್ಲಿ ಅತಿ ವಿರಳ.

ಮಾಧವನ ಅಂತರಂಗಿಕ ಖಿನ್ನತೆ ಹುಟ್ಟಿನಿಂದಲೇ ಬಂದಿದ್ದಿರಬೇಕು. ದಿನಗಳು ಸರಿದಂತೆ ಅದರ ಬೇರುಗಳು ಸ್ವಲ್ಪಸ್ವಲ್ಪವೇ ಆಳವಾಗುತ್ತಿದ್ದುವು. ಒಂದು ದಿನ ಇವನು ತನಗೆ ಶಿಕ್ಷಣದಲ್ಲಿ ಆಸಕ್ತಿ ಇಲ್ಲವೆಂದು ಪ್ರತಿಪಾದಿಸಿ ಕಾಲೇಜು ತರಗತಿಗಳಿಗೆ ಹಾಜರಾಗುವುದನ್ನು ನಿಲ್ಲಿಸಿಬಿಟ್ಟ. ತರುಣನ ಗೃಹ ವಾತಾವರಣದಲ್ಲಿ ಈ ಘಟನೆ ತೀವ್ರ ಬಿರುಗಾಳಿಯನ್ನೆಬ್ಬಿಸಿರಲು ಸಾಧ್ಯ.

ಆದಾಗ್ಯೂ ಮನೆಯಲ್ಲಿ ನನ್ನನ್ನು ಆಗಾಗ್ಗೆ ಸಂಧಿಸುವ ಪರಿಪಾಠವನ್ನು ಮಾಧವ ಮುಂದುವರಿಸಿಕೊಂಡು ಹೋದ. ಹಾಗೆ ಭೇಟಿಯಾದಾಗ ತತ್ತ್ವಶಾಸ್ತ್ರ, ವಿಜ್ಞಾನ, ಕೊನೆಗೆ ಸೈದ್ಧಾಂತಿಕ ರಾಜಕಾರಣ ಮುಂತಾದ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ವೈಯಕ್ತಿಕ ಇಲ್ಲವೆ ಗೃಹ ಸಮಸ್ಯೆಗಳನ್ನು ಅವನು ಒಮ್ಮೆಯೂ ಪ್ರಸ್ತಾವಿಸಲಿಲ್ಲ.

ಮುಂದೊಂದು ದಿನ ಒಬ್ಬಿಬ್ಬ ಅಪರಿಚಿತರು ನನ್ನ ಮನೆಗೆ ಆಗಮಿಸಿ ಮಾಧವ ಕಾಣೆಯಾಗಿರುವುದಾಗಿಯೂ ನನಗೇನಾದರೂ ಸಿಕ್ಕಿದ್ದರೆ ವಿಚಾರಿಸುವ ಅಭಿಲಾಷೆಯಿಂದ ನನ್ನಲ್ಲಿಗೆ ಬಂದಿರುವುದಾಗಿಯೂ ತಿಳಿಸಿದರು. ಆದರೆ ಆ ಹಿಂದಿನ ಹತ್ತಿಪ್ಪತ್ತು ದಿವಸಗಳಲ್ಲಿ ಮಾಧವನನ್ನು ನಾನು ಕಂಡೇ ಇರಲಿಲ್ಲ.

ಇಷ್ಟಾದರೂ ಮಾಧವ ಜೀವಂತವಿರುತ್ತಾನೆ, ಬಿಳಿಗಿರಿರಂಗನ ಬೆಟ್ಟದ ಯಾವುದೋ ಸಂಸ್ಥೆಯೊಂದರ ಕೆಲಸದಲ್ಲಿ ತೊಡಗಿರುತ್ತಾನೆ ಎಂದು ನನ್ನ ಸಹೋದ್ಯೋಗಿಯೊಬ್ಬರು ಅಭಿಪ್ರಾಯಪಟ್ಟರು.

ಇದು ಸತ್ಯಕ್ಕೆ ತೀರ ದೂರವಾಗಿದ್ದ ಊಹೆ ಎಂದು ನನಗೆ ಗೊತ್ತಾಗುವಷ್ಟರಲ್ಲಿ ತಿಂಗಳುಗಳು ಉರುಳಿದ್ದುವು. ಕಾಣೆಯಾಗಿದ್ದ ಮಾಧವ ಅಂದೇ ರಾತ್ರೋರಾತ್ರಿ ಮುಂಡ ಕಳ್ಳಿಯ ಬಳಿ ಮರವೊಂದಕ್ಕೆ ನೇಣು ಹಾಕಿಕೊಂಡು ತನ್ನ ಬದುಕನ್ನು ಕೊನೆಗೊಳಿಸಿದ್ದ.

೫

ಮತ್ತೆ ಕಾಲ ಕಳೆಯುತ್ತಲೇ ಇದೆ. ಆಗಲೇ ಹಿಂದಕ್ಕೆ ಸರಿದುಹೋಗಿರುವ ಸಾಲು ಸಾಲು ವಸಂತಗಳ ಸಿಹಿಕಹಿ ನೆನಪುಗಳು ಇದೀಗ ಮಸುಕುಮಸುಕಾಗತೊಡಗಿದೆ. ಮನ ಕಲಕುವ ಅನಿರ್ವಚನೀಯ ವಿಷಣ್ಣತೆಯ ಒಂದು ಅಳಿಸಲಾಗದ ಛಾಯೆ ಮಾತ್ರ ಇಡಿಯಾಗಿ ಅವನ್ನು ಆವರಿಸಿಕೊಳ್ಳುತ್ತಲಿದೆ.

ಐನ್‌ಸ್ಟೈನರ ವಿಶೇಷ ಸಾಪೇಕ್ಷತೆಗೆ ಜನಪ್ರಿಯತೆ ನೀಡಬಲ್ಲ ರೈಲುಕಥೆಯೊಂದನ್ನು ಮಾಧವನ ಸೂಚನೆಯಿಂದಾಗಿ ನಾನು ಹೆಣೆದೆನಷ್ಟೆ? ಮಾಧವ ಕಂಡುಕೊಂಡ ಅನಂತರದ ಒಂದು ಸರಳ ತರ್ಕದಿಂದ ಈ ಕಥೆ ಮತ್ತಷ್ಟು ಕಳೆಗೂಡಿತು ಕೂಡ. ಆದಾಗ್ಯೂ ಅದನ್ನು ಯುಕ್ತ ಮಾಧ್ಯಮಗಳಲ್ಲಿ ಪ್ರಕಟಿಸಲು ನಾನು ಮುಂದಾಗಲಿಲ್ಲ. ಕಥೆಯ ಬಗ್ಗೆ ಸ್ಥಳೀಯ ವಿದ್ವಾಂಸರು ಉತ್ಸುಕತೆ ತೋರದಿದ್ದುದು ನನ್ನ ಹಿಂಜರಿಕೆಗೆ ಒಂದು ಕಾರಣವಿದ್ದಿರಬಹುದು. ವೃತ್ತಿಯಲ್ಲಿ ನಾನು ಕೇವಲ ಖಾಸಗಿ ಕಾಲೇಜೊಂದರ ಸಾಧಾರಣ ಅಧ್ಯಾಪಕನಾಗಿ ದುಡಿಯುತ್ತಿದ್ದವನು. ನನ್ನದೇ ಸ್ವಂತ ವರ್ಚಸ್ಸಿನ ಮೇಲೆ ಎಂದೂ ನನಗೆ ನಂಬಿಕೆ ಬಂದುದಿಲ್ಲ.

ಬೆಂಗಳೂರಿನಲ್ಲಿರುವ ವಿಜ್ಞಾನಗಳ ಭಾರತೀಯ ಅಕ್ಯಾಡೆಮಿ ಸಂಸ್ಥೆಯು ವತಿಯಿಂದ ಈಗ್ಗೆ ಮೂರು ವರ್ಷಗಳ ಹಿಂದೆ ಹೊಸತೊಂದು ಆಂಗ್ಲ ಮಾಸಪತ್ರಿಕೆ ಪ್ರಾರಂಭವಾಯಿತು. ಇದರ ಪ್ರಥಮ ಸಂಪುಟದ ಸಂಚಿಕೆಗಳನ್ನು ಪರಿಶೀಲಿಸಿದಾಗ ನಮ್ಮ ರೈಲುಕಥೆಯನ್ನು ಆಧರಿಸಿ ವಿಶೇಷ ಸಾಪೇಕ್ಷತೆಯ ಮೇಲೆ ಬರೆದುಕೊಡಬಹುದಾದ ಒಂದು ಪೂರ್ಣ ಲೇಖನ ಈ ಪತ್ರಿಕೆಗೆ ಉಪಯುಕ್ತವಾದೀತೆಂದು ನನಗನ್ನಿಸಿತು. ಕಾರಣ ವಿಜ್ಞಾನಬೋಧನೆಯ ಬಗೆಗೆ ನವ್ಯ ಚಿಂತನೆಗಳನ್ನು ಪ್ರೇರೇಪಿಸುವುದೇ ಪತ್ರಿಕೆಯ ಧ್ಯೇಯೋದ್ದೇಶವಾಗಿತ್ತು.

ಸಿದ್ಧಪಡಿಸುವಾಗ ನನ್ನ ಲೇಖನವನ್ನು ಹಲವೊಂದು ದಿಸೆಗಳಲ್ಲಿ ಸಮೃದ್ಧಗೊಳಿಸಬೇಕಾಯಿತು. ಕೊನೆಗೆ ಅದು ಮೇಲೆ ಹೇಳಿದ ಪತ್ರಿಕೆಯ ಮೂರನೆಯ ಸಂಪುಟದಲ್ಲಿ ಒಂದಷ್ಟು ಮೆಚ್ಚುಗೆಯೊಡನೆ ಪ್ರಕಟವೂ ಆಯಿತು. ಕಾವಲುಗಾರ K5ವಿನ ಎದುರಿನ ಪಯಣಿಗನನ್ನು ಗುರುತಿಸುವ ಸರಳ ತರ್ಕಮಾರ್ಗದ ಶೋಧಕ ಮೂಲತಃ ಮಾಧವ ಆಗಿದ್ದನಷ್ಟೇ? ಹಳೆಯ ವಿದ್ಯಾರ್ಥಿಯ ಪಾತ್ರವನ್ನು ನನ್ನ ಲೇಖನದಲ್ಲಿ ಯುಕ್ತವಾಗಿ ಸ್ಮರಿಸಿದ್ದೆನೆಂದು ಬೇರೆ ಹೇಳಬೇಕಾಗಿಲ್ಲ.

೬

ಲೇಖನದ ಗೌರವಧನ ತಲಪಿದಾಗ ಸಹಜವಾಗಿಯೇ ಅದರಲ್ಲಿ ಒಂದಷ್ಟು ಪಾಲ

ಮಾಧವನಿಗೆ ಸಲ್ಲಬೇಕಲ್ಲವೇ ಎಂಬ ಪ್ರಶ್ನೆ ಉದ್ಭವಿಸಿತು. ಆದರೆ ಆ ಮಾಧವ ಈಗ ಕಾಲಪ್ರವಾಹದಲ್ಲಿ ವಿಲೀನವಾಗಿರುವ ಒಂದು ಅವ್ಯಕ್ತಾಂಶ. ಅವನ ಕುಟುಂಬದ ಇತರ ಸದಸ್ಯರಾರನ್ನೂ ನಾನು ನೋಡಿಯೇ ಇರಲಿಲ್ಲ.

ಏತನ್ಮಧ್ಯೆ ಕಾಲೇಜು ನೌಕರಿಯಿಂದ ನಾನು ಸ್ವಇಚ್ಛೆಯ ನಿವೃತ್ತಿ ಪಡೆದಿದ್ದೆ. ಬೇರೊಬ್ಬ ಸಹೃದಯಿ ಅಧ್ಯಾಪಕರು ಕಾಲೇಜಿನ ಪುರಾತನ ದಾಖಲೆಗಳಲ್ಲಿ ಲಭ್ಯವಿದ್ದ ಮಾಧವನ ಹಳೆಯ ವಿಳಾಸವನ್ನು ತಂದುಕೊಟ್ಟರು. ಆದರೆ ಮಾಧವನ ಕುಟುಂಬದವರಾರೂ ಆ ವಿಳಾಸದಲ್ಲಿ ಈಗ ಇರಲಿಲ್ಲ. ಬಲು ಹಿಂದೆಯೇ ಮನೆಯನ್ನು ವಿಕ್ರಯಿಸಿ ಅವರು ಬೇರೆ ಊರಿಗೆ ಹೊರಟು ಹೋಗಿದ್ದರು. ಆದರೂ ಮಾಧವನ ಓರ್ವ ಅಕ್ಕ ಬ್ಯಾಂಕೊಂದರ ಉದ್ಯೋಗಿಯಾಗಿದ್ದುದರಿಂದ ಆ ಬ್ಯಾಂಕಿನಲ್ಲಿ ವಿಚಾರಿಸಿದರೆ ಪ್ರಯೋಜನವಾಗಬಹುದು ಎಂಬೊಂದು ಸುಳಿವು ಅಲ್ಲಿ ದೊರಕಿತು.

ಬ್ಯಾಂಕಿನ ವ್ಯವಸ್ಥಾಪಕರಿಗೆ ಮಾಧವನ ಕುಟುಂಬದ ಪರಿಚಯಸ್ಥರೊಬ್ಬರ ವಿಳಾಸ ತಿಳಿದಿತ್ತು. ಆ ಮಹನೀಯರು ಇದೇ ಊರಿನಲ್ಲಿರುವುದರಿಂದ ಮೊದಲು ಅವರನ್ನು ಕಾಣಿರಿ, ಒಂದು ವೇಳೆ ಅವರಲ್ಲಿಯೂ ಮಾಹಿತಿ ಇಲ್ಲದಿದ್ದರೆ ಬ್ಯಾಂಕ್ ಮುಖೇನ ಹುಡುಕಲು ಯತ್ನಿಸೋಣ ಎಂಬುದಾಗಿ ಈ ವ್ಯವಸ್ಥಾಪಕರು ಸಲಹೆ ಮಾಡಿದರು.

ಆ ಪರಿಚಯಸ್ಥ ಮಹನೀಯರು ಒಡನೆಯೇ ಲಭ್ಯರಿದ್ದರು. ಮಾಧವನ ತಾಯಿ ತೀರಿಹೋಗಿರುವುದಾಗಿಯೂ, ತಂದೆ ಮಾತ್ರ ತಮ್ಮ ನೌಕರಿಯಿಂದ ನಿವೃತ್ತರಾದಮೇಲೆ ಸ್ಥಳೀಯ ಬಡಾವಣೆಯೊಂದರ ಯಾವುದೋ ಒಂದು ಚಿಕ್ಕ ದೇವಸ್ಥಾನದ ಪೂಜಾಕೈಂಕರ್ಯದಲ್ಲಿ ನಿರತರಾಗಿರುವುದಾಗಿಯೂ ಅವರು ತಿಳಿಸಿದರು.

ಸದರಿ ಬಡಾವಣೆಗೆ ತೆರಳಿದ್ದಾಯಿತು. ಆದರೆ ಮಾಧವನ ತಂದೆ ಅಲ್ಲಿರಲಿಲ್ಲ. ಅವರು ನಿಜಕ್ಕೂ ಪೂಜೆ ಮಾಡಿಕೊಂಡಿದ್ದದ್ದು ಅಲ್ಲಿಂದ ಸ್ವಲ್ಪ ದೂರದಲ್ಲಿದ್ದ ಇನ್ನೊಂದು ಬಡಾವಣೆಯಲ್ಲಿ.

ಆ ಬೇರೆ ಬಡಾವಣೆಯಲ್ಲಿ ಕೊನೆಗೂ ಮಾಧವನ ತಂದೆಯ ದರ್ಶನವಾಯಿತು. ವಯಸ್ಸು ಹತ್ತಿರ ಹತ್ತಿರ ಎಂಬತ್ತು. ವೃತ್ತಚಾಪದಂತೆ ಬಗ್ಗಿಹೋಗಿದ್ದ ಬೆನ್ನು. ದೇವಸ್ಥಾನದ ಅರ್ಚನಾ ಕಾರ್ಯಗಳಿಂದಲೂ ಇತ್ತೀಚೆಗೆ ನಿವೃತ್ತರು. ಯಾವುದೇ ಪೀಠೋಪಕರಣಗಳಿಲ್ಲದ ಅಚ್ಚ ಗ್ರಾಮೀಣ ಪರಂಪರೆಯ ಒಂದು ಇಕ್ಕಟ್ಟಿನ ಕೊಠಡಿಯಲ್ಲಿ ವಾಸ.

ಗಲಿಬಿಲಿಯ ನಡುವೆಯೂ ಅವರು ನನ್ನನ್ನು ಸ್ವಾಗತಿಸಿದರು. ಅವರಿಗೆ ನನ್ನ ಪರಿಚಯ ತಿಳಿಸಿಕೊಟ್ಟೆ. ಬಳಿಕ ವಿಜ್ಞಾನ ಸಂಸ್ಥೆಯ ಮಾಸಪತ್ರಿಕೆಯಲ್ಲಿ ಮಾಧವನ ಉಲ್ಲೇಖ ಇದ್ದುದನ್ನು ತೋರಿಸಿ ಆ ನಿಮ್ಮ ನತದೃಷ್ಟ ಪುತ್ರನ ನೆನಪಿಗಾಗಿ, ಪುಟ್ಟದೊಂದು ಕಾಣಿಕೆ ಎನ್ನುತ್ತ ಗೌರವಧನದ ಅಂಶವನ್ನು ನೀಡಲು ಮುಂದಾದೆ. ಮೊದಲು ಅವರು ಹಣ ನಿರಾಕರಿಸಿದರು. ಕೊನೆಗೆ ನನ್ನ ಅವಿರತ ಒತ್ತಾಯಕ್ಕೆ ಮಣಿದು "ಆಗಲಿ, ಆದರೆ ಇದನ್ನು ನಾನು ಬಳಸಿಕೊಳ್ಳಲಾರೆ.... ಏನು ಮಾಡಬೇಕೆಂದು ನಿಧಾನವಾಗಿ ಆಲೋಚಿಸಿ

ತೀರ್ಮಾನಕ್ಕೆ ಬರುತ್ತೇನೆ" ಎಂದು ಹೇಳುತ್ತ ಒಪ್ಪಿಕೊಂಡರು.

"ಇಷ್ಟೆಲ್ಲ ವರ್ಷಗಳೂ ತಾವು ಇಲ್ಲಿ ಒಬ್ಬರೇ ಇದ್ದುಬಿಟ್ಟದ್ದೀರಾ ?"

"ಹೌದು. ನನ್ನ ಮಗನ ಗೊತ್ತುಗುರಿ ಇಲ್ಲದ ವರ್ತನೆಗಳಿಂದ ನಾನು ಘಾಸಿಗೊಳ್ಳುತ್ತಿದ್ದೆ. ತೀರಾ ಅಸಹಾಯಕನಾಗಿ ಕೊನೆಗೊಮ್ಮೆ ಇಲ್ಲಿಗೆ ಬಂದುಬಿಟ್ಟೆ."

ಎಲ್ಲ ನಾಣ್ಯಗಳಿಗೂ ಎರಡು ಮುಖಗಳಿರುತ್ತವೆ ಎಂದಾದರೆ ಅಷ್ಟೊಂದು ದೀರ್ಘಕಾಲದ ಕಾರ್ಪಣ್ಯಗಳ ಪೆಟ್ಟಿನಿಂದ ಜರ್ಜರಿತವಾಗಿದ್ದ ಈ ಸಾಂತ್ವನವಂಚಿತ ಹಿರಿಜೀವದ ಬಗ್ಗೆ ಅನುಕಂಪಿಸದಿರುವುದು ಅಸಾಧ್ಯ.

ವಾಸ್ತವವಾಗಿ ಜಗತ್ತು ಎಷ್ಟೆಲ್ಲ ವಿಶಾಲವಾದದ್ದು ! ಹಲವು ಹತ್ತು ಮನೋಧರ್ಮಗಳ ಭಿನ್ನ ಬಿನ್ನ ಕಕ್ಷೆಗಳು ಇಲ್ಲಿ ಛೇದಿಸಬೇಕಾದುದೇ ಇಲ್ಲ. ಆದಾಗ್ಯೂ ಬಟ್ಟ ಆಗಸದಲ್ಲಿ ಸಹ ವಿಮಾನಗಳು ಡಿಕ್ಕಿಯಾಗುವಂತೆ ಅಸದಳ ವ್ಯಾಪ್ತಿಯ ನಡುವೆಯೇ ಈ ಜಗದಲ್ಲಿ ಘರ್ಷಣೆಗಳು ತಲೆದೋರಿ ಸ್ಫೋಟಿಸುತ್ತವೆ, ನಿವಾರ್ಯಗಳು ಅನಿವಾರ್ಯಗಳಾಗಿ ಪರ್ಯವಸಿಸುತ್ತವೆ.

ಏಕೆ ?



ಗುರಿಯಿಲ್ಲದ ಸಾಧನೆಗಳಿಂದ ಏನೂ ಉಪಯೋಗವಿಲ್ಲ. ಗುರಿಯಷ್ಟೇ ಸಾಧನೆಗಳು ಶುದ್ಧವಾಗಿರಬೇಕು.

ಧರ್ಮ ಇಲ್ಲದ ಮನುಷ್ಯ ಚುಕ್ಕಾಣಿ ಇಲ್ಲದ ಹಡಗಿನಂತೆ.

—ಗಾಂಧೀಜಿ

ಪುರಾತನ-ನೂತನಗಳನ್ನು ಬೆಸೆದ ಡಿ. ಆರ್. ನಾಗರಾಜ್

ಸಿ. ನಾಗಣ್ಣ

ಇಂಗ್ಲಿಷ್ ಪ್ರಾಧ್ಯಾಪಕ
ಮಹಾರಾಜ ಕಾಲೇಜು
ಮೈಸೂರು

ಚರಿತ್ರಕಾರ ಹಾಗೂ ಆತ್ಮ ಚರಿತ್ರಕಾರ ಸುಜಿತ್ ಮುಖರ್ಜಿಯವರಿಂದ ನಾನು ಮೊದಲ ಬಾರಿಗೆ ಡಿ. ಆರ್. ನಾಗರಾಜ್ ಅವರ ಬಗ್ಗೆ ಕೇಳಿದೆ. ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿರುವ ಹರೀಶ್ ತ್ರಿವೇದಿ ಏನು ಮಾಡುತ್ತಿದ್ದಾರೆ ಎಂದು ಮತ್ತೆ ಸುಜಿತ್ ಅವರನ್ನು ಕೇಳಿದೆ: "ಭಾರತದಲ್ಲಿ ಈವತ್ತು ಹರೀಶ್ ಎರಡನೇ ಅತ್ಯುತ್ತಮ ಸಾಹಿತ್ಯ ವಿಮರ್ಶಕರೆಂದು ಯು. ಆರ್ ಅನಂತಮೂರ್ತಿ ಹೇಳಿದ್ದಾರೆ" ಎಂದು ಸುಜಿತ್ ತಿಳಿಸಿದರು. "ಹಾಗಾಗಿ, ಹರೀಶ್ ಈಗ ಈ ಡಿ. ಆರ್. ನಾಗರಾಜ್ ಯಾರೆಂದು ಕೈಯಲ್ಲಿ ಬಂದೂಕ ಹಿಡಿದುಕೊಂಡು ಅವರಿಗಾಗಿ ದೆಹಲಿಯಲ್ಲೆಲ್ಲಾ ಗಸ್ತು ಹೊಡೆಯುತ್ತಿದ್ದಾರೆ".

ಇದಾದ ತರುಣದಲ್ಲೇ ಭಾರತದ ಅತ್ಯುತ್ತಮ ವಿಮರ್ಶಕನನ್ನು ನಿಜವಾಗಿ ನೋಡುವುದಕ್ಕಾಯಿತು. ಆಗ ನಾಗರಾಜ್ ಕಂಡ ರೀತಿ ಅಷ್ಟು ಆಕರ್ಷಕವಾಗಿ ಇರಲಿಲ್ಲವೆಂಬುದನ್ನು ತಿಳಿಸಬೇಕು. ನೆಹರೂ ಸ್ಮಾರಕ ವಸ್ತು ಸಂಗ್ರಹಾಲಯ ಮತ್ತು ಗ್ರಂಥ ಭಂಡಾರದಲ್ಲಿ ವಿಚಾರ ಸಂಕಿರಣದ ಸಂದರ್ಭದಲ್ಲಿ ನಾಗರಾಜ್ ಗಾಂಧೀಜಿಯವರ ಬಗ್ಗೆ ಒಂದು ಪ್ರಬಂಧ ಮಂಡಿಸುತ್ತಿದ್ದರು. ಅವರ ದನಿ ತಗ್ಗಿತ್ತು, ಕಣ್ಣುಗಳು ಪ್ರಬಂಧದಿಂದ ಅತ್ತಿತ್ತ ಸರಿಯಲಿಲ್ಲ. ಬೌದ್ಧಿಕ ಶಕ್ತಿಯ ಉನ್ನತ ಕೇಂದ್ರದಲ್ಲಿ ಬೆಂಗಳೂರಿನ ಆ ವಿದ್ವಾಂಸ ಸ್ವಲ್ಪ ಗಲಿಬಿಲಿಗೊಂಡತ್ತಿತ್ತು. ಪ್ರಬಂಧ ಮಂಡನೆಯಾದ ಬಳಿಕ ನಾಚುತ್ತ ಸನಿಹ ಬಂದು ತಮ್ಮನ್ನು ಪರಿಚಯಿಸಿಕೊಂಡರು. "ನಾವಿಬ್ಬರೂ ಟಿ. ಜಿ. ವೈದ್ಯನಾಥನ್‌ರವರಿಗೆ ಗ್ರಂಥಗಳನ್ನು ಅರ್ಪಿಸಿದ್ದೇವೆ," ಅಂದರು.

ಟಿಜಿವಿಗೆ ಅರ್ಪಿಸಿರುವ ಪುಸ್ತಕ ಕನ್ನಡದಲ್ಲಿರುವುದರಿಂದ ನಾನದನ್ನು ಓದಲಾರೆ. ಆದರೆ ಮತ್ತೆ ನಾನು ಬೆಂಗಳೂರಿಗೆ ಹೋದಾಗ ಡಿ. ಆರ್. ನಾಗರಾಜರ ಪುಸ್ತಕ "ದ ಫ್ಲೇಮಿಂಗ್ ಫೀಟ್" ಪ್ರೀಮಿಯರ್ ಬುಕ್ ಶಾಪಿನಲ್ಲಿ ನನ್ನ ಕಣ್ಣಿಗೆ ಬಿದ್ದಿತು. ಅದೊಂದು ಪುಟ್ಟ ಪುಸ್ತಕ, ಈಗ ಅದು ಸಿಕ್ಕದಾಗಿದೆ. ೧೯೯೩ರಲ್ಲಿ (ಇನ್‌ಸ್ಟಿಟ್ಯೂಟ್ ಫಾರ್ ಕಲ್ಚರಲ್ ರೀಸರ್ಚ್ ಅಂಡ್ ಆ್ಯಕ್ಷನ್‌ನ ಪರವಾಗಿ) ಇವರ ಗೆಳೆಯ ಸಿದ್ಧಾರ್ಥ ಹೊರತಂದ್ನ

ಇಂಗ್ಲಿಷ್ ಮೂಲ : ರಾಮಚಂದ್ರ ಗುಹಾ. ಕೃಪೆ : ದ ಹಿಂದು

ಈ ಗ್ರಂಥದಲ್ಲಿ ದಲಿತ ರಾಜಕಾರಣವನ್ನು ಕುರಿತಆರು ಪ್ರಬಂಧಗಳಿವೆ. ಕನ್ನಡ ಸಮಾಜ ಹಾಗೂ ಕನ್ನಡ ಸಂಸ್ಕೃತಿಯ ಬಗೆಗಿನ ಅವರ ವಿಶೇಷಜ್ಞ ತಿಳಿವಳಿಕೆಯನ್ನು ಇಲ್ಲಿನ ಕೆಲವು ಪ್ರಬಂಧಗಳು ಪ್ರತಿಫಲಿಸುತ್ತವೆ.

ಗಾಂಧೀಜಿಯವರನ್ನು ಜಾತೀಯ ಕಾರಣಕ್ಕಾಗಿ ತಾನು ಅಷ್ಟೊಂದು ಮೆಚ್ಚುವುದೆಂದು ನಾಗರಾಜ್ ತಮಾಷೆ ಮಾಡುತ್ತಿದ್ದರು. ಅವರು ಜಾತಿಯಲ್ಲಿ ನೇಯ್ಗೆಯವರಾಗಿದ್ದರಿಂದ (ಹಾಗಾಗಿ ಒಂದರ್ಥದಲ್ಲಿ ತಾನು ಮಹಾತ್ಮ ಎನ್ನುತ್ತಿದ್ದರು. ಆದರೆ ದಲಿತ ರಾಜಕಾರಣದಲ್ಲಿ ಬಹಳ ಆಳವಾಗಿ ಅವರು ತೊಡಗಿದ್ದ ಕಾರಣ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಬಗ್ಗೆ ತುಂಬಾ ಗೌರವವನ್ನು ಹೊಂದಿದ್ದರು. ಭಾರತೀಯ ರಾಜಕಾರಣವು, ಮುಂದುವರಿದ ಸಂಘರ್ಷವನ್ನು ಸೃಷ್ಟಿಸಿದ ಇಬ್ಬರು ದೊಡ್ಡ ವ್ಯಕ್ತಿಗಳ ಬಗ್ಗೆ ಸಮವಾದ ಆಸಕ್ತಿಯನ್ನು ಹೊಂದಿದ್ದ ನಾಗರಾಜ್ ಈ ನಿಟ್ಟಿನಲ್ಲಿ ಒಬ್ಬ ಅಪರೂಪದ ಆರಾಧಕನೆನ್ನಬೇಕು; ಹಾಗೆಯೇ ಭಾರತೀಯ ಚರಿತ್ರೆಯಲ್ಲಿ ಹೆಚ್ಚು ಬರೆಯಲ್ಪಟ್ಟಿರುವ ಈ ಎರಡು ಬದುಕುಗಳ ಬಗ್ಗೆ ಅತ್ಯಂತ ಅಪರೂಪವಾದ ಒಳನೋಟಗಳನ್ನೂ ನೀಡಬಲ್ಲವರಾಗಿದ್ದರು. ಅವರ ಪ್ರಬಂಧದ ಐದು ಪುಟಗಳನ್ನು ಓದುವಷ್ಟರಲ್ಲೇ ಒಂದು ಸೋಪಜ್ಞ ಮನಸ್ಸಿನ ಎದುರಿನಲ್ಲಿದ್ದೇನೆ ಎಂಬ ಅಂಶ ನನಗೆ ಮನವರಿಕೆಯಾಗಿತ್ತು. ಒಬ್ಬ ಚಿಂತಕ ನಾಗರಾಜ್‌ರನ್ನು ವಿಚಾರ ಸಂಕಿರಣಗಳ ನಾಗರಾಜ್ ಮರೆಮಾಚುವುದಕ್ಕೆ ನನ್ನ ಅಸಡ್ಡೆ ಅವಕಾಶ ನೀಡಿತೆಂದು ಈಗ ಅನ್ನಿಸತೊಡಗಿದೆ.

ದೆಹಲಿಯ ಸಾರ್ವಜನಿಕ ವೇದಿಕೆಗಳಲ್ಲಿ ನಾಗರಾಜ್ ಕೊಂಚ ಹಿಂಜರಿಕೆ ಸ್ವಭಾವವನ್ನು ಪ್ರಕಟಿಸಿದ್ದಾಗ್ಯೂ ಕರ್ನಾಟಕದಲ್ಲಿ ಒಬ್ಬ ವಾಗ್ಮಿಯಾಗಿ ಅವರು ತುಂಬಾ ಖ್ಯಾತಿ ಗಳಿಸಿದ್ದರು. "ಅನೇಕ ಬಾರಿ ನಾಗರಾಜರು ಮಾತನಾಡುವುದನ್ನು ಕೇಳಿರುವೆನಾದರೂ ಇದನ್ನ ಇವರು ಈಗಾಗಲೇ ಹೇಳಿದ್ದಾರಲ್ಲ ಅಂತ ಯಾವತ್ತೂ ಅನ್ನಿಸಲಿಲ್ಲ," ಹಾಗೆಂದು ಗಿರೀಶ್ ಕಾಸರವಳ್ಳಿ ಹೇಳುತ್ತಾರೆ.

೧೯೯೫ರಿಂದ ನಾನು ಬೆಂಗಳೂರಿನಲ್ಲಿ ವಾಸಿಸತೊಡಗಿದಾಗಿನಿಂದ ನಾಗರಾಜ್ ಮತ್ತು ನಾನು ಆಗಾಗ ಭೇಟಿಯಾಗುತ್ತಿದ್ದೆವು; ಭೇಟಿಯಾಗುತ್ತಿದ್ದುದು ಮಾತ್ರ ಕೋಶಿಶ್ ಪೆರೇಡ್ ಕೆಫೆದಲ್ಲಿ. ಬಹುತೇಕ ತಮಿಳು ಮತ್ತು ಇಂಗ್ಲೀಷ್ ಮಾತನಾಡುವ ದಂಡು ಪ್ರದೇಶದಲ್ಲಿ ನಾನು ವಾಸಿಸತೊಡಗಿದ್ದರಿಂದ ನನಗೆ ನಾಗರಾಜರ ಕನ್ನಡ ಮಾತನಾಡುವ ಪ್ರಪಂಚವನ್ನು ಪ್ರವೇಶಿಸುವ ಸಾಧ್ಯತೆ ಇರಲಿಲ್ಲ. ಅವರಾದರೊ ಲೀಲಾಜಾಲವಾಗಿ ಒಂದು ವಿಶ್ವದಿಂದ ಇನ್ನೊಂದು ವಿಶ್ವಕ್ಕೆ ಜಿಗಿಯುವ ಕೌಶಲ್ಯವನ್ನು ಪಡೆದಿದ್ದರು. ತಮ್ಮ ಸಂಸ್ಕೃತಿಯಲ್ಲಿ ಅವರು ಎಷ್ಟು ಆಳವಾಗಿ ಬೇರೂರಿದ್ದರೆಂದರೆ ಅದನ್ನವರು ಪ್ರದರ್ಶಿಸಬೇಕಾದ ಅಗತ್ಯವಿರಲಿಲ್ಲ. ಹಾಗಾಗಿ 'ಕಾಸ್ಮಪಾಲಿಟನಿಸಂ' ಅನ್ನು ತಿರಸ್ಕರಿಸಬೇಕಾದ ಪ್ರಮೇಯವೂ ಒದಗಿಲ್ಲ. ಈ ಕಾರಣದಿಂದಲೇ ನಾಗರಾಜ್ ತಮ್ಮ ಗ್ರಂಥವನ್ನು ಟಿ.ಜಿ. ವೈದ್ಯನಾಥ ಅವರಿಗೆ ಅರ್ಪಿಸಿದುದು. ಅದನ್ನ ಹಲವರು ಇಷ್ಟಪಡಲಿಲ್ಲವೆಂಬುದನ್ನು ನಾಗರಾಜ್ ನನಗೆ ತಿಳಿಸಿದರು. ಅಂಥವರಿಗೆ ನಾಗರಾಜ್ ಕೊಟ್ಟ ಉತ್ತರ ಇದು. "ಟಿ.ಜಿ.ವಿ. ನ

ಮನಸ್ಸನ್ನು ಬೆಳಗಿದರು-ಮನೆಯಲ್ಲಿ ಕನ್ನಡ ಅಥವಾ ಮಲೆಯಾಳಂ ಅಥವಾ ಗುಜರಾತಿ ಭಾಷೆಯನ್ನಾಡುತ್ತಾ ಉಳಿದಂತೆ ಇಂಗ್ಲಿಷ್‌ನಲ್ಲಿ ನುಡಿಯುತ್ತಿದ್ದ ಅವರ ಮಾತುಗಳನ್ನು ಕೇಳಿಸಿಕೊಳ್ಳಲು ಬರುತ್ತಿದ್ದ ಎಲ್ಲ ಬೆಂಗಳೂರಿನ ಹುಡುಗರ ಮನಸ್ಸನ್ನು ಬೆಳಗಿದಂತೆ."

ನನ್ನ ಕೋರಿಕೆಯಂತೆ ನನ್ನ ಅವರ ಭೇಟಿ ಹೆಚ್ಚು ಹೆಚ್ಚಾಯಿತು. ಆಗಸ್ಟ್ ೧೧ನೇ ತಾರೀಖು ಅವರು ನಿಧನರಾಗುವ ತಿಂಗಳಿನಲ್ಲೇ 'ಪೆರೇಡ್'ನಲ್ಲಿ ನಾವು ಮೂರು ಬಾರಿ ಭೇಟಿಯಾಗಿದ್ದೆವು. ಮೊದಲ ಭೇಟಿಯಲ್ಲಿ ಗಾಂಧೀಜಿ, ನೆಹರು ಹಾಗೂ ಶಿವರಾಮ ಕಾರಂತರ ಆತ್ಮಚರಿತ್ರೆಗಳು "ಸಾಮಾಜಿಕ ಪ್ರಜ್ಞೆಯುಳ್ಳ, ಚಾರಿತ್ರಿಕ ವ್ಯಕ್ತಿಗಳನ್ನರಿಯಲು ಯಾವ ರೀತಿ ವಿಭಿನ್ನ ಮಾರ್ಗಗಳನ್ನು ಸೂಚಿಸುತ್ತದೆ" ಎಂಬುದರ ಬಗ್ಗೆ ನಾವು ಮಾತನಾಡಿದೆವು. ಭಾರತೀಯರು ತಮ್ಮ ಅಂತರಾಳವನ್ನು ಬಿಟ್ಟುಕೊಡುವುದಿಲ್ಲ ಎಂದು ನಾನು ವಾದ ಮಾಡಿದಾಗ ಇದಕ್ಕೆ ಪ್ರತಿಯಾಗಿ ಇತ್ತೀಚೆಗೆ ಬಿಡುಗಡೆಯಾಗಿರುವ ಕನ್ನಡ ಲೇಖಕ ಪಿ. ಲಂಕೇಶರ ಆತ್ಮಚರಿತ್ರೆಯ ಉದಾಹರಣೆಯನ್ನು ನೀಡಿದರು.

ಎರಡನೇ ಭೇಟಿ ಹೆಚ್ಚು ವಾದವಿವಾದದಿಂದ ಕೂಡಿತ್ತು, ಪ್ರಾಯಶಃ ಬೆಳೆಯುತ್ತಿರುವ ನಮ್ಮ ಸ್ನೇಹದ ಕುರುಹಾಗಿರಬಹುದು. ವಿದ್ವಾಂಸರ ಬರಹಗಳು ಹೆಚ್ಚು ಪಾರದರ್ಶಕವಾಗಿದ್ದು ನಿಲುಕುವಂತಿರಬೇಕೆಂದು ನಾನು ವಾದ ಮಂಡಿಸಿದೆ. 'ನಿಲುಕವಂತಿರಬೇಕು' ಎಂಬುದು 'ಮೌಲ್ಯ-ತಟಸ್ಥ'ವಾದ ಪದವಲ್ಲವೆಂದು ಅವರು ಉತ್ತರಿಸಿದರು. ವಾದದಲ್ಲಿ ಗೆಲ್ಲಬೇಕೆಂಬ ಉದ್ದೇಶದಿಂದ "ಪೆಡಸುತನ ಆಲಸ್ಯದ, ಅಸ್ಪಷ್ಟವಾದ ಚಿಂತನೆಯ ದ್ಯೋತಕ. ಇಂಥದನ್ನು ಸಮರ್ಥಿಸಿಕೊಳ್ಳುವುದು ಹೋಮಿ ಭಾಭಾ ಹಾಗೂ ಗಾಯತ್ರಿ ಚಕ್ರವರ್ತಿ ಸ್ಪಿವಾಕ್ ತರಹದವರನ್ನು ಸಮರ್ಥಿಸಿಕೊಂಡಂತೆ" ಎಂದು ಹೇಳಿದೆ. ಇವರುಗಳ ಸಖ್ಯ ನಾಗರಾಜರಿಗೆ ಇರುವ ಸಂಗತಿ ನನಗೆ ತಿಳಿದಿತ್ತು.

ನಾವು ಕಾಫಿ ಹಾಗೂ ನಿಂಬೆಹಣ್ಣಿನ ರಸದ ಜೊತೆ ನಮ್ಮ ಚರ್ಚೆಯನ್ನು ನಡೆಸಿದ್ದೆವು ; ಬೇರೆ ರೀತಿಯಾಗಿದ್ದರೆ ಮಾತುಕತೆಗೆ ಇನ್ನಷ್ಟು ಕಾವೇರುತ್ತಿತ್ತು. ನಾನೇಕೆ ಕುಡಿಯುವುದಿಲ್ಲ ಎಂದು ನಾಗರಾಜ್ ಕೇಳಿದರು. ಅತ್ಯಂತ ಪ್ರತಿಷ್ಠಿತವಾದ ಅವರ "ಅಕ್ಷರ ಚಿಂತನಮಾಲೆ"ಯಲ್ಲಿ ಪ್ರಕಟಿಸಬೇಕೆಂದು ಉದ್ದೇಶಿಸಿ ನಾನು ಜಾಗತಿಕ ಪರಿಸರ ವಾದವನ್ನು ಕುರಿತಾದ ನನ್ನ ಪುಸ್ತಕದ ಹಸ್ತಪ್ರತಿಯನ್ನು ಓದಲು ಅವರಿಗೆ ನೀಡಿದ್ದೆ. ಹಸ್ತಪ್ರತಿ ಕುರಿತು "ಸಮರ್ಥವಾಗಿದೆ ಹಾಗೂ ಸಮಗ್ರವಾಗಿದೆ" ಎಂದು ಅವರು ಹೇಳಿದಾಗ ಮೃದುವಾಗಿ ಅವಕ್ಕೆ ಹೊಡೆತ ಕೊಟ್ಟಿದ್ದರು. ಜಾಗತಿಕ ಮಟ್ಟದ ಸಮೀಕ್ಷೆಯಾಗಿರುವುದರಿಂದ ಸಮತೋಲನದ ಕಡೆ ನಾನು ನಿಗಾ ಇಟ್ಟಿರುವುದಾಗಿಯೂ ಮದ್ಯ ಸೇವಿಸುವ ವಿಷಯದ ಮಟ್ಟಿಗೆ ಬಹಳ ವರ್ಷಗಳ ಹಿಂದೆ ಮದ್ಯ-ವಿರೋಧಿ ನಿಲುವನ್ನು ತಳೆದದ್ದು ಕಾರಣವೆಂದೂ ನಾನು ನಾಗರಾಜರಿಗೆ ವಿವರಿಸಿದೆ. ನನ್ನ ಪುಸ್ತಕದಲ್ಲಿ ಉತ್ಕಟತೆಯ ಅಭಾವಕ್ಕೆ ನನ್ನ ರಕ್ತದಲ್ಲಿ ಮದ್ಯವಿಲ್ಲದ್ದು ಕಾರಣವೆಂದು ನಾಗರಾಜ್ ತೀರ್ಮಾನಿಸಿರ

ಬಹುದೆಂದು ನನಗೆ ಗುಮಾನಿ ಬರುತ್ತದೆ. ಒಟ್ಟನಲ್ಲಿ "ಮಾಲೆ"ಯಲ್ಲಿ ತಮ್ಮ ಹಿನ್ನುಡಿಯೊಡನೆ ನನ್ನ ಪುಸ್ತಕ ಪ್ರಕಟಿಸುವುದಾಗಿ ಅವರು ಮಾತು ಕೊಟ್ಟರು. "ನಮ್ಮ ವಾದವನ್ನು ಮುಂದುವರಿಸಲು ಅನುಕೂಲವಾಗುವಂತೆ" ತಮ್ಮ ಟೀಕೆಗಳಿಗೆ ನಾನು ಉತ್ತರಿಸಲು ಅವಕಾಶವಿದೆಯೆಂದು ಸೂಚನೆಯಿತ್ತರು.

ಅವರ ಪುಸ್ತಕಗಳ ಬಗ್ಗೆ ಮಾತನಾಡಲು ಮುಂದಾದೆವು. "ಸಾಂಸ್ಕೃತಿಕ ಆಯ್ಕೆಗಳ ರಾಜಕಾರಣ"ವನ್ನು ಕುರಿತ ತಮ್ಮ ಅಧ್ಯಯನವನ್ನು ಈ ವರ್ಷಾಂತ್ಯದೊಳಗೆ ಪೂರೈಯಿಸುವುದಾಗಿ ತಿಳಿಸಿದರು. ಇದಾದ ಬಳಿಕ "ಅಲ್ಲಮಪ್ರಭುವಿನ ವಚನಗಳನ್ನು ಕೇಂದ್ರವಾಗಿಸಿಕೊಂಡು ಶೈವ ಸಿದ್ಧಾಂತದ ಬಗ್ಗೆ ಪುಸ್ತಕವೊಂದನ್ನು ಬರೆದಿದ್ದೇನೆ. ಮೊದಲು ಅದು ಕನ್ನಡದಲ್ಲಿ ಬರಬೇಕು. ತಪ್ಪು ಪ್ರತಿಭಟನೆ ಹಾಗೂ ತಪ್ಪು ಕಲ್ಪನೆಯ ಸಂಬಂಧ ಹೊಂದಿದ 'ಇಸ್ಲಾಂ ಪ್ರಭುತ್ವ' ಕುರಿತ ಗ್ರಂಥವೊಂದನ್ನು ರಚಿಸಬೇಕೆಂದಿದ್ದೇನೆ. ರಿಚರ್ಡ್ ರೈಟ್ ಹಾಗೂ ಟೋನಿ ಮಾರಿಸನ್‌ರನ್ನು ಕುರಿತು ಈವಾಗಲೇ ಒಂದು ಪ್ರಬಂಧ ರಚಿಸಿದ್ದೇನೆ. ಮುಂದಿನ ಸಲ ನಾನು ಶಿಕಾಗೋಗೆ ಹೋದಾಗ (ನಾಗರಾಜ್ ಆ ವಿಶ್ವವಿದ್ಯಾನಿಲಯದಲ್ಲಿ ಬೇಸಿಗೆ ಕಾಲದಲ್ಲಿ ಬೋಧನೆ ನಡೆಸುತ್ತಿದ್ದರು) ಲೂಯಿ ಫರಾಖಾನ್‌ರನ್ನು ಭೇಟಿಯಾಗಲು ಪ್ರಯತ್ನಿಸುತ್ತೇನೆ."

ನಾಗರಾಜರ ಮಹತ್ವಾಕಾಂಕ್ಷೆಯ ವಿಸ್ತಾರ ವಿಪುಲವಾದದ್ದು. ಸಾಂಸ್ಕೃತಿಕವಾದ ಆಯ್ಕೆಗಳಿಗೆ ಸಂಬಂಧಿಸಿದ ಅವರ ಗ್ರಂಥದ ಒಂದು ಪುಟ್ಟ ಭಾಗವನ್ನು ಗಮನಿಸಿದರೇ

ಗೊತ್ತಾಗುತ್ತದೆ. ಅವರ ಅಧ್ಯಯನ ಮತ್ತ
ಸೈದ್ಧಾಂತಿಕ ವ್ಯಾಪ್ತಿಯ ಪ್ರಮಾಣ ೧೯೯
ಡಿಸೆಂಬರ್‌ನಲ್ಲಿ ಶಿಕಾಗೊ ಇನ್‌ಸ್ಟಿಟ್ಯೂಟ
ಆಫ್ ಹ್ಯುಮ್ಯಾನಿಟೀಸ್‌ನಲ್ಲಿ ಅವರ
ಮಾಡಿದ ಭಾಷಣದ ಹಸ್ತಪ್ರತಿ ಇದು
ಇದರ ವಿಸ್ತೃತ ರೂಪದಲ್ಲಿ ಬರುವ ಗ್ರಂ
ಜಾತಿ ವ್ಯವಸ್ಥೆಯನ್ನು ಕುರಿತ ನಮ್ಮ ಅ
ವನ್ನು ಅಮೂಲಾಗ್ರವಾಗಿ ಬದಲಿಸುತ್ತ
ತ್ತೆಂದು ನಾವು ಸುಲಭವಾಗಿ ಊಹಿಸಬಹ
ದಾಗಿತ್ತು. ಅವರ ಕಂಪ್ಯೂಟರ್‌ನಲ್ಲಿ ಉ
ದಿರುವ ಈ ಪ್ರಬಂಧದಿಂದ ಒಂದ
ಸಾಕಷ್ಟು ವಿಸ್ತಾರವಾದ ಸಂಪ್ರಬಂಧವನ
ರಚಿಸಬಹುದೆಂದು ತೋರುತ್ತದೆ. ಈಗಿರ
ವಂತೆ "ದ ಫ್ಲೇಮಿಂಗ್ ಫೀಟ್" ನಾ
ರಾಜರು ಇಂಗ್ಲೀಷಿನಲ್ಲಿ ರಚಿಸಿರುವ ಏಕಮೇ
ಗ್ರಂಥ. ಇವರ ಜೊತೆಗೆ ಪ್ರಕಟಿತವಾ
ಕೆಲವು ಪ್ರಬಂಧಗಳು ಹಾಗೂ ಪುಸ್ತ
ವಿಮರ್ಶೆಗಳಿವೆ.

ಆಶೀಶ್ ನಂದಿಯವರ "ಎಕ್ಸೈಲ್ಡ್ ಅಟ
ಹೋಂ" ಗ್ರಂಥಕ್ಕೆ ಬರೆದ ಮುನ್ನುಡಿಯ
ವಸಾಹತುಶಾಹಿಗೆ ಸಂಬಂಧಿಸಿದ ಪ್ರಮುಖ
ವಾದ ಸಿದ್ಧಾಂತಗಳ ಸಮರ್ಥ ಸರ್ವೇಕ್ಷಣ
ವಿದೆ. ಸಂಭಾಷಣೆಯಲ್ಲಿ ಅತ್ಯಂತ ಪುರಾತ
ವಾದದ್ದು ಹಾಗೂ ನೂತನವಾದವನ್ನು
ಬೆಸೆಯುವ ಅವರ ಅಪರೂಪದ ಸಾಮರ್ಥ
ವನ್ನು ಕುರಿತು ಯು.ಆರ್.ಅನಂತಮೂರ್ತಿ
ಹೇಳಿದ್ದಾರೆ. ಬರುವ ಜನವರಿ ತಿಂಗಳಿನ
ದೆಹಲಿಯಲ್ಲಿ ನೀಡಬೇಕಾಗಿದ್ದ ಸಮಾನ
ಹಸನ್ ಮಾಂಟೋ ಉಪನ್ಯಾಸದಲ್ಲಿ ಹಿಂ
ಕುರಿತು ಒಂಭತ್ತನೇ ಶತಮಾನದ ಜೈನ ಪ
ಗಳು ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆ
ಉರ್ದು-ವಿರೋಧಿ ಹಾಗೂ ತಮಿ

ವಿರೋಧಿ ಅನುಭವದ ಹಿನ್ನೆಲೆಯಲ್ಲಿ ಪ್ರಸ್ತುತವಾಗುವುದನ್ನು ತೋರಿಸಬೇಕೆಂದುಕೊಂಡಿದ್ದರು. ಶತಮಾನಗಳನ್ನು ಬೆಸೆಯುವುದಕ್ಕಿಂತಲೂ ಹೆಚ್ಚಿನ ಕೆಲಸವನ್ನು ನಾಗರಾಜ್ ಮಾಡಬಲ್ಲವರಾಗಿದ್ದರು. ಭಾರತೀಯ ಬುದ್ಧಿಜೀವಿಗಳ ಪೈಕಿ ತನ್ನ ಭಾಷಿಕ ಪರಂಪರೆಯ ಜೊತೆ ಜೊತೆಗೇ ಪಶ್ಚಿಮದ ಸೈದ್ಧಾಂತಿಕ ನುಡಿಗಟ್ಟನ್ನೂ ಗ್ರಹಣ ಮಾಡುವಂಥ ಸಾಮರ್ಥ್ಯವುಳ್ಳವರಾಗಿದ್ದರು ನಾಗರಾಜ್. ಭಾರತೀಯ ಭಾಷೆಗಳಲ್ಲಿ ಯಾವುದಾದರೊಂದನ್ನು ಅಷ್ಟಿಷ್ಟು ಪರಿಚಯ ಮಾಡಿಕೊಂಡಿರುವ 'ವಿಶ್ವಜ್ಞಾನದ ಬುದ್ಧಿಜೀವಿಗಳು' ಅಪರೂಪವಲ್ಲ; ಆದರೆ ಅಂಥವರಿಗೆ ಆ ಭಾಷೆಯ ಆಧ್ಯಾತ್ಮಿಕ ಹಾಗೂ ಅಲಂಕಾರಿಕವಾದ ಆಳ ದಕ್ಕಲೊಲ್ಲದು. ಪ್ರಾದೇಶಿಕ ಭಾಷೆಗಳ ವಿದ್ವಾಂಸರುಗಳು ಬಂಗಾಳಿ ಅಥವಾ ತಮಿಳು ಭಾಷೆಯಲ್ಲಿ ಆಳವಾದ ಪಾಂಡಿತ್ಯವನ್ನು ಗಳಿಸಿರಬಹುದು, ಆದರೆ ಅಂತಾರಾಷ್ಟ್ರೀಯ ಅಕಾಡೆಮಿಯ ಇತ್ತೀಚಿನ ಸಿದ್ಧಾಂತಗಳ ಬಗ್ಗೆ ಅವರಿಗೆ ನಿಖರತೆ ಇರುವುದಿಲ್ಲ. ಒಬ್ಬ ವಿದ್ವಾಂಸನಿಗೆ ೬೦ ವರ್ಷವಾಗಿದ್ದರೆ ಅವನ ಪಶ್ಚಿಮದ ಜ್ಞಾನ ಲೀವಿಸ್ ಅಥವಾ ಹಕ್ಸ್‌ಲಿ ಅವರಲ್ಲಿಗೆ ನಿಲ್ಲುತ್ತದೆ; ೪೦ ವರ್ಷವಾಗಿದ್ದರೆ ಲಾರೆನ್ಸ್ ಮತ್ತು ವೆಲ್ಸ್‌ರಲ್ಲಿ ನಿಂತುಬಿಡುತ್ತದೆ. ನಾಗರಾಜ್ ಕನ್ನಡ ಸಂಸ್ಕೃತಿಯ ಉದ್ದಾಮ ವಿದ್ವಾಂಸರಾಗಿದ್ದರು; ಅಷ್ಟಿಷ್ಟು ತೆಲುಗು ತಿಳಿದಿತ್ತು; ಹಾಗೆಯೇ ಹಿಂದಿ, ಸಂಸ್ಕೃತ, ಕೊಂಚಮಟ್ಟಿಗೆ ತಮಿಳು ಭಾಷೆಯನ್ನು ಅರಿತವರಾಗಿದ್ದರು. ಇದರ ಜೊತೆಗೆ ಮಾನವಶಾಸ್ತ್ರ, ಸಂಸ್ಕೃತಿ ಅಧ್ಯಯನ ಹಾಗೂ ಚರಿತ್ರೆ-ಈ ಕ್ಷೇತ್ರಗಳ ಬಗ್ಗೆ ಕೂಡ ಅವರಿಗೆ ತಿಳುವಳಿಕೆ ಇತ್ತು.

ಅನಂತಮೂರ್ತಿಯವರ "ಭಾರತೀಪುರ" ಕಾದಂಬರಿಯ ಇಂಗ್ಲಿಷ್ ಅನುವಾದಕ್ಕೆ ಮುನ್ನುಡಿ ಬರೆಯುತ್ತಾ ನಾಗರಾಜ್ "ಕಾದಂಬರಿಯಲ್ಲಿ ಕಥೆ ಹೇಳುವವ ತನ್ನ ಸ್ಥಳೀಯ ವಾಸಸ್ಥಾನವನ್ನು ಬಿಡದುದರ ಬಗ್ಗೆ ಅಚಲವಾದ ನಿರ್ಧಾರವನ್ನು ಪ್ರಕಟಿಸುತ್ತಾನೆ" ಎಂದಿದ್ದಾರೆ. ತಮ್ಮ ಸ್ಥಳೀಯ ವಾಸಸ್ಥಾನವನ್ನು ಬಿಡದ ರೀತಿಯಲ್ಲಿ ನಾಗರಾಜ್ ತಾವೂ ಕೂಡ ಹೊರಗಿನ ವಿಶಾಲವಾದ ಜಗತ್ತಿಗೆ ದೀರ್ಘಕಾಲ ಪ್ರವೇಶಮಾಡಿ ಬರುತ್ತಿದ್ದರು. ಕನ್ನಡ ಸಾಹಿತ್ಯದ ಬಗ್ಗೆ ಅವರು ಬರೆಯುವುದನ್ನು ಮುಂದುವರಿಸುತ್ತಿದ್ದರೆಂಬುದು ನಿಜ ಹಾಗೆಯೇ ಹೆಚ್ಚು ಹೆಚ್ಚು ಭಾರತೀಯ ಚರಿತ್ರೆ ಮತ್ತು ಜಾಗತಿಕ ಸಂಸ್ಕೃತಿಯ ಬಗ್ಗೆ ಕೂಡ ಬರೆಯುತ್ತಿದ್ದರು. ಅವರ ಭಾಷಾ ಕೌಶಲ, ಪಾಂಡಿತ್ಯ ಹಾಗೂ ನಿಶಿತಮತಿ—ಇವುಗಳನ್ನು ಗಣನೆಗೆ ತೆಗೆದುಕೊಂಡರೆ ಅವರು ಯಾವ ಎತ್ತರ ಮುಟ್ಟುತ್ತಿದ್ದರೋ ಊಹಿಸಲಾಗುವುದಿಲ್ಲ.

ನಾಗರಾಜರ ಜೀವನ ಸಾಮಾಜಿಕ ಚಳವಳಿಗಾರ ಸಿ. ವಿ. ಸುಬ್ಬರಾವ್ ಅವರನ್ನು ನೆನಪಿಗೆ ತರುತ್ತದೆ. ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಜನರ ಒಕ್ಕೂಟದ ಮೂಲಕ ಸಿ. ವಿ. ಸುಬ್ಬರಾವ್ ಪ್ರಧಾನವಾಗಿ ಜನರ ಗಮನ ಸೆಳೆದರು. ಈ ಸಂಸ್ಥೆಯನ್ನು ಸ್ಥಾಪಿಸಿ ಪೋಷಿಸಿದವರು ಅವರು. ಸುಬ್ಬರಾವ್ ಹಾಗೂ ನಾಗರಾಜ್ ಒಂದೇ ಇಸವಿಯಲ್ಲಿ, ಅಂದರೆ, ೧೯೫೪ರಲ್ಲಿ ಜನಿಸಿದವರು. ಸುಬ್ಬರಾವ್ ಅವರ ಮಾತೃಭಾಷೆಯಾದ ತೆಲುಗನ್ನು ನಾಗರಾಜ್ ಬಲ್ಲವರಾಗಿದ್ದರು. ಒಂದು ಕಾಲದಲ್ಲಿ

ಇಬ್ಬರೂ ಕೂಡ ವಾಮಪಂಥೀಯ ವಿದ್ಯಾರ್ಥಿ ರಾಜಕಾರಣದಲ್ಲಿ ಮುಳುಗಿದ್ದವರು. ಆದರೆ ನಾನು ಬಲ್ಲಂತೆ ಅವರಿಗೆ ಪರಸ್ಪರರ ಪರಿಚಯವಿರಲಿಲ್ಲ.

ಅವರ ನಲವತ್ತನೇ ಹುಟ್ಟುಹಬ್ಬದಂದು ಸುಬ್ಬರಾವ್ ನನಗೊಬ್ಬನಿಗೇ ದೂರವಾಣಿ ಕರೆ ಇತ್ತರು. ತಕ್ಷಣ ನಾನು ಅವರನ್ನು ಕಾಣಬೇಕೆಂದು ಅವರು ಕೇಳಿದ್ದರು. ಅವರ ನೈತಿಕ ನಿಲುವು ಯಾವ ಬಗೆಯದಾಗಿತ್ತೆಂದರೆ ಅವರು ಇಂಥದನ್ನು ಮಾಡಿ ಎಂದರೆ ನಾವು ಅಂಥಾದ್ದನ್ನು ಮಾಡುತ್ತಿದ್ದೆವು. ನಾನು ಅವರ ನಿವಾಸವನ್ನು ತಲುಪಿದಾಗ ಈ ಚಳವಳಿಯಿಂದ ದೀರ್ಘಕಾಲದ ವಿರಾಮವನ್ನು ಪಡೆಯಬೇಕೆಂದಿದ್ದೇನೆಂದು ತಿಳಿಸಿದರು. ಭಾರತದ ಪರಿಸರ ವಿನಾಶ ಕುರಿತು ಮಹಾಪ್ರಬಂಧವನ್ನು ಬರೆಯುವ ಅಪೇಕ್ಷೆ ಅವರಿಗಿದ್ದಿತು. "ನೀವು ಬೆಂಗಳೂರಿಗೆ ಹೋಗುತ್ತಿರುವುದನ್ನು ನಾನು ಬಲ್ಲೆ", ಎಂದರು. "ಈ ಕೆಲಸದ ನಿಮಿತ್ತ ನಾನು ಮೇಲಿಂದ ಮೇಲೆ ಹೈದರಾಬಾದಿಗೆ ಹೋಗಬೇಕಾಗುತ್ತದೆ; ಇದರ ವಿಷಯವಾಗಿ ಚರ್ಚಿಸಲು ನಾವು ಆಗಾಗ ಸೇರೋಣ." ಇದಾದ ಕೆಲವೇ ವಾರಗಳಲ್ಲಿ ಅವರು ತೀರಿಕೊಂಡರು.

ಭಾರತೀಯ ನಾಗರೀಕ ಹಕ್ಕುಗಳ ಚಳವಳಿಯ ವಿಷಯದಲ್ಲಿ ಸುಬ್ಬರಾವ್ ನೀಡಿದ ಕೊಡುಗೆಯಷ್ಟೇ ನಾಗರಾಜ್ ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಮಹತ್ವದ್ದಾಗಿದೆ. ಮುಂದಿನ ಚರಿತ್ರಕಾರರು ಇವರನ್ನು ಗಮನಿಸಲೇಬೇಕಾಗಿದೆ. ಇಬ್ಬರೂ ಸಹ ೪೦ ವಯಸ್ಸು ತುಂಬುವುದರೊಳಗೆ ಒಂದು ಜೀವಾವಧಿಯ ಕೆಲಸವನ್ನು ಸಾಧಿಸಿ

ದ್ದಾರೆ. ಅವರಿಗೂ ಇದು ತಿಳಿದಿತ್ತೆಂದು ನನ್
ನಂಬಿಕೆ. ಆ ಕಾರಣದಿಂದಲೇ ಒಬ್ಬರು
ರಾಷ್ಟ್ರೀಯ ಹಾಗೂ ಜಾಗತಿಕ ಸಮಸ್ಯೆಗಳ
ಕುರಿತು ಹೆಚ್ಚು ಹೆಚ್ಚು ಬರೆಯತೊಡಗ
ದರು, ಇನ್ನೊಬ್ಬರು ಚಳವಳಿಗಿಂತ
ಪಾಂಡಿತ್ಯಕ್ಕೆ ಪ್ರಾಧಾನ್ಯತೆಯನ್ನು ನೀಡಿ
ದರು. ಕನ್ನಡ ಕಾವ್ಯದ ಬಗ್ಗೆ ನಾಗರಾಜ್
ಬರೆಯುವುದು, ಕೋಮು ಗಲಭೆಯ
ಕುರಿತು ಸುಬ್ಬರಾವ್ ವಿಚಾರಮಾಡುವುದು
—ಇವು ಸಾಮಾಜಿಕ ಬದ್ಧತೆ ಹಾಗೂ
ನೈತಿಕ ಜವಾಬ್ದಾರಿಯ ವಿಷಯಗಳಾಗಿ
ಮಾರ್ಪಟ್ಟವು. ನಾಗರಾಜ್ "ಇಸ್ಲಾ
ರಾಷ್ಟ್ರ"ದ ಬಗ್ಗೆ ಸುಬ್ಬರಾವ್ ರಾಜಕೀಯ
ಅರ್ಥವ್ಯವಸ್ಥೆಯ ಬಗ್ಗೆ ಬರೆಯಲು ಸಂಕಲ್ಪ
ಮಾಡಿದ ತರುಣದಲ್ಲೇ ತೀರಿಕೊಂಡರು
ವಿಚಾರವಾದಿಯಾದವನು ಈ ಸಂಗತಿಯ
ಪ್ರಸ್ತಾಪದಿಂದಲೇ ನಕ್ಕುಬಿಟ್ಟಾನು. ತನ
ತರ್ಕದ ಸಹಾಯದಿಂದ ಈ ಇಬ್ಬರ
ಮಹನೀಯರೂ ತಮ್ಮ ಆರೋಗದ ವಿಚಾ
ದಲ್ಲಿ ತೀರಾ ಅಸಡ್ಡೆಯಿಂದ ವರ್ತಿಸಿದರೆಂದ
ಹೇಳಿಯಾನು. ಅನೇಕ ವರ್ಷಗಳ ಕಾಲ
ಇವರು ಮದ್ಯಪಾನ, ಧೂಮಪಾನಗಳ
ತೊಡಗಿ ವಿಪರೀತ ಪ್ರವಾಸಮಾಡಿ
ಊಟೋಪಚಾರದಲ್ಲಿ ನಿಯತವಾಗಿರ
ಬಳಲಿದರೆಂದು ವಾದಿಸಿಯಾನು. ಇದನ
ನಾನು ಇಲ್ಲ ಎನ್ನುವುದಿಲ್ಲ. ಆದರೆ ಮೊದಲ
ಸುಬ್ಬರಾವ್ ಪ್ರಕಟಿಸಿದಂತೆ ನಾಗರಾಜ
ಕೂಡ ತನಗಿಂತ ಮೊದಲು ಸಮಾ
ವೆಂದು ತಿಳಿದು ದೇಹ ದಂಡಿಸಿದರೆನ್ನು
ಆಲೋಚನೆ ಮಾತ್ರ ಮನಸ್ಸಿನಿಂದ ದೂ
ವಾಗುವುದಿಲ್ಲ.

ಮತ್ತೆ ದೊರಕಿದ ಭಾಗ್ಯ

ದುರ್ಗಾ ಪಿ. ಎನ್.
ನೆಕ್ಕರೆಮೂಲೆ ಮನೆ ಕರೋಪಾಡಿ
ಮತ್ತು ಅಂಚೆ ವಯಾ : ವಿಟ್ಲ
ದಕ್ಷಿಣಕನ್ನಡ ೫೭೪ ೨೪೦

"ಆಳುವ ಕಡಲಿನಲಿ ತೇಲಿ ಬರುತಲಿದೆ ನಗೆಯು ಹಾಯಿದೋಣಿ"

ಮನಸ್ಸು 'ಬೇಡ ಬೇಡ' ಎಂದರೂ ನನ್ನ ಕಣ್ಣುಗಳು ಗೋಡೆಯ ಕಡೆಗೇ ನೋಡುತ್ತಿವೆ. ಗೋಡೆಯಲ್ಲಿ ತೂಗು ಹಾಕಿದ ಪವಿತ್ರಳ ಭಾವಚಿತ್ರವನ್ನೇ ಕಾಣುತ್ತಿವೆ. ಭಾವಚಿತ್ರದಲ್ಲಿ ಅಡಗಿದ ಆ ಮುದ್ದು ಮುಖವನ್ನು ನೋಡಿ ನೀರು ಸುರಿಸುತ್ತಿವೆ.

ನನ್ನವರು ಬೇಡವೆಂದರೂ ಪವಿತ್ರಳ ಭಾವಚಿತ್ರವನ್ನು ನಾನು ತೂಗುಹಾಕಿದ್ದೆ. ಅವಳಿಗೆ ಪ್ರಿಯವಾಗಿದ್ದ ಗುಲಾಬಿ ಹೂವನ್ನ ದಿನವೂ ಭಾವಚಿತ್ರಕ್ಕೆ ಇಟ್ಟು ಎರಡು ಹನಿ ಕಂಬನಿ ಸುರಿಸುತ್ತಿದ್ದೆ. ಅಳಿದುಹೋದ ಆ ನನ್ನ ಮಗಳ ಆತ್ಮಕ್ಕೆ ಶಾಂತಿ ಕೋರುತ್ತಿರುತ್ತೇನೆ.

ಜೀವನದಿಯಲ್ಲಿ ಸುಖದ ಅಲೆಗಳನ್ನೇ ಕಾಣದ ನನಗೆ ಪವಿತ್ರಳ ಜನನದಿಂದ ಎಲ್ಲ ನೋವನ್ನೂ ಮರೆತೆ. ಆಕೆಯ ಲಾಲನೆ-ಪಾಲನೆಯಲ್ಲೇ ಸುಖವನ್ನು ಕಂಡೆ. ಆದರೆ ಇದೂ ಕೂಡಾ ವಿಧಿಗೆ ಸಹಿಸಲಾಗದಾಯಿತೆ ? ನನ್ನ ಜೀವನದ ಗತಿಯೇ ಹೀಗೆ. ಎಲ್ಲೋ ಒಂದು ಸುಖದ ಕ್ಷಣ ಇದೆ ಎಂದಾಗ ಏನಾದರೊಂದು ಆಘಾತ ಕಾದಿರುತ್ತದೆ. ಯೋಚಿಸುತ್ತಿದ್ದ ನನಗೆ ಎರಡು ವಾರಗಳ ಹಿಂದೆ ಘಟಿಸಿದ ಆ ದುರಂತ ನೆನಪಾಗಿ ಮೈಯೆಲ್ಲ ನಡುಕವುಂಟಾಯಿತು. ಕಂಬನಿ ತುಂಬಿ ಕಣ್ಣುಗಳು ಕೊಳಗಳಂತಾದುವು.

ಎರಡು ವಾರಗಳ ಹಿಂದೆ ಒಂದಲ್ಲ, ಎರಡು ಘಟನೆಗಳು ಒಂದರ ಹಿಂದೆ ಒಂದರಂತೆ ಬರಸಿಡಿಲಿನಂತೆ ಬಂದೆರಗಿದ್ದವು. ಅವುಗಳಡಿಗೆ ಬಿದ್ದು ನಾನು ಸಾಯಬೇಕಿತ್ತು. ಆದರೆ ಹಾಗಾಗಲಿಲ್ಲ. ಕೆಲವು ಘಟನೆಗಳನ್ನು ಎಣಿಸುವಾಗಲೇ ಅವುಗಳನ್ನು ಎದುರಿಸುವುದು ಹೇಗಪ್ಪ ಎಂದು ಭಯವಾಗುತ್ತದೆ. ಆದರೆ ಆ ಘಟನೆಗಳೇ ಸಂಭವಿಸಿದಾಗ ಅವುಗಳ ಹಿಂದೆಯೇ ಎದುರಿಸುವ ಧೈರ್ಯವೂ ಬರುತ್ತದಲ್ಲ. ಒಂದು ವೇಳೆ ಹೀಗಾಗದಿದ್ದಲ್ಲಿ ಎಷ್ಟೋ ಜನ ಸಾಯುತ್ತಿದ್ದರು, ಅದೆಷ್ಟೋ ಜನ ಬುದ್ಧಿ ಸ್ವಾಸ್ಥ್ಯ ಕಳಕೊಳ್ಳುತ್ತಿದ್ದರು.

ನನ್ನ ಜೀವನದಲ್ಲಿ ಅದೆಷ್ಟೋ ಕಹಿ ಘಟನೆಗಳು ಸಂಭವಿಸಿದ್ದವು. ಅವುಗಳನ್ನು ಎದುರಿಸುವ ಎದೆಗಾರಿಕೆಯೂ ನನ್ನಲ್ಲಿ ಇತ್ತು. ಹಾಗಾಗಿಯೇ ನಾನು ಇಷ್ಟು ಕಷ್ಟಗಳನ್ನು ಎದುರಿಸಬೇಕಾಗಿ ಬಂದಿತೇನೋ?

ನಮ್ಮ ತಂದೆ-ತಾಯಿಗೆ ನಾವು ಹತ್ತು ಮಕ್ಕಳು. ನನಗಿಂತ ಹಿರಿಯಣ್ಣನಿಗೆ ಆದಾಗಲೇ ಮದುವೆಯಾಗಿತ್ತು. ತಂಗಿಗೆ ಮದುವೆಯಾಗಲಿ ಎಂಬ ವ್ಯವಧಾನ ಅವನಿಗಿರಲಿಲ್ಲ. ನನಗೆ ನಾಲ್ವರು ತಂಗಿಯರು, ಮತ್ತೆ ನಾಲ್ವರು ತಮ್ಮಂದಿರು. ತಂದೆ ದುಡಿದು ಸಂಪಾದಿಸಿ ಹಣ ಕೂಡಿಡದಿದ್ದರೂ ತಾಯಿಯ ಮಡಿಲಿಗೆ ಮಕ್ಕಳನ್ನು ಹಾಕಿ ತೃಪ್ತಿಯಿಂದಲೇ ಕಣ್ಮುಚ್ಚಿದ್ದರು. ಈ ಮಕ್ಕಳನ್ನು ಸಾಕುವ ಜವಾಬ್ದಾರಿ ಅಮ್ಮನ ಹೆಗಲಮೇಲೆ ಬಿತ್ತು.

ಅಮ್ಮ ಬೀಡಿ ಕಟ್ಟಿಯೋ, ಕಂಡಕಂಡವರ ಮನೆಯಲ್ಲಿ ದುಡಿದೋ, ನಮ್ಮನ್ನು ದೊಡ್ಡವರನ್ನಾಗಿ ಮಾಡಿದ್ದರು. ಆದರೆ ಸರಿಯಾದ ವಿದ್ಯೆ ದೊರಕಲಿಲ್ಲ. ಹಾಗಾಗಿ ಯಾರೂ ಉದ್ಯೋಗಕ್ಕೆ ಸೇರುವ ಅವಕಾಶ ದೊರಕಲಿಲ್ಲ.

ನಾನೂ ನನ್ನ ತಂಗಿಯರೂ ಬೀಡಿ ಕಟ್ಟುತ್ತಿದ್ದೆವು. ಎಂದೇ ನಮ್ಮ ಹೊಟ್ಟೆಗೆ ಬರಗಾಲ ಬರಲಿಲ್ಲ. ಸ್ವಲ್ಪ ಸಮಾಧಾನದಿಂದ ಜೀವನ ಸಾಗುತ್ತಿದ್ದಂತೆ ನನ್ನಣ್ಣನಿಗೆ ಮದುವೆಯಾಯಿತು.

ನಮ್ಮ ಮನೆಯ ಹೊಸ್ತಿಲ ತುಳಿದು ನಮ್ಮತ್ತಿಗೆಗೆ ನಮ್ಮ ಸಂಸಾರವನ್ನು ನೋಡಿಯೇ ತಲೆತಿರುಗಿತೇನೋ? ಸದಾ ಒಂದಿಲ್ಲೊಂದು ಕಾರಣದಿಂದ ನಮ್ಮಲ್ಲಿ ಜಗಳವಾಡುತ್ತಿದ್ದರು. ದಿನಕಳೆದಂತೆ ಅಮ್ಮನೂ ಸೇರಿದಂತೆ ನಾವೆಲ್ಲ ಆಕೆಯ ಕೈಕೆಳಗಿನ ಆಳುಗಳಂತಾದೆವು. ಇದನ್ನು ನೋಡಲಾರದೆ ಅಣ್ಣ ಒಂದು ದಿನ ಬೇರೆ ಮನೆ ಮಾಡಿ ಸಂಸಾರ ಹೂಡಿದ.

ನನಗಾಗಲೇ ಮದುವೆ ಪ್ರಾಯ ಮೀರಿತ್ತು. ನನ್ನ ಇಬ್ಬರೂ ತಂಗಿಯರೂ ದೊಡ್ಡವರಾಗಿದ್ದರು. ಅಮ್ಮನಿಗೆ ಚಿಂತೆ ಕಾಡತೊಡಗಿತು. ನನ್ನ ತಂಗಿಯರು ಸಣ್ಣ ಪ್ರಾಯದವರಾಗಿದ್ದ ಕಾರಣ ಕೆಲವರು ಕೇಳಿಕೊಂಡು ಬಂದಿದ್ದರು. ಆದರೆ ನನಗೆ ಮದುವೆಯಾಗದೆ ಅವರಿಗೆ ಮದುವೆ ಮಾಡುವ ಮನಸ್ಸು ಅಮ್ಮನಿಗಿರಲಿಲ್ಲ. ಅವರ ಮದುವೆಗೆ ನಾನೊಂದು ಅಡ್ಡಿ ಎಂದು ನನಗಾಗ ಮನವರಿಕೆಯಾಯಿತು. ಅಕ್ಕನ ಮದುವೆಗಿಂತ ಮೊದಲು ತಂಗಿಗೆ ಆಗಬಾರದೆಂದೇನೂ ಇಲ್ಲವಲ್ಲ. ಅಕ್ಕನಿಗಾಗಲಿ ಎಂದು ಕಾದರೆ ತಂಗಿಯರೂ ಮದುವೆಯಾಗದೆಬಾಕಿ! ಈಗ ಇಂತಹ ಪ್ರಸಂಗಗಳು ಅದೆಷ್ಟೋ ನಡೆಯುತ್ತವೆ. ಯೋಚಿಸಿದ ನಾನು, ತಂಗಿಯರಿಗೆ ಮದುವೆ ಮಾಡುವಂತೆ ಅಮ್ಮನಿಗೆ ತಿಳಿಸಿದೆ. ನನ್ನ ನಿರ್ಧಾರ ಕೇಳಿದ ಅಮ್ಮ ಅತ್ತರು, ಮತ್ತೆ ಒಪ್ಪಿಕೊಂಡರು.

ನನ್ನ ಎರಡು ತಂಗಿಯರು ಮದುವೆಯಾಗಿ ಗಂಡನ ಮನೆ ಸೇರಿದ್ದರೂ ನಾನು ತಾಯಿಯ ಮನೆಯಲ್ಲಿಯೇ ಉಳಿಯಬೇಕಾಯಿತು. ಮನಸ್ಸನ್ನು ಎಷ್ಟು ಗಟ್ಟಿ ಮಾಡಿಕೊಂಡರೂ ಒಮ್ಮೊಮ್ಮೆ ಬೇಸರವಾಗುತ್ತಿತ್ತು. ತಂಗಿಯರು ತಮ್ಮ ಗಂಡನೊಂದಿಗೆ ಓಡಾಡುತ್ತಿರುವಾಗ ನನಗೆ ನನ್ನ ಬಗ್ಗೆ ಕೀಳರಿಮೆ ಉಂಟಾಗುತ್ತಿತ್ತು. ಆದರೂ ಹೊರಗೆ ತೋರ್ಪಡಿಸುತ್ತಿರಲಿಲ್ಲ.

ಒಂದು ಹೆಣ್ಣಿಗೆ ಒಂದು ಗಂಡು ಮೊದಲೇ ನಿರ್ಧರಿತನಾಗುತ್ತಾನೆ. ಎಂದು ಕೆಲವರು ಹೇಳುತ್ತಾರೆ. ಇದೆಷ್ಟು ಸತ್ಯವೋ ನಾನರಿಯೆ. ಆದರೆ ನನಗೊಂದು ದಿನ ಕಂಕಣಬಲ ಕೂಡಿ ಬಂದಿತು. ಎರಡನೇ

ಸಂಬಂಧ. ವರನ ಮೊದಲ ಹೆಂಡತಿ ಅನಾರೋಗ್ಯದಿಂದ ಸಾವನ್ನಪ್ಪಿದ್ದಳು. ಅಂತೂ ನನಗೊಮ್ಮೆ ಮದುವೆಯಾದರೆ ಸಾಕೆಂದು ಹಿಂದು ಮುಂದು ನೋಡದೆ ಒಪ್ಪಿಕೊಂಡೆ.

ಹೆಣ್ಣಿಗೆ ಮದುವೆಯಾಗದಿದ್ದರೆ ಸಮಾಜದಲ್ಲಿ ಗೌರವವಿಲ್ಲ. ಅದರಲ್ಲಿಯೂ ತಂಗಿಯರಿಗೆ ಮದುವೆಯಾಗಿದೆ ಎಂದಾದರೆ ಕೇಳುವವರಿಲ್ಲ. 'ಅವಳಿಗಿನ್ನು ಮದುವೆಯಾಗುವುದಿಲ್ಲ' ಎಂಬ ಸಮಾಜದಲ್ಲಿನ ಮಾತುಗಳನ್ನು ಕೇಳಿ ಕೇಳಿ ಸಾಕಾಗಿಹೋಗಿತ್ತು.

ಅಂತೂ ಒಂದು ದಿನ ತಾಯಿಮನೆ ಬಿಟ್ಟು ಗಂಡನ ಮನೆ ಸೇರಿದೆ. ಎಲ್ಲ ಹುಡುಗಿಯರಂತೆ ಮನೆ ತುಂಬ ಕನಸುಗಳನ್ನು ತುಂಬಿಕೊಂಡು ಬಂದಿದ್ದೆ. ನಮ್ಮ ಕನಸುಗಳೆಲ್ಲ ನನಸಾದರೆ ನಾವೆಲ್ಲ ಸದಾ ಸುಖಿಗಳಾಗುತ್ತಿದ್ದೆವು. ಆದರೆ ಹೀಗಾಗುವುದು ಹೇಗೆ ಸಾಧ್ಯ?

ಮೊದಲ ಹೆಂಡತಿಯು ಔಷಧಿಗಾಗಿ ಖರ್ಚು ಮಾಡಿ ಮಾಡಿ ನನ್ನವರಿಗೆ ಕೈತುಂಬ ಸಾಲವಿತ್ತು. ಮನೆಯಲ್ಲಿ ಬೇರೆ ಯಾರು ಇಲ್ಲವಿದ್ದರೂ ಅತ್ತೆಯವರು ಇದ್ದರು. ಸೊಸೆಯಾದವಳನ್ನು ಮಗಳಂತೆ ಕಾಣಬೇಕು ಎಂಬ ನಿಯಮವೇನೋ ಇದೆ. ಆದರೆ ಮಗಳಂತೆ ಬೇಡ, ಸೊಸೆಯಂತೆ ಕಂಡರೆ ನನಗೆ ತೃಪ್ತಿಯಾಗುತ್ತಿತ್ತು. ತನ್ನ ಮಗನ ಹೆಂಡತಿಯೆಂದು ಮರೆತಂತೆ, ನನ್ನನ್ನು ಕಾಣುತ್ತಿದ್ದರು. ಹೋದಲ್ಲಿ ಬಂದಲ್ಲಿ, ನಾನು ಮುಟ್ಟಿದ್ದಲ್ಲಿ ತಪ್ಪನ್ನೇ ಕಂಡು ಸದಾ ಮೂದಲಿಕೆಯ ಮಾತುಗಳು. ಏನೇನೋ ಸುಳ್ಳು ಅಪಾದನೆಗಳನ್ನು ನನ್ನ ಗಂಡನಿಗೆ ತಿಳಿಸಿ ಅವರಿಂದಲೂ ಬೈಗುಳ ಸಿಗುವಂತೆ ಮಾಡುತ್ತಿದ್ದರು. 'ಕ್ಷಮೆಯಾ ಧರಿತ್ರಿ' ಎನ್ನುವಂತೆ ಎಲ್ಲವನ್ನೂ ಹೆಣ್ಣಾದವಳು ನಾನು ಸಹಿಸುತ್ತಿದ್ದೆ.

ನನ್ನ ಗಂಡನಿಗೆ ಸಾಲಕೊಟ್ಟವರು ಒಬ್ಬೊಬ್ಬರೇ ಮನೆಗೆ ಬಂದು ಕೇಳತೊಡಗಿದರು. ಇದನ್ನು ನೋಡಿ ನೋಡಿ ಸಾಕಾಗಿ ನನ್ನ ಇದ್ದಬಿದ್ದ ಚಿನ್ನವನ್ನು ಮಾರಿ ಸಾಲ ತೀರಿಸುವಂತೆ ಹೇಳಿದೆ. ಒಮ್ಮೆಯಾದರೂ ಬಾಯಿ ಮಾತಿಗಾದರೂ 'ಬೇಡ' ಎಂದು ನನ್ನವರು ಹೇಳಲಿಲ್ಲ. ಸಂತೋಷದಿಂದ ಚಿನ್ನವನ್ನು ಕೈಚಾಚಿ ತೆಗೆದುಕೊಂಡರು. ಅಂತೂ ಸಾಲಗಾರರು ಮನೆಗೆ ಬರುವುದು ಕಡಿಮೆಯಾಯಿತು. ಗಂಡನ ಸರ್ವತೋಮುಖ ಅಭಿವೃದ್ಧಿ ಹೆಂಡತಿಯಾದವಳ ಕರ್ತವ್ಯ ತಾನೆ!

ಮದುವೆಯಾಗಿ ವರ್ಷ ಒಂದು ಕಳೆದರೂ ನನಗೆ ಮಕ್ಕಳಾಗುವ ಸೂಚನೆ ಕಂಡು ಬರಲಿಲ್ಲ. ಈಗಂತೂ ಅತ್ತೆಯ ಮಾತುಗಳು ಶೂಲದಂತೆ ನನ್ನ ಮನಸ್ಸನ್ನು ಚುಚ್ಚುತ್ತಿದ್ದವು.

ಅವಳಿಗೆ ಮದುವೆಯಾಗುವಾಗಲೇ ವರ್ಷ ಮೂವತ್ತು ಕಳೆದಿದೆ. ಮತ್ತೆಲ್ಲಿಗೆ ಮಕ್ಕಳಾಗುವುದು. ಮೊದಲ ಸೊಸೆ ಸತ್ತಳು. ಇವಳ ಹೊಟ್ಟೆಯಲ್ಲಿ ಒಂದು ಹುಳುವೂ ಹುಟ್ಟುವುದಿಲ್ಲ. ನಮ್ಮ ಸಂಸಾರ ಇಲ್ಲಿಗೇ ನಿಂತು ಹೋಯಿತಲ್ಲ. ಇನ್ನೇನು ಮಾಡುವುದಪ್ಪ ಇನ್ನೊಂದು ಮದುವೆ ಮಾಡಿ ನೋಡುವುದು' ಇವಕ್ಕಿಂತ ಕಟು ನುಡಿ ಇನ್ಯಾವ ಹೆಣ್ಣಿಗೆ ಬೇಕು? ತಾನು ಜೀವಂತವಿರುವಾಗಲೇ ತನ್ನ ಗಂಡನಿಗೆ ಮರುಮದುವೆಯೆಂದಾದರೆ ಅದಕ್ಕಿಂತ ಬೇಸರದ ಸಂಗತಿ ಬೇರೇನಿದೆ?

ಈ ಮಾತುಗಳನ್ನು ಕೇಳಿದ ಒಂದೆರಡು ತಿಂಗಳಲ್ಲಿ ಗರ್ಭಿಣಿಯಾದೆ. ಈಗ ಅತ್ತೆಗೆ ಸಮಾಧಾನವಾಯಿತು. ತಾಯಿಯಾಗುವ ಸೂಚನೆಯಲ್ಲಿರುವ ನಾನು ಪರಮ ಸಂತೋಷಗೊಂಡೆ. ಆದರೆ ಈ ಸಂತೋಷ ಕ್ಷಣಿಕವಾಗಿತ್ತು. ಎರಡು ತಿಂಗಳು ಕಳೆದಾಗಲೇ ನನ್ನ ಒಡಲು ಬರಿದಾಯಿತು.

ಮತ್ತೆರಡು ತಿಂಗಳಲ್ಲಿ ಪುನಃ ಗರ್ಭಿಣಿಯಾದೆ. ಈ ಸಲ ಅತ್ತೆಯವರು ತುಂಬಾ ಜಾಗ್ರತೆಯಿಂದ ನನ್ನನ್ನು ನೋಡಿಕೊಳ್ಳುತ್ತಿದ್ದರು.

ಎರಡು ತಿಂಗಳಾದಾಗ ತೀವ್ರ ಹೊಟ್ಟೆನೋವು ಆರಂಭವಾಯಿತು. ತಕ್ಷಣ ಆಸ್ಪತ್ರೆಗೆ ಸೇರಿಸಿದ ಕಾರಣ ಗರ್ಭಪಾತವಾಗುವುದು ತಪ್ಪಿತು. ಆದರೆ 'ತುಂಬಾ ವಿಶ್ರಾಂತಿ ಅಗತ್ಯ, ಕೆಲಸವೇನೂ ಮಾಡಬಾರದು' ಎಂದು ವೈದ್ಯರು ತಿಳಿಸಿದ್ದರು.

ಈಗ ಕೆಲಸಗಳೆಲ್ಲವೂ ಅತ್ತೆಯ ತಲೆಯ ಮೇಲೆ. ಮಗನಿಗೊಂದು ಮಗುವಾಗಲಿ ಎಂಬ ಆಸೆಯಿಂದ ಎಲ್ಲವನ್ನು ಸಹಿಸಿಕೊಂಡರು. ಆದರೂ ಅವರ ಅವಸ್ಥೆ ಕಾಣುವಾಗ ನನಗೇ ಕಿರಿಕಿರಿಯಾಗುತ್ತಿತ್ತು. ಅನಿವಾರ್ಯವಾಗಿ ಎಲ್ಲವನ್ನೂ ಸಹಿಸಿದೆ.

ಒಂದು ಮಗುವಿನ ಆಸೆಯಿಂದ ಒಂಭತ್ತೂ ತಿಂಗಳು ಮಲಗಿಯೇ ಜೀವನ ಕಳೆದೆ. ದಿನ ತುಂಬಿ ಕಳೆದರೂ ನೋವು ಕಾಣಿಸದೇ ಇದ್ದಾಗ ಆಸ್ಪತ್ರೆಗೆ ಹೋದೆವು. 'ಮಗುವನ್ನು ಸಿಸೇರಿಯನ್ ಮಾಡಿ ತೆಗೆಯಬೇಕಷ್ಟೆ' ಎಂದು ವೈದ್ಯರು ಹೇಳಿದಾಗ ಬೆಚ್ಚಿ ಬೆವರಿದೆ. ವೈದ್ಯರು ಧೈರ್ಯ ತುಂಬಿದಾಗ ಸಮಾಧಾನಗೊಂಡೆ. ಅಯ್ಯೋ, ಮಗುವಿನ ಜನನವಾಗಬೇಕಾದರೆ ನಾನೆಷ್ಟು ಕಷ್ಟ ಅನುಭವಿಸಬೇಕಾಯಿತು? ಒಂದು ಹೆಣ್ಣಿಗೆ ಮದುವೆಯಾಗದಿದ್ದರೆ "ಆಕೆಗೆ ಮದುವೆಯಾಗಿಲ್ಲ' ಎಂದು ಜನರು ಹೀನವಾಗಿ ಹೇಳುತ್ತಾರೆ. ಮದುವೆಯಾಗಿ ಮಕ್ಕಳಾಗದಿದ್ದರೆ 'ಆಕೆ ಬಂಜೆ' ಎಂದು ಕಟುವಾಗಿ ಸಮಾಜ ನುಡಿಯುತ್ತದೆ. ಹೆಣ್ಣಿನ ಬಗ್ಗೆ ಹೀಗೆ ಯಾವಾಗಲೂ ಅಪವಾದದ ಮಾತುಗಳೆ.

ಆಸ್ಪತ್ರೆಗೆ ಸೇರಿದ ದಿನವೇ ಮಗುವನ್ನು ಆಪರೇಷನ್ ಮಾಡಿ ಹೊರತೆಗೆದರು. ಹೆರಿಗೆ ನೋವನ್ನು ಅನುಭವಿಸುವುದು ತಪ್ಪಿತಲ್ಲ ಎಂದು ಸಮಾಧಾನಗೊಂಡೆ. ಪುನಃ ನಾಲ್ಕು ತಿಂಗಳ ವಿಶ್ರಾಂತಿ ಬೇಕೆಂದಾಗ ಗಾಬರಿಗೊಂಡೆ. ಮಗು ಹೆಣ್ಣೆಂದು ತಿಳಿದಾಗ ಅತ್ತೆಯವರಿಗೆ ಸ್ವಲ್ಪ ಅಸಮಾಧಾನವಾಯಿತು. 'ಮೊದಲ' ಹೆರಿಗೆಯ ಕಾಲ ತಾಯಿಯ ಮನೆಯಲ್ಲಿರಬೇಕಾದುದು ಒಂದು ಕ್ರಮ. ಆದರೆ ತವರಲ್ಲಿ ತಾಯಿ ಕಳೆದ ವರ್ಷ ಮೃತರಾದ ಕಾರಣ ನನ್ನನ್ನು ಕರೆಯುವ ಮನಸ್ಸು ಯಾರೂ ಮಾಡಲಿಲ್ಲ. ತಾಯಿ ಇರುವತನಕ ತವರ ಪ್ರೀತಿ ತಾನೆ!

'ಮುಂದೆಯೂ ನನಗೆ ಸಹಜ ಹೆರಿಗೆ ಕಷ್ಟ, ಹಾಗಾಗಿ ಐದುವರ್ಷದ ತನಕ ಇನ್ನೊಂದು ಮಗುವಾಗಬಾರದು ಎಂಬ ಸಲಹೆಹೊತ್ತು ಮಗುವಿನೊಂದಿಗೆ ಮನೆ ಸೇರಿದೆ.

ಪವಿತ್ರಳೆಂಬ ನಾಮ ಹೊತ್ತ ನನ್ನ ಮಗಳು ಮುದ್ದು ಮುದ್ದಾಗಿದ್ದಳು. ಈಗ ನಾನೂ ಎದ್ದು ಓಡಾಡುವಂತಾಗಿದ್ದೆ. ಅತ್ತೆಗೂ ವಿಶ್ರಾಂತಿ ದೊರಕಿ ಸದಾ ಮಗುವಿನ

ಜೊತೆಯೇ ಇರುತ್ತಿದ್ದರು. ನನ್ನವರೂ ಸಂತೋಷಪಟ್ಟರು.

ಪವಿತ್ರಳಿಗೆ ಎರಡು ವರ್ಷ ತುಂಬಿತು. ಅಮ್ಮನಿಗಿಂತಲೂ ಆಕೆಗೆ ಅಜ್ಜಿಯ ಮೇಲೆ ಹೆಚ್ಚು ಪ್ರೀತಿ. ಇದರಿಂದ ನನಗೇನೂ ಮತ್ಸರವಿಲ್ಲ. ಸಂತೋಷವೇ. ಅತ್ತೆ ನನ್ನನ್ನು ಎಷ್ಟೇ ಕಿರಿಕಿರಿ ಮಾಡುತ್ತಿದ್ದರೂ ಎದುರುತ್ತರ ಕೊಟ್ಟವಳಲ್ಲ ನಾನು. ಒಂದು ವೇಳೆ ನಾನೂ ಅವರಂತೆ ಮಾತಾಡುತ್ತಿದ್ದರೆ ಎಲ್ಲರ ಮನೆಯಂತೆ ಅತ್ತೆ-ಸೊಸೆ ಜಗಳ ದಿನಾ ನಡೆಯುತ್ತಿತ್ತು. ಇದು ನನಗೆ ಇಷ್ಟವಿರಲಿಲ್ಲ. ಅದು ಅವರ ಅಭ್ಯಾಸವೆಂದು ಭಾವಿಸುತ್ತಿದ್ದೆ. ಕ್ರಮೇಣ ಅತ್ತೆಗೆ ನನ್ನಮೇಲೆ ಅಭಿಮಾನ ಮೂಡತೊಡಗಿತು. ಈಗ ನಾನೊಬ್ಬ ಸುಖಿ ಜೀವಿ ಎನ್ನಬಹುದೇನೋ?

ಸುಖ ಎಂಬುದು ನನ್ನ ಜೀವನದಲ್ಲಿ ಕ್ಷಣಿಕ. ಅತ್ತೆ ಅಂಗಳದಲ್ಲಿ ಜಾರಿಬಿದ್ದು ಹಾಸಿಗೆ ಹಿಡಿದರು. ಹಾಸಿಗೆಯಿಂದ ಮೇಲೇಳಲೂ ಅಸಾಧ್ಯ. ಅವರ ಎಲ್ಲ ಕೆಲಸವೂ ಅಲ್ಲಿಯೇ ಆಗುತ್ತಿತ್ತು, ಅಜ್ಜಿಯೊಂದಿಗೆ ಬೆಳೆದ ಮಗಳಿಗೆ ಈಗ ತುಂಬಾ ಬೇಸರ. ಅದರಿಂದ ಒಂದೇ ಸಮನೆ ಮೊಂಡು ಮಾಡುತ್ತಿದ್ದಳು. ಒಂದೆಡೆ ಹೀಗೆ ಇನ್ನೊಂದೆಡೆ ಮನೆಗೆಲಸ, ಅತ್ತೆಯ ಚಾಕರಿ ಎಲ್ಲವೂ ನನ್ನ ಹೆಗಲಮೇಲೆ ಬಿದ್ದಾಗ ಹೊರೆ ಹೊರಲಾಗದ ಎತ್ತಿನಂತೆ ಒದ್ದಾಡಿದೆ. ಆದರೆ ಎಲ್ಲವನ್ನೂ ಮಾಡುವುದು ಗೃಹಿಣಿಯಾದ ನನ್ನ ಕರ್ತವ್ಯ ಎಂದೆಣಿಸಿ ಸಮಾಧಾನ ಪಟ್ಟುಕೊಂಡೆ.

ಹಾಸಿಗೆಯಿಂದ ಮೇಲೇಳದೆ ಒಂದು ವರ್ಷ ಜೀವನ ಸಾಗಿಸಿದ ನನ್ನ ಅತ್ತೆ ಒಂದು ದಿವಸ ಕೊನೆಯುಸಿರೆಳೆದರು ಹಿರಿಯ ಆಸರೆಯೊಂದನ್ನು ಕಳೆದ ಅನುಭವ ನನಗಾಯಿತು.

ಪವಿತ್ರಳಿಗೆ ಐದು ವರ್ಷ ಕಳೆದಾಗ ಹತ್ತಿರದ ಶಾಲೆಗೆ ಸೇರಿಸಿದೆವು. ಈಗಂತೂ ನನಗೆ ಸಮಯವೇ ಕಳೆಯುತ್ತಿರಲಿಲ್ಲ. ನನ್ನವರು ಸಣ್ಣ ಅಂಗಡಿಯೊಂದನ್ನು ನಡೆಸುತ್ತಿದ್ದರು. ಒಂದಿಷ್ಟು ಲಾಭ ದೊರಕಿ ನಮ್ಮ ಜೀವನ ಸಾಗುತ್ತಿತ್ತು. ಕೆಲಸದ ಹೊರೆ ಕಡಿಮೆಯಾದುದರಿಂದ ನಾನು ಅಲ್ಪಸ್ವಲ್ಪ ಬೀಡಿ ಕಟ್ಟಲು ಆರಂಭಿಸಿದೆ. ಕಾಲ ಸರಿಯುವುದಕ್ಕೇನು ತೊಡಕಿದೆ? ಹುಟ್ಟು—ಸಾವು, ಸುಖ—ದುಃಖ, ನೋವು—ನಲಿವು. ಯಾವುದರ ಗೊಡವೆಯೂ ಇಲ್ಲದೆ ಹಗಲು ರಾತ್ರಿ ಆಗುತ್ತಲೇ ಇರುತ್ತದೆ. ದಿನ ಕಳೆಯುತ್ತಲೇ ಇರುತ್ತದೆ. ವರ್ಷ ಸಾಗುತ್ತಲೇ ಇರುತ್ತದೆ. ಸುಖದ ದಿನಗಳಾದರೆ ಸಾಗುವ ಪರಿವೆಯೇ ಇರುವುದಿಲ್ಲ. ಬದಲು, ಕಷ್ಟಗಳೇ ಎದುರಾದಾಗ ದಿನವೇ ಕಳೆಯುವುದಿಲ್ಲ ಎನ್ನುವ ಅನುಭವ ನಮಗಾಗುತ್ತದೆ.

ನನಗೀಗ ಸಮಯ ಕಳೆದದ್ದೇ ಗೊತ್ತಾಗಲಿಲ್ಲ ಪವಿತ್ರ ಈಗ ಮೂರನೇ ತರಗತಿಯ ವಿದ್ಯಾರ್ಥಿನಿ. ಆಕೆ ತುಂಬಾ ಜಾಣೆ. ಪ್ರತಿಯೊಂದು ಚಟುವಟಿಕೆಯಲ್ಲೂ ಆಕೆಯೇ ಮುಂದು.

“ಅಮ್ಮಾ ಅಮ್ಮಾ” ಒಂದು ದಿನ ಖುಷಿಯಿಂದ ಪವಿತ್ರ ಶಾಲೆಯಿಂದ ಓಡುತ್ತಲೇ ಬಂದಳು.

“ಏನು ಭಾರೀ ಖುಷಿಯಲ್ಲಿದ್ದಿಯಾ?” ಆಕೆಯನ್ನು ಕೂಡಲೇ ಪ್ರಶ್ನಿಸಿದೆ.

“ಅಮ್ಮಾ ನಮ್ಮ ಶಾಲೆಯಿಂದ ಪ್ರವಾಸ ಹೋಗುತ್ತಾರಂತೆ. ನಾನು ಹೋಗಲೇ?”

ಮಗುವಿನ ಮುಖದಲ್ಲಿ ಹೋಗಬೇಕೆಂಬ ತೀವ್ರ ಹಂಬಲ ಎದ್ದು ಕಾಣುತ್ತಿತ್ತು. ತಿಂಡಿಯನ್ನೂ ತಿನ್ನದೆ 'ನಾನು ಹೋಗ್ಬೇಕಮ್ಮ?' ಪುನಃ ಕೇಳಿದಳು. 'ಬೇಡ' ಎಂದು ಹೇಳಿ ಮಗುವಿನ ಮನಸ್ಸನ್ನು ನೋಯಿಸಲು ನನ್ನಿಂದಾಗಲಿಲ್ಲ. ಆದರೂ ಕಳುಹಿಸುವ ಮನಸ್ಸು ನನಗಿರಲಿಲ್ಲ. ತುಂಬಾ ಚಿಕ್ಕವಳು ಎಂಬ ಮಮತೆ. 'ಅಪ್ಪ ಬಂದ ಮೇಲೆ ಏನೂಂತ ನಿರ್ಧರಿಸೋಣ' ಎಂದು ನಾನು ಹೇಳಿದಾಗಲೇ ಪವಿತ್ರಳ ಮುಖ ಬಾಡಿತು. ಮಾತಾಡದೆ ತಿಂಡಿ ತಿಂದಳು. ಮುಷ್ಕರವೇನೂ ಮಾಡಲಿಲ್ಲ.

ನನ್ನವರು ಅಂಗಡಿಯಿಂದ ಬರುವಾಗ ಪವಿತ್ರ ನಿದ್ದೆಮಾಡಿಯಾಗಿತ್ತು. ವಿಷಯ ತಿಳಿಸಿದಾಗ ಅವರೂ ಒಮ್ಮೆ ಬೇಡವೆಂದು ಹೇಳಿದರು. ಮಗು ತುಂಬಾ ಆಸೆಯಲ್ಲಿದೆ ಎಂದು ನಾನು ಹೇಳಿದೆ. ನಂತರ ಇಬ್ಬರೂ ಧೈರ್ಯ ತಂದುಕೊಂಡು ಹೋಗಲು ಒಪ್ಪಿಗೆ ಸೂಚಿಸುವುದೆಂದು ನಿರ್ಧರಿಸಿದೆವು.

ಮರುದಿನ ಏಳುವಾಗಲೂ ಸಪ್ಪೆಯಾಗಿಯೇ ಇದ್ದಳು. ಪುನಃ ಅವಳಾಗಿಯೇ ಕೇಳಲಿಲ್ಲ ಆಕೆಯ ತಂದೆಯೇ ಕರೆದು 'ಪ್ರವಾಸಕ್ಕೆ ಹೋಗು' ಎಂದಾಗ ಪವಿತ್ರಳಿಗೆ ತುಂಬಾ ಖುಷಿ. ಆ ದಿನ ಶಾಲೆಗೆ ಬೇಗನೇ ಹೋದಳು.

ಪ್ರವಾಸ ಒಂದೇ ದಿನ, ಮಂಗಳೂರಿನ ಬಜ್ಪೆಯಲ್ಲಿ ವಿಮಾನ ವೀಕ್ಷಣೆ, ಪಣಂಬೂರಿನಲ್ಲಿ ಹಡಗು ಹಾಗೂ ಸಮುದ್ರ ನೋಡುವುದು, ಕಟೀಲು ಶ್ರೀದೇವಿಯ ಸನ್ನಿಧಿಗೆ ಭೇಟಿ–ಇವಿಷ್ಟೇ ಕಾರ್ಯಕ್ರಮಗಳು ಒಂದೇ ದಿನಪ್ಪೆಂದಾಗ ನಾವೂ ಸಮಾಧಾನಪಟ್ಟೆವು ಬೆಳಿಗ್ಗೆ ಹೋದರೆ ಸಂಜೆ ಬರಬಹುದಲ್ಲ ಎಂದು.

ಪ್ರವಾಸ ಹೋಗುವ ಮೊದಲ ರಾತ್ರಿ ಪವಿತ್ರಳಿಗೆ ನಿದ್ದೆಯೇ ಬರಲಿಲ್ಲ. ಬೆಳಿಗ್ಗೆ ಬೇಗ ಎದ್ದು ಸ್ನಾನಮಾಡಿ ಹೊಸ ಅಂಗಿಯನ್ನು ಧರಿಸಿ ಹೊರಟಳು. ಶಾಲೆಯತನಕ ನನ್ನವರು ಹೋಗಿದ್ದರು. ಹೊರಡುವ ಮೊದಲು ಜಾಗ್ರತೆಯ ಮಾತುಗಳನ್ನು ಸಾಕಷ್ಟು ಹೇಳಿದ್ದೆ. ಎಲ್ಲವನ್ನು ಒಪ್ಪಿದ್ದಳು.

ಸಂಜೆ ಗಂಟೆ ಆರಾದರೂ ಪವಿತ್ರ ಬಾರದೆ ಇದ್ದಾಗ ಆತಂಕಗೊಂಡೆ. ಶಾಲೆಗೇ ಬರಲಿಲ್ಲವೆಂದು ಸಮಾಧಾನಗೊಂಡೆ ಆದರೆ ಸಮಯ ಕಳೆದಂತೆ ನನ್ನ ಆತಂಕ ಹೆಚ್ಚಾಯಿತು. ನೆರೆಮನೆಯ ಹುಡುಗಿ ಆಶಾ ಬಂದಾಗ ಇನ್ನೇನು ಈಗ ಪವಿತ್ರ ಬರುತ್ತಾಳೆ ಎಂದು ಸಂತೋಷಗೊಂಡೆ. ಆದರೆ ಬಂದವಳು ಪವಿತ್ರ ಅಲ್ಲ, ಸಪ್ಪೆ ಮುಖ ಹೊತ್ತ ಆಕೆಯ ಅಧ್ಯಾಪಕಿ ಗೀತಾ. ಅಳುತ್ತಲೇ ಆಕೆ ಹೇಳಿದ ವಿಷಯ, 'ಪವಿತ್ರ ಸಮುದ್ರದಲ್ಲಿಳಿದಾಗ ದೊಡ್ಡದೊಂದು ತೆರೆ ಬಂದು ಆಕೆಯನ್ನು ಸಮುದ್ರಕ್ಕೆಳೆಯಿತು. ಎಷ್ಟು ಪ್ರಯತ್ನಪಟ್ಟರೂ ಆಕೆ ಸಿಗಲೇ ಇಲ್ಲ.' 'ಅಯ್ಯೋ' ಎಂದು ನಾನು ಚೀರಿದೆ. ಅಷ್ಟೇ ನೆನಪು. ಪುನಃ ನೆನಪು ಬಂದಾಗ ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿದ್ದೆ. ನಾನಾಗ ಗರ್ಭಿಣಿಯೂ ಆಗಿದ್ದೆ. ಆದರೆ ನೆನಪು ಮರುಕಳಿಸಿದಾಗ ಎಲ್ಲವೂ ಬರಿದೆನಿಸಿತು. ಬರಿದೂ ಆಗಿತ್ತು.

ಬಹಳ ಕಷ್ಟಪಟ್ಟು ಹೊಟ್ಟೆಯಲ್ಲಿ ಇರಿಸಿ, ನೋವುತಿಂದು ಪವಿತ್ರಳನ್ನು ಪಡೆದಿದ್ದೆ. ಆಕೆ ನನ್ನಿಂದ ಬಹುದೂರ ಹೋಗಿದ್ದಳು. ಆದರೂ ಇನ್ನೊಂದು ಮಗುವಿನ ತಾಯಿಯಾಗುವ ಹಂತದಲ್ಲಿದ್ದೆ. ಆದೂ ಒಡಲಿಂದ ಜಾರಿತು.

ಹೆಣ್ಣಾದವಳಿಗೆ ಇದಕ್ಕಿಂತ ಆಘಾತ ಬೇರೇನು ಬೇಕು.

ನಾನೀಗ ಒಂದು ಜೀವ ಮಾತ್ರ ಎನ್ನುವ ಅನುಭವ. ಹಸಿವಾಗುತ್ತದೆ. ಒಂದಿಷ್ಟು ಊಟ ಮಾಡುತ್ತೇನೆ. ನನ್ನವರು ಒಡಲಲ್ಲಿ ದುಃಖ ನುಂಗಿ ನನ್ನನ್ನು ಸಮಾಧಾನಿಸಲು ಪ್ರಯತ್ನಿಸುತ್ತಾರೆ. ನನಗೆಲ್ಲಿಯ ಸಮಾಧಾನ?

ಪವಿತ್ರಳ ಭಾವಚಿತ್ರವನ್ನು ಗೋಡೆಯಲ್ಲಿ ತೂಗುಹಾಕಿ ನೋಡಿ ನೋಡಿ ಅಳುತ್ತೇನೆ. ಒಮ್ಮೊಮ್ಮೆ ಸಮಯದ ಪ್ರಜ್ಞೆಯೂ ನನಗಿರುವುದಿಲ್ಲ. ನನ್ನ ಅವಸ್ಥೆಯನ್ನು ನೋಡಿ ನನ್ನವರು ಅಂಗಡಿಗೆ ಹೋಗುವುದನ್ನೂ ನಿಲ್ಲಿಸಿದ್ದಾರೆ.

ಪವಿತ್ರ ನಮ್ಮಿಂದ ದೂರ ಹೋಗಿ ಹತ್ತು ಹದಿನೈದು ದಿನ ಕಳೆಯಿತು. ಹತ್ತು ಯುಗಗಳೇ ಕಳೆದ ಅನುಭವ. ಯಾಂತ್ರಿಕವಾಗಿ ಒಳಗೇನೋ ಕೆಲಸದಲ್ಲಿದ್ದೆ. ಅಮ್ಮಾವ್ರೆ.... ಅಮ್ಮಾವ್ರೆ! ಯಾರೋ ಕರೆದಂತಾಯಿತು. ಆದರೂ ನಾನು ಹೋಗುವ ಮನಸ್ಸು ಮಾಡಲಿಲ್ಲ. ನನ್ನವರೇ ಹೊರಗೆ ಹೋಗಿ ನೋಡಿದರು. 'ಪವಿತ್ರಾ' ಎಂದು ಗಟ್ಟಿಯಾಗಿ ಕರೆದಾಗ, ಕನಸೋ ಎಂಬಂತೆ ಹೊರ ಗೋಡಿದೆ. 'ಹೌದು ನನ್ನ ಪವಿತ್ರ. ನನಗೆ ಪವಿತ್ರ ಜೀವನ ನೀಡಿದ ನನ್ನ ಮಗು— ಮೀನು ಹಿಡಿಯುವವಳ ಜೊತೆಯಲ್ಲಿ.

'ಅಮ್ಮಾವ್ರೆ ಈ ಮಗು ಸಮುದ್ರದಲ್ಲಿ ನನ್ನವರಿಗೆ ದೊರಕಿತು. ಪ್ರಜ್ಞೆ ತಪ್ಪಿತ್ತು. ಚಿಕಿತ್ಸೆ ಮಾಡಿ ಗುಣಪಡಿಸಿದೆವು. ಈಗ ಒಂದೇ ಸಮನೆ ನಿಮ್ಮಲ್ಲಿಗೆ ಬರಬೇಕು ಎಂದು ಹೆಸರು, ವಿಳಾಸವೆಲ್ಲ ಹೇಳಿತು. ಹಾಗೆ ಇಲ್ಲಿಗೆ ಕರಕೊಂಡು ಬಂದೆ' ಆಗಲೇ ನನ್ನದೊಂದು ಹೊಸ ಸೀರೆ, ಹಣ ಆಕೆಯ ಕೈಯಲ್ಲಿಟ್ಟು ಕಂಬನಿ ಹರಿಸಿದಾಗ ಪವಿತ್ರ ತಂದೆಯ ತೊಡೆಯಲ್ಲಿದ್ದಳು.



ನೀನೇನು ಕೊಡಬಲ್ಲೆ ಎನ್ನುವುದರ ಮೇಲೆ ನಿನ್ನ ಸುಖ ಸಂತಿವೆಯೋ ಹೊರತು ನೀನೇನು ತೆಗೆದುಕೊಳ್ಳಬಲ್ಲೆ ಎನ್ನುವುದರ ಮೇಲಲ್ಲ.

—ಗಾಂಧೀಜಿ

ಡಾ|| ಸಿಂಧುವಳ್ಳಿ ಅನಂತಮೂರ್ತಿ : ಹವ್ಯಾಸಿ ರಂಗಭೂಮಿಯ ಹಿರಿಯ ಚೇತನ

ನಾಗಚಂದ್ರ

೨೧೪ಬಿ, ಅಕ್ಷರ ಕುಟೀರ, ೪ನೆಯ ಮುಖ್ಯ ರಸ್ತೆ
೧೭ನೆಯ ತಿರುವು, ವಿದ್ಯಾರಣ್ಯಪುರ
ಮೈಸೂರು–೫೭೦ ೦೦೮

ಆಗಸ್ಟ್ ೧೩, ೧೯೯೮ ಸಂಜೆ ಸುಮಾರು ೫–೩೦ ನಾಡಿನ ಸಾಂಸ್ಕೃತಿಕ ಪರಂಪರೆಯ ಹಿರಿಯ ಕೊಂಡಿಯೊಂದು ಘಟಕ್ಕನೆ ಕಳಚಿ ಕೊಂಡಿತು.

'ವಿಜಯ, ಮೆಲ್ಲಗೆ, ನೋಡಿಕೊಂಡು ಹೆಜ್ಜೆ ಇಡು' ಎಂದು ಧರ್ಮಪತ್ನಿ 'ವಿಜಯ' ಅವರಿಗೆ ಹೇಳಿದ ಮರುಕ್ಷಣದಲ್ಲೇ ಯಾವ ಉದ್ಗಾರಗಳೂ ಇಲ್ಲದೆ ಕುಸಿದು ನೆಲ ಕಚ್ಚಿದರು.

ಸಿಂಧುವಳ್ಳಿಯವರು ಇದ್ದಕ್ಕಿದ್ದಂತೆ ಜೀವನ ರಂಗದಿಂದ ಸೈಡ್ ವಿಂಗ್‌ಗೆ ಮರೆಯಾದರು ಎಂದರೆ ಅಂದು ಯಾರೂ ನಂಬಲಿಲ್ಲ. ಅವರ ಆತ್ಮೀಯ ವಲಯದ ಗೆಳೆಯ ಡಾ|| ಹಾ. ಮಾ. ನಾಯಕರಿಗೆ ಯಾರೋ ಈ ಸುದ್ದಿ ತಿಳಿಸಿದಾಗ 'ದೊಡ್ಡ ವ್ಯಕ್ತಿಗಳ ಬಗೆಗೆ ಹೀಗೆಲ್ಲ ಹುಡುಗಾಟ ಆಡಬಾರದು. ಸುಮ್ಮಸುಮ್ಮನೆ ಅವರನ್ನೇಕೆ ಸಾಯಿಸುತ್ತೀರಿ' ಎಂದರು.

ಅನಂತಮೂರ್ತಿ ಬದುಕಿದ್ದಾಗಲೂ ಒಂದು ಬಗೆಯ 'ಧಿಮಾಕಿ'ನಲ್ಲೇ; ಸತ್ತದ್ದೂ ಅದೇ ಬಗೆಯ 'ಧಿಮಾಕಿ'ನಲ್ಲೇ. ಎಲ್ಲರಿಗೂ ಇಂತಹ ಸಾವು ಬರುವುದಿಲ್ಲ!

'ಅನಂತಮೂರ್ತಿ'ಯವರ ಹೆಸರು ಬಂದಾಗಲೆಲ್ಲ ಸಹಜವಾಗಿಯೇ ಯಾವ ಅನಂತಮೂರ್ತಿ? ಎಂಬ ಪ್ರಶ್ನೆ ಬರುತ್ತಿದ್ದುದು ಸಹಜ. ಒಂದು ಡಾ|| ಯು.ಆರ್. ಅನಂತಮೂರ್ತಿ ಅವರದು. ಇನ್ನೊಂದು ಡಾ|| ಸಿಂಧುವಳ್ಳಿ ಅನಂತಮೂರ್ತಿ ಅವರದು. ಒಬ್ಬರು 'ಸಾಹಿತಿಯಾಗಿ' ಸುಪ್ರಸಿದ್ಧಿಯನ್ನು ಪಡೆದಿದ್ದರೆ, ಮತ್ತೊಬ್ಬರು 'ರಂಗಕರ್ಮಿ'ಯಾಗಿ ಸುಪ್ರಸಿದ್ಧಿಯನ್ನು ಪಡೆದಿದ್ದರು. ಮೈಸೂರಿಗೆ ಈ ಇಬ್ಬರು ಮಹನೀಯರಿಂದಲೂ ಸಾಹಿತ್ಯಕ— ಸಾಂಸ್ಕೃತಿಕ ವಲಯಕ್ಕೆ ಕೋಡು ಮೂಡಿತ್ತು.

ನನ್ನ ತಾಯಿಯ ತಂಗಿಯನ್ನು ಸಿಂಧುವಳ್ಳಿ ಸುಬ್ರಹ್ಮಣ್ಯಂ ಅವರಿಗೆ ಮದುವೆಮಾಡಿ ಕೊಡಲಾಗಿತ್ತು. ಸ್ವಾತಂತ್ರ್ಯ ಹೋರಾಟಗಾರರಾಗಿ, ತೀರಾ ಹಟವಾದಿಯಾಗಿ, ಕಾಂಗ್ರೆಸ್ ಪಕ್ಷದಲ್ಲಿದ್ದರೂ ತೀರಾ ನಿಷ್ಠುರರಾಗಿ, ಇದ್ದ ಆಸ್ತಿಯನ್ನು ಕಳೆದುಕೊಂಡವರಿಗೆ ಮಾದರಿಯಾಗಿದ್ದವರು ನನ್ನ ಚಿಕಪ್ಪ. ಇವರ ತಮ್ಮನೇ ಅನಂತಮೂರ್ತಿ.

ಅನಂತಮೂರ್ತಿಯವರಿಗೂ ನನಗೂ ನಂಟು ಬೆಳೆದಿದ್ದು 'ರಂಗಭೂಮಿಯ ಕಾರಣ

ಕ್ಕಾಗಿ, ಬಂಧುತ್ವಕ್ಕಲ್ಲ'. ಬಂಧುಗಳಾಗಿ ನಮ್ಮ ಸಂಪರ್ಕ ಅಷ್ಟಕ್ಕಷ್ಟೆ. ನನಗೆ ತಿಳಿದಿರುವಂತೆ ಅವರು ಜಾತಿ ನಂಟಸ್ತಿಕೆಗಳನ್ನು ಹಚ್ಚಿಕೊಂಡವರಲ್ಲ. ರಂಗಕರ್ಮಿಗಳನ್ನು ನೆಂಟರಿಗಿಂತಲೂ ಹೆಚ್ಚು ಉಪಚರಿಸುತ್ತಿದ್ದರು. 'ಸಮತೆಂತೋ' ಅಥವಾ 'ಕಲಾ ಸುರುಚಿ'ಯ ನಾಟಕಗಳಲ್ಲಿ ತೊಡಗಿಸಿಕೊಂಡ ಎಲ್ಲ ರಂಗಕರ್ಮಿಗಳಿಗೆ ಸಿಂಧುವಳ್ಳಿಯವರ ಶ್ರೀಮತಿ ವಿಜಯ ಅವರ ಪಾಕದ ರುಚಿಯ ಅನುಭವವಾಗಿರುತ್ತದೆ. ಪ್ರಯೋಗ ದಷ್ಟೇ ಶುಚಿ, ರುಚಿ ಅವರ ಅತಿಥ್ಯದಲ್ಲೂ. ನನಗೆ ತಿಳಿದಿರುವಂತೆ ಇಂಥ ಬಗೆಯ ಸಮಾರಾಧನೆ ಯಾವ ತಂಡದಲ್ಲೂ ನಡೆದಿಲ್ಲ.

'ಸಿಂಧುವಳ್ಳಿ' ಎಂಬ ಗ್ರಾಮ ಸಾಂಸ್ಕೃತಿಕ ವಲಯದಲ್ಲಿ ದಾಖಲಾಗಲು ಅನಂತಮೂರ್ತಿಯವರೇ ಕಾರಣ. ಸಿಂಧುವಳ್ಳಿ ಶಾನುಭೋಗ ಸುಬ್ಬಣ್ಣ ಮತ್ತು ಶ್ರೀಮತಿ ಶಂಕರಮ್ಮನವರ ಕೊನೆಯ ಮಗನಾಗಿ ಅನಂತಮೂರ್ತಿ ೧೦ ಮೇ ೧೯೩೧ರಂದು ಜನಿಸಿದರು.

ಸಿಂಧುವಳ್ಳಿಯಲ್ಲಿ ವರ್ಷಕ್ಕೆ ಒಂದೋ–ಎರಡೋ ಪೌರಾಣಿಕ ನಾಟಕಗಳು ನಡೆಯುತ್ತಿದ್ದುವು. ಬಾಲಕ ಅನಂತಮೂರ್ತಿಗೆ ಈ ನಾಟಕಗಳು ಹುಚ್ಚು ಹಿಡಿಸಿದುವು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಬಂದು ಅಣ್ಣ ಶೇಷಗಿರಿರಾಯರಲ್ಲಿ ನೆಲೆನಿಂತ ಮೇಲೆ ಮತ್ತಷ್ಟು ನಾಟಕದ ಗೀಳು ಹಿಡಿಯಿತು.

ಬನುಮಯ್ಯ ಪ್ರೌಢಶಾಲೆ ಸೇರಿದ್ದೇ ನಾಟಕದಲ್ಲಿ ಅಭಿನಯಿಸುವುದಕ್ಕಾಗಿ. ಮಾಸ್ಟರ್ ಹಿರಣ್ಣಯ್ಯ (ನರಸಿಂಹಮೂರ್ತಿ) ನವರಂಥವರೊಂದಿಗೆ ಪಾತ್ರಕ್ಕಾಗಿ ಸ್ಪರ್ಧೆ! ಕಾಡಿ ಬೇಡಿ ಅಂತೂ ಎಂ. ನರೇಂದ್ರಬಾಬು ಬರೆದ 'ರಂಗಣ್ಣನ ರಥ ನಾಟಕದಲ್ಲಿ ಒಂದು ಸಣ್ಣ ಪಾತ್ರ ಮಾಡಿದರು. ಸಿಂಧುವಳ್ಳಿ ಏರಿದ ರಂಗರಥ ಎಲ್ಲೂ ನಿಲ್ಲದೆ ಐವತ್ತೆರಡು ವರುಷಗಳು ಸಾಡಿಸಾದ್ಯಂತ ನಡೆದಾಡಿತು. ಹವ್ಯಾಸಿ ರಂಗಭೂಮಿಯಲ್ಲಿ ಚರಿತ್ರಾರ್ಹ ದಾಖಲೆಯನ್ನು ಮಾಡಿತು.

ಮೈಸೂರಿನ ಖ್ಯಾತ ವಕೀಲರೂ, ವಯಸ್ಕರ ಶಿಕ್ಷಣ ಸಮಿತಿಯ ಮಾಜಿ ಅಧ್ಯಕ್ಷರೂ ಆದ ಟಿ. ವಿ. ಶ್ರೀನಿವಾಸ ರಾವ್ ಅವರು ಅನಂತಮೂರ್ತಿ ಅವರಿಗೆ ಶ್ರೀ ಶಾರದಾನಿಕೇತನ ಹಾಸ್ಟೆಲ್‌ನಲ್ಲಿ ಎಸ್. ಅನಂತನಾರಾಯಣರ 'ಮಂಗಳಾರತಿ' ನಾಟಕದಲ್ಲಿ ನಟಿಸಲು ಅವಕಾಶ ಕಲ್ಪಿಸಿದರು. ಅನಂತಮೂರ್ತಿ ಈ ನಾಟಕದಿಂದ ಒಬ್ಬ 'ನಟ' ಎನ್ನಿಸಿಕೊಂಡರು.

ಮಹಾರಾಜ ಕಾಲೇಜು 'ಮಿತ್ರಮೇಳ' ನಾಟಕ ಪ್ರಿಯರಲ್ಲಿ ಮನೆ ಮಾತಾಗಿತ್ತು. ಯಾವಾಗ ಈ ಮಿತ್ರಮೇಳ ಸೇರುವೆನೋ ಎಂದು ಸದಾ ತುಡಿಯುತ್ತಿದ್ದ ಅನಂತಮೂರ್ತಿ ಕಾಲೇಜು ಸೇರಿ ಈ ಮಿತ್ರಮೇಳದ ಕಾರ್ಯದರ್ಶಿಯೂ ಆದರು. ಇನ್ನೊಬ್ಬ ಕಾರ್ಯದರ್ಶಿ ಡಾ॥ ನ. ರತ್ನ ಅವರು. ಈರ್ವರೂ ಸೇರಿ 'ಮಿತ್ರಮೇಳ'ವನ್ನು ರಂಗೇರಿಸಿದರು. ಪರ್ವತವಾಣಿ, ಕೈಲಾಸಂ, ಕುವೆಂಪು, ಸಂಸ, ಬಿ.ಸಿ. ರಾಮಚಂದ್ರಶರ್ಮ, ಕೈವಾರ ರಾಜಾರಾವ್, ಕೆ. ಗುಂಡಣ್ಣ, ನಾ. ಕಸ್ತೂರಿ ಮೊದಲಾದವರ ನಾಟಕಗಳಲ್ಲಿ ಪಾತ್ರ ವಹಿಸಿದರು. ಶ್ರೀಕಾಂತರ 'ಕಾಶ್ಮೀರ ಯಾತ್ರೆ'ಯಲ್ಲಿ ಹೆಸರು ಮಾಡಿದರು.

ಧಾರವಾಡ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಕಲಿಯಲು ಹೋದಾಗ

ಪರ್ವತವಾಣಿಯವರ 'ಸುಂದ್ರೋಪಸುಂದ್ರು' ನಾಟಕವನ್ನು ನಿರ್ದೇಶಿಸಿ ನಿರ್ದೇಶನದ ಹಣೆಪಟ್ಟ ಹಚ್ಚಿಕೊಂಡರು.

೧೯೫೭ ರಲ್ಲಿ ಬನುಮಯ್ಯ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದ ಮೇಲೆ ತಮ್ಮ ಹದಿನಾಲ್ಕು ವರ್ಷಗಳ ಸೇವೆಯಲ್ಲಿ ಹನ್ನೆರಡು ವರ್ಷ ಕಾಲೇಜು ಸಂಘಕ್ಕೆ ಅಧ್ಯಾಪಕ ಸಲಹೆಗಾರರಾಗಿ, ಈ ಅವಧಿಯಲ್ಲಿ ಒಟ್ಟು ಹದಿನೇಳು ನಾಟಕಗಳನ್ನು ನಿರ್ದೇಶಿಸಿ ಒಂದೆರಡು ನಾಟಕಗಳಲ್ಲಿ ತಾವೂ ಪಾತ್ರ ವಹಿಸಿದರು. ಆ ನಾಟಕಗಳು: ಬೆರಳ್‌ಗೆ ಕೊರಳ್, ಕೈಗೆ ಬಂದ ತುತ್ತು, ಸೋಲಿಗರ ಸಿದ್ದ, ಗದಾಯುದ್ಧ ನಾಟಕಂ, ಶಾಕುಂತಲಾ, ಜಯಶ್ರೀ, ಆಷಾಢಭೂತಿ, ಯಮಳ ಪ್ರಶ್ನೆ, ಮೀನಾ ಮದುವೆ, ಹುಚ್ಚ, ಮಹಾರಾತ್ರಿ, ಬೇನೆಯ ಬೋನಿನಲ್ಲಿ, ಶುದ್ಧ ಪಿಟಿಪಿಟಿ, ಗಂಡಸ್ತನ, ವಾರ್ಷಿಕೋತ್ಸವ, ವಿಪರ್ಯಾಸ, ಬುಡಬುಡಿಕೆ, ಕಾಡುಪ್ರಾಣಿ, ಇಲಿ ಬೋನು, ಮೃಚ್ಛಕಟಿಕ, ಸತ್ತವರ ನೆರಳು, ತುಘಲಕ್, ಘಾಶೀರಾಂ ಕೊತ್ವಾಲ್, ಎಲ್ಲರೂ ನನ್ನವರೆ, ಹುಯ್ಯಲವೊ ಡಂಗುರ, ಕರೀಭಂಟನ ಕಥೆ, ಹಿಟ್ಟಿನ ಹುಂಜ, ತಲೆದಂಡ, ವಿಗಡ ವಿಕ್ರಮರಾಯ, ಟೆಂಗರ ಬುಡ್ಡಣ್ಣ, ಜೋಕುಮಾರ ಸ್ವಾಮಿ.

ಬನುಮಯ್ಯ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವಾಗಲೇ ಇವರ 'ರಂಗೋತ್ಸಾಹ'ವನ್ನು ಅರಿತ ಇತರರೂ ನಿರ್ದೇಶನ ಮಾಡಲು ಸಿಂಧುವಳ್ಳಿಯವರನ್ನು ಆಹ್ವಾನಿಸತೊಡಗಿದರು. ಮಹಾರಾಣಿ ಕಾಲೇಜು ವಿದ್ಯಾರ್ಥಿನಿಯರಿಗಾಗಿ ಮೀನಾ ಮದುವೆ, ಬುಡುಬುಡಕೆ, ವಾರ್ಷಿಕೋತ್ಸವ, ಪತ್ರ ಪ್ರವಾದ, ಬಂಡ್ವಾಳವಿಲ್ಲದ ಬಡಾಯಿ ಈ ನಾಟಕಗಳನ್ನು ನಿರ್ದೇಶಿಸಿದರು. ಮೈಸೂರು ಮೆಡಿಕಲ್ ಕಾಲೇಜಿಗೆ ಯಮಳ ಪ್ರಶ್ನೆ, ಮಾನಸ ಗಂಗೋತ್ರಿ ವಿದ್ಯಾರ್ಥಿಗಳಿಗೆ 'ಛತ್ರದ ಹೊರಗೆ', ವಿಶ್ವವಿದ್ಯಾನಿಲಯಗಳ ಯುವಜನೋತ್ಸವಕ್ಕಾಗಿ 'ಹೃದಯ ದೇಗುಲ' ನಾಟಕಗಳನ್ನು ನಿರ್ದೇಶಿಸಿ, ಸಿಂಧುವಳ್ಳಿ ಅನಂತಮೂರ್ತಿ ಎಂದರೆ 'ರಂಗಭೂಮಿಯವರು' ಎಂದು ಗುರುತಿಸುವಂತಾದರು.

೧೯೭೧ ರಲ್ಲಿ ಮೈ. ವಿ. ವಿ. ದ. ನಾಟಕ ಶಾಸ್ತ್ರ ಅಧ್ಯಾಪಕರಾಗಿ ವೃತ್ತಿ ಜೀವನವನ್ನು ಸಂಪೂರ್ಣವಾಗಿ ರಂಗಭೂಮಿಗೆ ತೊಡಗಿಸಿಕೊಂಡ ಇವರು ೧೯೭೮ ರಲ್ಲಿ ಲಲಿತಕಲೆಗಳ ಕಾಲೇಜಿನ ಪ್ರಾಂಶುಪಾಲರೂ ಆದರು. ಚೈತನ್ಯಶೀಲ ವ್ಯಕ್ತಿಯೊಬ್ಬ ಅಧಿಕಾರದ ಗದ್ದುಗೆ ಏರಿದರೆ ಏನೆಲ್ಲ ಮಾಡಬಹುದು ಎಂಬುದಕ್ಕೆ ಅವರು ಮಾದರಿಯಾದರು. ಸಿಂಧುವಳ್ಳಿಯವರದು ಸರ್ವಾಧಿಕಾರ, ಅತಿಯಾದ ಶಿಸ್ತು ಎಂದು ಗೊಣಗಿಕೊಂಡವರೂ ಉಂಟು. ಆದರೆ ಅವರ ನಿಷ್ಠುರ ನಡೆ-ನುಡಿ ಕೇವಲ ಕಾರ್ಯ ಸಾಧನೆಗಾಗಿ ಎಂಬುದನ್ನು ಅವರನ್ನು ಅರ್ಥ ಮಾಡಿಕೊಂಡ ಎಲ್ಲರೂ ಒಪ್ಪುತ್ತಾರೆ.

ಗುಬ್ಬಿ ಕಂಪೆನಿ ಶತಮಾನೋತ್ಸವ, ಗುಬ್ಬಿವೀರಣ್ಣ ಪೀಠ ಸ್ಥಾಪನೆ, 'ಕರ್ನಾಟಕ ವೃತ್ತಿ ರಂಗಭೂಮಿ- ಮೂರು ವರ್ಷ' ವೀಡಿಯೋ ಚಿತ್ರೀಕರಣ. ಅಂತಾರಾಷ್ಟ್ರೀಯ ಬೆಳಕು ತಜ್ಞ ವಿ. ರಾಮಮೂರ್ತಿ, ಚಂದ್ರಶೇಖರ ಕಂಬಾರರು ರಂಗತಜ್ಞರಾಗಿ ಸಲ್ಲಿಸಿದ ಸೇವೆ, ಇಂದು ನಮ್ಮೊಡನೆ ಇಲ್ಲವಾಗಿರುವ ಖ್ಯಾತ ರಂಗ ನಟ-ನಟಿಯರಾದ ಬಿ. ಎಸ್. ರಾಜಯ್ಯಂಗಾರ್, ಮಳವಳ್ಳಿ ಸುಂದರಮ್ಮ

ಬಿ.ಟಿ. ಜಯಮ್ಮ ಅವರ ರಂಗಗೀತೆಗಳ ಧ್ವನಿ ಮುದ್ರಣ, ವೃತ್ತಿ ನಾಟಕ ಕಂಪನಿಗಳ ಹಿರಿಯ ನಟ-ನಟಿಯರಾದ ಬಿ. ಎಸ್. ಚೆನ್ನಪ್ಪ, ಬಿ. ವಿ. ಮಾಲತಮ್ಮ, ಬಿ. ಪಿ. ರಾಜಮ್ಮ, ಆರ್. ಪರಮಶಿವನ್, ಯೋಗಾ ನರಸಿಂಹ, ಸುಭದ್ರಮ್ಮ ಮನ್ಸೂರ್, ಜುಬೇದಾಬಾಯಿ ಸವಣೂರ್, ಡಿ. ದುರ್ಗಾದಾಸ್, ಜಿ. ಬಸವಣ್ಣಪ್ಪ ಅವರ ಹಾಡುಗಾರಿಕೆ, ಹಳೆಯ ಮೈಸೂರು ಮತ್ತು ಉತ್ತರ ಕರ್ನಾಟಕದ ಎಪ್ಪತ್ತೈದು ರಂಗಗೀತೆಗಳಿಗೆ ಸ್ವರಪ್ರಸ್ತಾರ ಹಾಕಿಸಿ ಕೇವಲ ಶೃತಿ ರೂಪದಲ್ಲಿದ್ದವುಗಳಿಗೆ ಶಾಶ್ವತ ರೂಪ ಕಲ್ಪಿಸಿದ್ದು, ರಂಗಭೂಮಿಗೆ ಅವರು ಸಲ್ಲಿಸಿದ ಅನನ್ಯ ಸೇವೆ.

ಅನಂತಮೂರ್ತಿ ಪ್ರಾಂಶುಪಾಲರಾಗಿ ಸಮಚಿತ್ತವನ್ನು ಕಾಯ್ದುಕೊಂಡವರು. ಅವರು ಸಂಗೀತಪ್ರಿಯರೂ ಆದ್ದರಿಂದ ಇದು ಸಾಧ್ಯವಾಯಿತು. ಮಲ್ಲಿಕಾರ್ಜುನ ಮನ್ಸೂರ್, ಭೀಮಸೇನ ಜೋಷಿ, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್, ವಿ. ದೊರೆಸ್ವಾಮಿ ಅಯ್ಯಂಗಾರ್, ಆರ್. ಕೆ. ಶ್ರೀಕಂಠನ್, ಎಂ. ಬಾಲಮುರಳಿ ಕೃಷ್ಣ, ಅಮಜದ್ ಅಲಿಖಾನ್, ಕೆ. ಬಾಲಚಂದರ್, ಕುನ್ನಕ್ಕುಡಿ ವೈದ್ಯನಾಥನ್, ಪರೂರು ಗೋಪಾಲಕೃಷ್ಣನ್, ಬೊಂಬಾಯಿ ಸಹೋದರಿಯರಾದ ಸಿ. ಸರೋಜ, ಸಿ. ಲಲಿತ, ಡಿ.ಕೆ. ಜಯರಾಮನ್ ಮೊದಲಾದ ಖ್ಯಾತ ನಾಮರ ಸಂಗೀತ ಕಚೇರಿಗಳು ನಡೆದುವು. ಸಿಂಧುವಳ್ಳಿಯವರು ಸಂಗೀತಾರಾಧಕರೂ ಆಗಿದ್ದರೆನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕಿಲ್ಲ.

ಮಿತ್ರರಾದ ನ. ರತ್ನ, ವಿಶ್ವನಾಥ ಮಿರ್ಲೆ, ಎಚ್. ಎಂ. ಚನ್ನಯ್ಯನವರೊಡನೆ ಗೂಡಿ ೧೯೬೭ರಲ್ಲಿ ಕಟ್ಟಿದ ಹವ್ಯಾಸಿ ನಾಟಕ ತಂಡ 'ಸಮತೆಂತೋ' ಅನಂತಮೂರ್ತಿಯವರೇ ಇದರ ಸೂತ್ರದಾರರು. ಈ ಒಂದು ತಂಡ ಯಶಸ್ವಿಯಾಗಿ ಬೆಳ್ಳಿಹಬ್ಬವನ್ನು ಆಚರಿಸಿತು ಎನ್ನುವುದು ಕಡಿಮೆ ಸಾಧನೆಯಲ್ಲ. ಸಮತೆಂತೋ ನಾಟಕ ತಂಡವನ್ನು ಕಟ್ಟಿ, ಬೆಳೆಸಿ ಜನರ ನಾಲಿಗೆಯಲ್ಲಿ ಕುಣಿದಾಡಿಸಿದ ಕೀರ್ತಿ ಅವರಿಗೇ ಸಲ್ಲಬೇಕು. ರಂಗಮನೆಯನ್ನು ಕಟ್ಟಿ 'ಕಲಾಸುರುಚಿ'ಯ ಹೆಸರಲ್ಲಿ ಅನಂತಮೂರ್ತಿಯವರ ಸಾಂಸ್ಕೃತಿಕ ಚಟುವಟಿಕೆಗಳು ಥಳಾಗುತ್ತಿದ್ದಂತೆ 'ಸಮತೆಂತೋ' ಚಟುವಟಿಕೆಗಳು ಕಡಿಮೆಯಾಗುತ್ತ ಮಂಕಾಗತೊಡಗಿತು ಎನ್ನುವುದು ಅಷ್ಟೇ ಸತ್ಯ.

ಸುರುಚಿ ರಂಗಮಂದಿರ ವಾಸದ ಮನೆಗೇ ಹೊಂದಿಕೊಂಡಿದೆ. ೨೦'×೧೦' ರ ವೇದಿಕೆ, ೨೦'×೨೦' ಪ್ರೇಕ್ಷಾಗೃಹ. ಮೇಲೆ ಬಾಲ್ಕನಿ; ಸುಮಾರು ಒಂದು ನೂರು ಜನ ಕೂತು ನಾಟಕ ನೋಡಬಹುದಾದ ಸಾಮೀಪ್ಯ ರಂಗಮಂದಿರ; ಬದಿಯಲ್ಲೇ ಅವರ ವಾಸದ ಮನೆ. ಇಂಥ ರಂಗಮಂದಿರ ಕರ್ನಾಟಕದಲ್ಲೆಲ್ಲೂ ಇಲ್ಲ ಎಂಬುದು ಉತ್ಪ್ರೇಕ್ಷೆಯ ಮಾತಲ್ಲ. ನಾಟಕ, ಹರಿಕಥೆ, ರಂಗ ಸಂಗೀತ, ವಾದ್ಯ ಸಂಗೀತ, ಶಾಸ್ತ್ರೀಯ ಸಂಗೀತ-ಹಾಡುಗಾರಿಕೆ, ರಂಗತರಬೇತಿ ಶಿಬಿರ, ವಿಚಾರ ಸಂಕಿರಣಗಳು, ಪುಸ್ತಕ ಬಿಡುಗಡೆ-ಹೀಗೆ ಈ ಮನೆ ಹತ್ತು ಹಲವಾರು ಚಟುವಟಿಕೆಗಳ ಕೇಂದ್ರ ಸ್ಥಾನವಾಗಿತ್ತು.

'ಸಾವು' ಯಾರನ್ನೂ ಬಿಡುವುದಿಲ್ಲ, ನಿಜ. ಆದರೆ ಸಿಂಧುವಳ್ಳಿಯವರ ಅಕಾಲಿಕ

ಸಾವು ಮೈಸೂರಿನ ರಂಗಕರ್ಮಿಗಳಿಗೆ 'ಶಾಕ್' **ನೀಡಿದೆ.** ಇನ್ನಷ್ಟು ಕಾಲ ಬದುಕಬೇಕಿತ್ತು, **ಮೈಸೂರಿನ** ರಂಗಭೂಮಿ ನಿಜವಾಗಿಯೂ **ಅವರ** ಸಾವಿನಿಂದ ಕಳೆಗುಂದಿದೆ' ಎಂಬ **ಮಾತುಗಳು** ಉತ್ಪ್ರೇಕ್ಷೆಯಲ್ಲ. ರಂಗವನ್ನೇ **ಉಸಿರನ್ನಾಗಿಸಿಕೊಂಡಿದ್ದ** ಅನಂತಮೂರ್ತಿ ಯವರ ಅಗಲಿಕೆ ನಮ್ಮನ್ನು **ಬೆಚ್ಚಿ ಬೀಳಿ**ಸಿದೆ.

ಡಾ॥ ಸಿಂಧುವಳ್ಳಿ ಅನಂತಮೂರ್ತಿ **ಅವರು** 'ನನ್ನದು ಬಣ್ಣದ ಬದುಕು' **ಕೃತಿಯ** ಮುನ್ನುಡಿಯಲ್ಲಿ ತಮ್ಮ ಬಣ್ಣದ **ಬದುಕನ್ನು** ಕುರಿತು ಹೀಗೆ ನಿವೇದಿಸಿಕೊಂಡಿದ್ದಾರೆ:

"ಇಂದು ರಂಗಭೂಮಿ ಮಹತ್ವದ ಬೆಳವಣಿಗೆ ಹೊಂದಿದೆ : ವಿವಿಧ ಮಜಲುಗಳನ್ನು ಹೊಂದಿ, ಹೊಸ ಆಯಾಮಗಳೊಂದಿಗೆ ಪ್ರಕಟಗೊಂಡಿದೆ. ವೈವಿಧ್ಯಮಯ ನಾಟಕಗಳು, ಪ್ರಯೋಗಗಳು ಆಗಿವೆ. ವೃತ್ತಿ, ಹವ್ಯಾಸಿಗಳೆರಡರಲ್ಲೂ ಸಾಕಷ್ಟು ಬದಲಾವಣೆಗಳನ್ನು ನೋಡಿದ್ದೇನೆ: ಹತ್ತಿರದಿಂದ ಇವುಗಳನ್ನು ಗಮನಿಸಿದ್ದೇನೆ. ಪಾಲ್ಗೊಂಡಿದ್ದೇನೆ. ವಿವಿಧ ಸಂದರ್ಭಗಳಲ್ಲಿ ಅಭಿವ್ಯಕ್ತಿ ಮಾಡಿದ್ದೇನೆ.

ಐವತ್ತು ವರ್ಷಗಳ ಹಿಂದೆ ನಾನು ಮೊದಲ ಬಾರಿಗೆ ರಂಗಕ್ಕೆ ಕಾಲಿಟ್ಟಾಗ ಅನನುಭವಿಯಾದ ಬಾಲಕನಾಗಿದ್ದೆ. ಇಂದು ಸಾಕಷ್ಟು ಅನುಭವಗಳೊಂದಿಗೆ ಮಾಗಿದ್ದೇನೆ. ಅಂದಿಗೂ ಇಂದಿಗೂ ನನ್ನ ಆಸಕ್ತಿ ಹಾಗು ನಂಟುಗಳು ಮಾತ್ರ ಹಾಗೇ ಇವೆ. ನಾನು ಮೊದಲು ನಾಟಕದ ಬದುಕಿಗೆ ಸ್ಪಂದಿಸಿದ್ದು ನನ್ನ ಊರು ಸಿಂಧುವಳ್ಳಿಯ ಧಾರ್ಮಿಕ ಹಾಗು ಗ್ರಾಮೀಣ ಪರಿಸರದಲ್ಲಿ. ಆ ದಿನಗಳಲ್ಲಿ ನಾನು ನೋಡಿದ ನಾಟಕ, ಕೇಳಿದ ಹರಿಕಥೆ, ಮೊದಲಾದವುಗಳಿಗೆ ನನ್ನ ಮನಸ್ಸು ಪ್ರತಿಸ್ಪಂದಿಸಿತು. ನನ್ನ ಮೇಲೆ ಅವು ಗಾಢ ಪ್ರಭಾವ ಬೀರಿ ನಾನು ಮುಂದೆ ನಾಟಕದಲ್ಲಿ ತೊಡಗಿಸಿಕೊಳ್ಳಲು ಕಾರಣವಾದವು. ನನ್ನ ತಂದೆಯ ವ್ಯಕ್ತಿತ್ವ ನನ್ನ ಮೇಲೆ ಪ್ರಭಾವ ಬೀರಿತು. ತಾಯಿಯ ಹಾಡುಗಳ ಪ್ರೀತಿ ನಾನು ರಂಗಸಂಗೀತದಲ್ಲಿ ತುಂಬಾ ಆಸಕ್ತಿ ಹೊಂದಲು ಪ್ರೇರಣೆ ನೀಡಿತು.

ವಿದ್ಯಾಭ್ಯಾಸಕ್ಕೆಂದು ಮೈಸೂರಿಗೆ ಬಂದಮೇಲೆ ನನ್ನ ಹಾಗು ರಂಗದ ನಂಟು ಬಿಡಿಸಲಾರದ ಗಂಟಾಯಿತು. ವಿವಿಧ ಹಂತಗಳಲ್ಲಿ, ನೆಲೆಗಳಲ್ಲಿ, ಸ್ಥಾನ - ಮಾನಗಳಲ್ಲಿ ದುಡಿಯುತ್ತಾ, ಪ್ರಯೋಗಶೀಲನಾಗುತ್ತಾ ಹೆಜ್ಜೆ ಹಾಕಿದೆ. ಕಾಲೇಜಿಗೆ ಕಾಲಿಟ್ಟಮೇಲೆ ರಂಗದ ಗೀಳು ತುಂಬಾ ಹೆಚ್ಚಾಯಿತು. ಮಹಾರಾಜಾ ಕಾಲೇಜಿನ ಅಂದಿನ ಪರಿಸರ, ಶಿಕ್ಷಕವೃಂದ, ಗೆಳೆಯರ ಬಳಗ ಇದಕ್ಕೆ ತುಂಬ ಪೂರಕವಾಗಿದ್ದವು. ರಂಗಾಸಕ್ತರ ತಂಡವೇ ಅಲ್ಲಿತ್ತು. ಬಹುಶಃ ಮೈಸೂರು ಕಂಡ ಅತಿ ಸುಗ್ಗಿಯ ರಂಗದ ದಿನಗಳು ಅವು ಎನ್ನಬಹುದು. ಉತ್ತಮ ನಾಟಕಗಳ ಮೂಲಕ ಬೆಳೆಯಲು ನನ್ನ ಕಾಲೇಜು ಬದುಕು ನೆರವಾಯಿತು.

ನಾನು ವಿದ್ಯಾಭ್ಯಾಸ ಮುಗಿಸಿ ಕಾಲೇಜು ಅಧ್ಯಾಪಕನಾದ ಮೇಲೆ ಇನ್ನೊಂದು ಹಂತ ಮುಟ್ಟಿದೆ. ಬಸುಮಯ್ಯ ಕಾಲೇಜಿನಲ್ಲಿದ್ದ ಅವಧಿಯಲ್ಲಿ ಆ ಕಾಲೇಜಿನ ನಾಟಕಗಳಲ್ಲೇ ಅಲ್ಲದೆ ನಗರದ ವಿವಿಧ ಕಾಲೇಜುಗಳ ನಾಟಕಗಳ ಪ್ರಯೋಗಗಳಲ್ಲೂ ನನ್ನನ್ನು ತೊಡಗಿಸಿಕೊಂಡೆ.

ಮುಂದೆ ನಾನು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು ಸೇರಿದ ಮೇಲೆ ನನ್ನ ಕಾರ್ಯಕ್ಷೇತ್ರ ಇನ್ನಷ್ಟು ವಿಸ್ತಾರಗೊಂಡಿತು. ನನ್ನ ಕಾರ್ಯಗಳಿಗೆ ವ್ಯಾಪ್ತಿ ಹಿರಿದಾಯಿತು. ನನ್ನ ಆಸಕ್ತಿ ರೆಕ್ಕೆ ಮೂಡಿತು. ನಾನು ಇಲ್ಲಿದ್ದ ಅವಧಿಯಲ್ಲಿ ಮಾಡಿದ ಕೆಲಸಗಳು ನನಗೆ ತುಂಬಾ ಸಮಾಧಾನ ತಂದಿದೆ.

'ಸಮತೆಂತೋ' ಹಾಗು ನನ್ನ ಸಂಬಂಧ ಬಿಡಿಸಲಾಗದ್ದು ; ನಾನು ಅದರ ಅವಿಭಾಜ್ಯ ಅಂಗ. ಹವ್ಯಾಸಿ ರಂಗದ ಬೆಳವಣಿಗೆಯಲ್ಲಿ ಈ ತಂಡದ ಪಾತ್ರ ಏನೆಂದು ವಿಮರ್ಶಕರು ಈಗಾಗಲೇ ಗುರ್ತಿಸಿದ್ದಾರೆ. ವೈವಿಧ್ಯಮಯ ನಾಟಕಗಳ ಮೂಲಕ ಪ್ರೇಕ್ಷಕರನ್ನು ಹುಟ್ಟುಹಾಕಿದ್ದು, ಒಂದು ದೊಡ್ಡ ಪಡೆಯನ್ನೇ ರಂಗಭೂಮಿಗಾಗಿ ನಿರ್ಮಿಸಿಕೊಟ್ಟಿದ್ದು, ಇವೇ ಮೊದಲಾದವು ಇದರ ಸಾಧನೆಗಳು. 'ಸಮತೆಂತೋ' ಜೊತೆಗಿನ ನನ್ನ ಸುದೀರ್ಘ ಸಂಬಂಧದಲ್ಲಿ ಹಲವು ಹತ್ತು ಅನುಭವಗಳನ್ನು ಪಡೆದೆ, ಬೆಳೆದೆ.

'ರಂಗಮನೆ' ನನ್ನ ಸ್ವಂತ ಆಸಕ್ತಿಯ ಫಲ. ಇದರ ಕಲ್ಪನೆಯೇ ವಿಶಿಷ್ಟವಾದದ್ದು. ಚಿಕ್ಕ ಚೊಕ್ಕ ನಾಟಕ ಗೃಹ—ರಂಗಮನೆ. ರಂಗಕ್ಕೆ ಸಂಬಂಧಿಸಿದಂತೆ ನನ್ನ ಆಲೋಚನೆ ಚಿಂತನೆಗಳಿಗೆ ಮೂರ್ತರೂಪ ಕೊಡಲು ಇಲ್ಲಿ ಸಾಧ್ಯವಾಗಿದೆ.

ಇಂದು ರಂಗದಲ್ಲಿ ಸಾಕಷ್ಟು ವೈವಿಧ್ಯಮಯವಾದ ಪ್ರಯೋಗಗಳಾಗಿವೆ. ಚಿಂತನಮಂಥನಗಳಾಗಿವೆ ; ವಿಭಿನ್ನ ಅಭಿಪ್ರಾಯಗಳು ಮೂಡಿವೆ. ಅದರಲ್ಲೂ ಹವ್ಯಾಸಿ-ವೃತ್ತಿ ರಂಗಗಳ ಬಗೆಗೆ ಸಾಕಷ್ಟು ಚರ್ಚೆ ನಡೆದಿದೆ. ಈ ಬಗ್ಗೆ ನಾನು ನನ್ನದೇ ಆದ ಅಭಿಪ್ರಾಯ ಹೊಂದಿದ್ದೇನೆ. ನನ್ನ ದೃಷ್ಟಿಯಲ್ಲಿ ರಂಗಭೂಮಿ ಎಂದರೆ ಒಂದೇ. ಅನುಕೂಲಕ್ಕಾಗಿ, ಸಾಂದರ್ಭಿಕ ಕಾರಣಗಳಿಗಾಗಿ 'ಹವ್ಯಾಸಿ', 'ವೃತ್ತಿ' ಶಬ್ದಗಳಿರಬಹುದು. ಆದರೆ ರಂಗದ ದೃಷ್ಟಿಯಿಂದ ಎರಡೂ ಮಹತ್ವ ಪಡೆಯುತ್ತವೆ. 'ಹವ್ಯಾಸಿ' ಎಂಬುದು ವೃತ್ತಿಪರತೆಯಿಂದಲೇ ಕೂಡಿರಬೇಕಾಗುತ್ತದೆ. ಶಿಸ್ತು, ಸಮರ್ಪಣಾಭಾವ ಇಲ್ಲದಿದ್ದಾಗ ಪ್ರಯೋಗ ಸಫಲವಾಗುವುದಿಲ್ಲ. ವೃತ್ತಿಯವರಿಗೆ ಹವ್ಯಾಸಿಗಳ ಪ್ರಾಯೋಗಿಕತೆ, ಹವ್ಯಾಸಿಗಳಿಗೆ ವೃತ್ತಿಪರತೆ ಅಗತ್ಯ. ವಿಶಾಲ ದೃಷ್ಟಿಯಲ್ಲಿ ರಂಗಭೂಮಿ ಒಂದೇ. ವೃತ್ತಿಯವರಾಗಲಿ. ಹವ್ಯಾಸಿಗಳಾಗಲಿ ನಿಷ್ಠೆ, ಪ್ರಾಮಾಣಿಕತೆ, ಅರ್ಪಣಾಭಾವಗಳಿಂದ ದುಡಿದಾಗ ಮಾತ್ರ ರಂಗದ ಏಳಿಗೆ

ಆಗುತ್ತದೆ. ಈ ದೃಷ್ಟಿಯಿಂದಲೇ ನಾನು ನನ್ನ ನಾಟಕಗಳನ್ನು ಪ್ರಯೋಗಿಸಿ-ದ್ದೇನೆ. ಕಂಪನಿ ನಾಟಕ 'ಸದಾರಮೆ'ಯನ್ನು ಪರಿಷ್ಕರಿಸಿ ಇಂದಿಗೆ ಸಲ್ಲುವಂತೆ ಪ್ರಯೋಗಿಸಿದ್ದೇನೆ. ಅದು ಯಾವುದೇ ಸಮಕಾಲೀನ ನಾಟಕದಷ್ಟು ಮನ್ನಣೆ ಪಡೆದಿದೆ; ಹೆಚ್ಚು ಪ್ರದರ್ಶನಗಳನ್ನು ಕಂಡಿದೆ. ಹಾಗೆಯೇ ಅಸಂಗತ ನಾಟಕಗಳಾದ 'ಗೋಡೆ ಬೇಕೆ ಗೋಡೆ', 'ಇಲಿಬೋನು'ಗಳನ್ನು ಅಷ್ಟೇ ಯಶಸ್ವಿಯಾಗಿ ಪ್ರಯೋಗಿಸಿದ್ದೇನೆ. ಹಾಸ್ಯ ಪ್ರಧಾನವಾದ 'ಭಗವದಜ್ಜುಕೀಯ' ನಾಟಕವನ್ನು, 'ಮೃಚ್ಛಕಟಿಕ' ಪ್ರಕರಣವನ್ನು ಪ್ರಯೋಗಿಸಿದ್ದೇನೆ. ಒಟ್ಟು ರಂಗದ ಬಗೆಗೆ ಕಾಳಜಿ ಇದ್ದಾಗ, ವೃತ್ತಿಪರ ನಿಷ್ಠೆ ಇದ್ದಾಗ ಹವ್ಯಾಸಿ-ವೃತ್ತಿ ಎಂಬ ಭೇದವೇ ಬರುವುದಿಲ್ಲ; ಯಶಸ್ಸು ಸಿಕ್ಕೇ ಸಿಗುತ್ತದೆ.

ರಂಗಭೂಮಿ ಸದಾ ಜೀವಂತ ಎನ್ನುವುದು ನನ್ನ ಖಚಿತ ಅಭಿಪ್ರಾಯ. ಜನಜೀವನದ ನಾನಾ ಕ್ಷೇತ್ರಗಳಲ್ಲಿ ಕಾಲದಿಂದ ಕಾಲಕ್ಕಾಗುವ ಬದಲಾವಣೆಗಳ ಗಾಳಿ ಬೀಸಿದಂತೆ ರಂಗಕ್ಷೇತ್ರವೂ ಅದರ ಪರಿಣಾಮಕ್ಕೊಳಗಾಗದಿರದು. ಈ ಹಿಂದೆ ಸಿನಿಮಾ ಬಂದು ನಾಟಕ ಹೋಯಿತು ಎಂದು ಹೇಳುತ್ತಿದ್ದರು. ಹಾಗೆಯೇ ಸಂಗೀತ ಪ್ರಪಂಚದವರು ಪಿಟೀಲು ಬಂದು ವೀಣೆ ಹೋಯಿತು ಎಂದು ಹೇಳುತ್ತಿದ್ದರಂತೆ. ಈಗ ದೂರದರ್ಶನದ ಮೇಲೆ ಇಂಥದೇ ಆರೋಪವಿದೆ. ಯಾವುದೇ ಬದಲಾವಣೆಯೂ ರಂಗದ ಜೀವಂತಿಕೆಯನ್ನು ಕೆಡಿಸಲಾರದು. ರಂಗಕಲಾವಿದರು ಶಿಸ್ತಿನಿಂದ, ವೃತ್ತಿಪರತೆಯಿಂದ ತೊಡಗಿಸಿಕೊಂಡರೆ ರಂಗ ಉಳಿಯುತ್ತದೆ. ರಂಗ ನಿಂತ ನೀರಲ್ಲ. ಇದರ ವಿವಿಧ ಮುಖಗಳಲ್ಲಿ ಬೆಳವಣಿಗೆಯೂ ಇರಬೇಕು. ಪ್ರೇಕ್ಷಕರೊಂದಿಗೆ ಜೀವಂತ ಹಾಗು ನೇರ ಸಂಬಂಧ ಏರ್ಪಡುವುದು ರಂಗದಲ್ಲಿ ಸಾಧ್ಯ. ಹೀಗಾಗಿ ಪ್ರೇಕ್ಷಕ ಬಯಸು-ವವರೆಗೆ ಇದು ಜೀವಂತವಾಗಿರುತ್ತದೆ. ಪ್ರೇಕ್ಷಕ ಬಯಸುವಂತೆ ಮಾಡುವುದು ರಂಗದಲ್ಲಿ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಲ್ಲಿ ಮಾತ್ರ ಸಾಧ್ಯ ಎನ್ನುವುದು ನನ್ನ ನಂಬಿಕೆ. ರಂಗಭೂಮಿಯನ್ನು ಜೀವಂತವಾಗಿಡಲು ಉಳಿದ ಮಾಧ್ಯಮಗಳ ಮೂಲಕವೂ ಪ್ರಯತ್ನಿಸಬಹುದು.

ಶಿಸ್ತು ನಾನು ಯಾವಾಗಲೂ ಇಷ್ಟಪಡುವ, ಅನುಸರಿಸುವ ಗುಣ. ನನ್ನ ಬದುಕಿನಲ್ಲಿ ಹಾಗು ನನ್ನ ಎಲ್ಲೆಲ್ಲಿ ತೊಡಗಿಸಿಕೊಳ್ಳುತ್ತಾ ಬಂದಿದ್ದೇನೋ ಅಲ್ಲೆಲ್ಲಾ ಈ ಗುಣವನ್ನು ಅಳವಡಿಸಿಕೊಂಡಿದ್ದೇನೆ. ರಂಗಭೂಮಿಯ ಪ್ರಗತಿಯ ದೃಷ್ಟಿಯಿಂದ ಈ ಗುಣ ಬಹಳ ಮುಖ್ಯ. ಸಿನಿಮಾ ಅಭಿನಯವಾಗಲಿ, ರಂಗಸಂಗೀತದಲ್ಲಿನ ಕಾಳಜಿಯಾಗಲಿ, ಹಾಡಿಕೆಯಾಗಲಿ, ರಂಗ ಬರಹಗಳ ಪ್ರಕಟಣೆಯಾಗಲಿ, ಸಂಘಟನೆಯಾಗಲಿ, ನನ್ನನ್ನು ನೂರಕ್ಕೆ ನೂರರಷ್ಟು ತೊಡಗಿಸಿಕೊಂಡು ಕೆಲಸ ಮಾಡಿರುತ್ತೇನೆ.

ಇಲ್ಲಿನ ಅಧ್ಯಾಯಗಳು ನನ್ನ ರಂಗಜೀವನದ ಎಲ್ಲ ಮುಖಗಳನ್ನೂ ಒಳಗೊಂಡಿವೆಯೆಂದೇ ನನ್ನ ಭಾವನೆ. ಇವುಗಳನ್ನು ಸೂಕ್ತ ರೀತಿಯಲ್ಲಿ ವಿಂಗಡಿಸಿದ್ದೇನೆ. ಇವು ನನ್ನ ರಂಗಜೀವನದ ಮುಖ್ಯ ಘಟ್ಟಗಳನ್ನು ಗುರುತಿಸಲು ಸಾಧ್ಯವಾಗಿವೆ. ಒಂದು ಅಧ್ಯಾಯಕ್ಕೆ ನೇರವಾಗಿ ಸಂಬಂಧಪಡದ ವಿಷಯ ಅದರಲ್ಲಿ ನುಸುಳಿಕೊಂಡಿರಬಹುದು : ಹಾಗೆಯೇ ಮತ್ತೊಂದು ಅಧ್ಯಾಯದ ದಲ್ಲಿ ಮೇಲುನೋಟಕ್ಕೆ ಸಂಬಂಧಪಡದಂತಿರುವ ಯಾವುದೋ ವಿಷಯ. ಒಳಹೊಕ್ಕು ನೋಡಿದಾಗ ಅದೇ ಅಧ್ಯಾಯಕ್ಕೆ ಸೇರಿದಂತಾಗಿರುತ್ತದೆ. ಕೆಲವು ವಿಷಯಗಳೂ, ವಿವರಗಳೂ ಮತ್ತೆ ಮತ್ತೆ ಬೇರೆ ಬೇರೆ ಅಧ್ಯಾಯಗಳಲ್ಲಿ ಪುನರಾವರ್ತನೆ ಆಗಿರಲೂ ಸಾಧ್ಯ. ಈ ಬಗೆಯ ಗ್ರಂಥದಲ್ಲಿ ಇವೆಲ್ಲಾ ಅನಿವಾರ್ಯ ಒಟ್ಟನಲ್ಲಿ ಈ ಎಲ್ಲ ವಿವರಗಳ ಮೂಲಕವೂ ಏಕತೆ-ಸಮಗ್ರತೆಗಳ್ನು ಕಾಯ್ದು ಕೊಂಡಿದ್ದೇನೆ. ವೈವಿಧ್ಯಮಯ. ಭಿನ್ನ ಎನಿಸಿದರೂ ಎಲ್ಲ ವಿಷಯ-ವಿವರಗಳೂ ನನ್ನ ರಂಗಾನುಭವದ ವಿವಿಧ ಮುಖಗಳಿಗೆ ಸಂಬಂಧಿಸಿದವೇ.

ಗ್ರಂಥದ ಉದ್ದಕ್ಕೂ ಅಲ್ಲಲ್ಲೆ ಆತ್ಮೀಯ ವಾತಾವರಣವನ್ನು ಸೃಷ್ಟಿಸಲು ಸಂದರ್ಭೋಚಿತವಾಗಿ ಗ್ರಾಂಥಿಕ ಭಾಷೆಯೊಂದಿಗೆ ಆಡುಮಾತನ್ನೂ ಬಳಸಿದ್ದೇನೆ. ಕೆಲವೆಡೆ ನಾನೇ ಓದುಗರಿಗೆ ಸಂದರ್ಭಗಳನ್ನು ವಿವರಿಸುತ್ತಿದ್ದರೂ, ಅವುಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದೇನೆ ಎಂದು ನನಗೆ ಅನಿಸಿದೆ.

ಇಂತಹ ಕೃತಿಗಳಿಂದ ಪಡೆದುಕೊಳ್ಳಬಹುದಾದ್ದು ಏನಾದರೂ ಇದೆಯೆ ಎನ್ನುವ ಪ್ರಶ್ನೆ ಹಲವಾರು ಸಾರಿ ನನ್ನನ್ನು ಕಾಡಿದೆ. ಈ ಬಗ್ಗೆ ಇಷ್ಟು ಮಾತ್ರ ಹೇಳಬಲ್ಲೆ: ಪ್ರೇರಣೆ ಯಾವಾಗ, ಯಾರಿಂದ ಹೇಗೆ ಬರುತ್ತದೆ ಎಂದು ಹೇಳುವುದು ಕಷ್ಟ. ರಂಗಾಸಕ್ತರಿಗೆ, ರಂಗದಲ್ಲಿ ತೊಡಗಿಸಿಕೊಳ್ಳುವವರಿಗೆ ಒಂದಷ್ಟು ಪ್ರೇರಣೆಗೆ, ಉತ್ಸಾಹಕ್ಕೆ ಇದು ಕಾರಣವಾದೀತು. ಇಲ್ಲಿನ ವಿವರಗಳು, ವ್ಯಕ್ತಿಗಳು, ರಂಗಾನುಭವಗಳು, ದುಡಿಮೆ, ಇವೇ ಮೊದಲಾದವುಗಳನ್ನು ಓದುವಾಗ ಯಾವುದಾದರೂ ಒಂದೆರಡು ಮನಸ್ಸುಗಳಲ್ಲಾದರೂ ಉನ್ನತ ಪ್ರೇರಣೆ, ಉತ್ತಮ ಅಭಿರುಚಿಗಳ ಹೊಳಪು ಮಿಂಚಬಹುದು ಎಂದು ಕೊಂಡಿದ್ದೇನೆ.

ಸಂದೇಶ ಕೊಡುವುದು, ನೀತಿ ಹೇಳುವುದು ನನ್ನ ಉದ್ದೇಶವಲ್ಲ ; ನನಗೆ ಅದು ಇಷ್ಟವೂ ಇಲ್ಲ. ಸಾಂದರ್ಭಿಕವಾಗಿ ಇಲ್ಲಿ ಒಂದೆರಡು ಮಾತು ಹೇಳಬಹುದು. ರಂಗಭೂಮಿ ಒಂದು ಜೀವಂತ ಮಾಧ್ಯಮ ; ವಿಶಾಲವಾದುದು. ಪ್ರಾಮಾಣಿಕವಾಗಿ ದುಡಿಯುವವರಿಗೆ ಇಲ್ಲಿ ಆತ್ಮತೃಪ್ತಿ ಇದ್ದೇ ಇದೆ. ಹಾಗೆ ದುಡಿವಲ್ಲಿ ನಾವೂ ಬೆಳೆಯುತ್ತೇವೆ. ರಂಗಭೂಮಿಯೂ ಬೆಳೆಯುತ್ತದೆ."

ಮಲೇರಿಯ ಜ್ವರ

ಡಾ॥ ಕೃಷ್ಣನ್‌ಹರವೆ. ಎಸ್
ಔಷಧಶಾಸ್ತ್ರ ಪ್ರಾಧ್ಯಾಪಕರು (ವಿಶ್ರಾಂತ)
೧೧, ೩ನೇ ಮುಖ್ಯರಸ್ತೆ, ಸರಸ್ವತಿಪುರ
ಮೈಸೂರು–೯

ಪ್ರಪಂಚದಲ್ಲಿ ಭಾರತವನ್ನೂ ಒಳಗೊಂಡಂತೆ ಮಲೇರಿಯ ಜ್ವರ ಬಲು ಭೀಕರ ವ್ಯಾಧಿಯೆನಿಸಿದೆ. ಏಕೆಂದರೆ ಶೇ. ೨೫ ಭಾಗ ಜನರು ಈ ವ್ಯಾಧಿಯಿಂದ ನರಳುತ್ತಾರೆ ಮತ್ತು ಅನೇಕರು ತಮ್ಮ ಜೀವನವನ್ನೂ ಕಳೆದುಕೊಳ್ಳುತ್ತಾರೆ. ಇದಕ್ಕೆ ಕಾರಣವಾದ ಸೊಳ್ಳೆಗಳನ್ನು ನಾಶ ಮಾಡುವ ಔಷಧಿಗಳನ್ನು ಪತ್ತೆ ಮಾಡುವುದರಿಂದ ಮತ್ತು ಅವುಗಳ ಉಪಯೋಗದಿಂದ ಈ ವ್ಯಾಧಿಯ ಪ್ರಕೋಪವನ್ನು ಕಡಿಮೆ ಮಾಡಬಹುದು. ಮಲೇರಿಯ ರೋಗ ಹೆಚ್ಚಾಗಿ ಜೌಗು ಇರುವ ಪ್ರದೇಶದಲ್ಲಿ ಕಾಣಿಸುತ್ತದೆ. (ಮಾಲ್–ಕೆಟ್ಟಗಾಳಿ, ಏರಿಯಾ-ಸ್ಥಳ) ಮಲೇರಿಯ ಜ್ವರದಿಂದ ಬಳಲುತ್ತಿರುವ ರೋಗಿಯ ದೇಹದಲ್ಲಿ ಪ್ಲೀಹ, ಪಿತ್ತಜನಕಾಂಗಗಳು ದಪ್ಪವಾಗುತ್ತವೆ. ದೇಹದಲ್ಲಿ ರಕ್ತಹೀನತೆ ತಲೆದೋರುತ್ತದೆ. ಆದ್ದರಿಂದ ಹಳ್ಳಿಗಳಲ್ಲಿ ಮತ್ತು ೬೦೦೦ ಅಡಿಗಳಿಗಿಂತಲೂ ಎತ್ತರವಾದ ಪ್ರದೇಶಗಳಲ್ಲಿ ಮತ್ತು ಉಷ್ಣತೆ ೬೦°F ಗಿಂತಲೂ ಕಡಿಮೆ ಇರುವ ಜಾಗಗಳಲ್ಲಿ, ನದೀ ಪ್ರವಾಹ ಅಥವಾ ಅನಾವೃಷ್ಟಿ ತಲೆದೋರಿದ ಸ್ಥಳಗಳಲ್ಲಿ ಈ ವ್ಯಾಧಿಯನ್ನು ಅನಾಫಿಲೀಸ್ ಸೊಳ್ಳೆಗಳು ಹರಡುತ್ತವೆ. ಬಿಸಿಲು ಅಧಿಕವಾದ ಸ್ಥಳಗಳಲ್ಲಿ ಇದಕ್ಕೆ ಕಾರಣವೆನಿಸುವ ಪರೋಪಜೀವಿಗಳನ್ನೂ ಹರಡುತ್ತವೆ. ಈ ರೋಗ ಆಫ್ರಿಕ, ಪೂರ್ವರಷ್ಯ, ದಕ್ಷಿಣ ಅಮೆರಿಕ ಮತ್ತು ಪರ್ಶಿಯಗಳಲ್ಲಿ ಹೆಚ್ಚಾಗಿ ಕಾಣಬರುತ್ತದೆ. ಭಾರತದ ವಿಶಾಖಪಟ್ಟಣದಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತದೆ. ಈ ರೋಗದ ಉಪಜೀವಿಗಳ ಸೋಂಕು ಹೆಚ್ಚು ಮತ್ತು ಅಧಿಕವಾದ ನೀರಿನ ಜೌಗುಪ್ರದೇಶಗಳಲ್ಲಿ, ವಿರೋಧವೆನಿಸುವ ಪ್ರತಿಕೂಲ ಆರ್ಥಿಕ ಪರಿಸ್ಥಿತಿ ಇರುವ ಸ್ಥಳಗಳಲ್ಲಿ ಈ ಉಪಜೀವಿಗಳ ಬೆಳವಣಿಗೆ ಹೆಚ್ಚು. ಸೆಪ್ಟೆಂಬರ್‌ನಿಂದ ನವೆಂಬರ್ ತಿಂಗಳವರಿವಿಗೆ (ಕೆಲವು ವೇಳೆ ಮೇ ತಿಂಗಳಿಂದ ಜುಲೈವರೆಗೆ) ಈ ವ್ಯಾಧಿ ಅಧಿಕವಾಗಿರುವುದು ಕಂಡುಬಂದಿದೆ.

ಕ್ರಿ. ಪೂ. ೫ನೆಯ ಶತಮಾನದಲ್ಲಿ ಹಿಪಾಕ್ರಟೀಸ್ ಮಲೇರಿಯ ಜ್ವರವನ್ನು ಕ್ವಾರ್ಟನ್, ಟರ್ಶಿಯನ್, ಸಬ್‌ಟರ್ಶಿಯನ್ ಮತ್ತು ಕ್ವಾಟಿಡಿಯನ್ ಎಂದು ನಾಲ್ಕು ವಿಧವಾಗಿ ವಿಂಗಡಿಸಿದ. ಕಾಲ್ಲಮೆಲ್ ಎಂಬವ ಕ್ರಿ. ಪೂ. ೧೧೬ ರಲ್ಲಿ ಈ ರೋಗವನ್ನು ಕೀಟಗಳೊಡನೆ ಸೇರಿರುವ ವ್ಯಾಧಿ ಎಂದು ಹೇಳಿದ್ದರೂ ಮಲೇರಿಯ

ರೋಗ ಹೆಚ್ಚಾಗಿ ಸೊಳ್ಳೆಗಳಿಂದ ಹರಡುತ್ತದೆ. ಸೊಳ್ಳೆಗಳಲ್ಲಿ ಈ ಉಪಜೀವಿಗಳು (ಪ್ಲಾಸ್ಮೋಡಿಯಮ್ ವೈವಾಕ್ಸನಲ್ಲಿ ಬಿನೈನ್ ಟರ್ಷಿಯನ್ ಮಲೇರಿಯ; ಪ್ಲಾಸ್ಮೋಡಿಯಮ್ ಫಾಲ್ಸಿಫಾರಮ್‌ನಲ್ಲಿ ಮೆಲಿಗ್ನೆಂಟ್ ಟರ್ಷಿಯನ್ ಮಲೇರಿಯ; ಪ್ಲಾಸ್ಮೋಡಿಯಮ್ ಮಲೇರಿಯೇನಲ್ಲಿ ಕ್ವಾರ್ಟನ್ ಟರ್ಷಿಯನ್ ಮಲೇರಿಯ ಮತ್ತು ಪ್ಲಾಸ್ಮೋಡಿಯಮ್ ಒವಾಲೆಯಲ್ಲಿ ಒವಾಲೆ ಟರ್ಷಿಯನ್) ಎಂದು ನಾಲ್ಕು ಬಗೆಗಳಿವೆ. ಕ್ರಿ. ಶ. ೧೮೮೦ ರಲ್ಲಿ ಫ್ರೆಂಚ್ ವೈದ್ಯ ಲೆವರಾನ್ ಎಂಬುವನೂ ಮಲೇರಿಯ ಉಪಜೀವಿಗಳ ಬಗ್ಗೆ ವಿವರಣೆಗಳನ್ನು ಇತ್ತನು. ಕ್ರಿ.ಶ. ೧೮೮೫ ರಲ್ಲಿ ಗಾಲ್ಗೈ ಎಂಬುವನು ಮಲೇರಿಯ ಜ್ವರ ಏಕಕಾಲದಲ್ಲಿ ಸಂಭವಿಸುವ ಸ್ಪೋರುಲೇಷನ್ ಎಂದು ತಿಳಿಸಿದ. ಕಾಕ್ ಎಂಬುವರು ಮಲೇರಿಯ ಜ್ವರದ ಬಗ್ಗೆ ಹೆಚ್ಚು ವಿವರಗಳನ್ನು ನೀಡಿದ. ಮಾನ್ಸನ್ ಎಂಬವ ಮಲೇರಿಯ ಉಪಜೀವಿಗಳ ವಿಷಯವಾಗಿ ಕ್ರಿ.ಶ. ೧೮೮೮ ರಲ್ಲಿ ತಿಳಿಸಿಕೊಟ್ಟ. ರೋನಾಲ್ಡ್ ರಾಸ್ ಎಂಬವ ಕ್ರಿ.ಶ. ೧೮೯೭ ರಲ್ಲಿ ಮಲೇರಿಯ ಉಪಜೀವಿಗಳನ್ನು ವರ್ಣಿಸಿದ. ಕ್ರಿ.ಶ. ೧೯೦೦ ರಲ್ಲಿ ಸಾಂಬನ್ ಮತ್ತು ಕಾ ಎಂಬುವರು ಸೊಳ್ಳೆಗಳು ಹೆಚ್ಚಾಗಿದ್ದರೂ ಅವುಗಳಲ್ಲಿ ಮಲೇರಿಯ ಉಪಜೀವಿಗಳು ಇಲ್ಲದಿರುವುದನ್ನು ತೋರಿಸಿಕೊಟ್ಟರು. ಕ್ರಿ.ಶ. ೧೯೧೧ ರಲ್ಲಿ ರಾಸ್ ಮಲೇರಿಯ ಉಪಜೀವಿಗಳನ್ನು ವೃದ್ಧಿ ಮಾಡಿದ.

ರೂಢಿಯಾದ ಪರಿಶೀಲನೆ

ಪ್ಲಾಸ್ಮೋಡಿಯಮ್ ಪರೋಪಜೀವಿಗಳು ಈ ಮಲೇರಿಯ ಜ್ವರವನ್ನು ಹರಡುತ್ತವೆ. ಈ ಉಪಜೀವಿಗಳ ಸೋಂಕು ೬೦೦೦ ಅಡಿಗಳ ಎತ್ತರದ ಪ್ರದೇಶದ ಮೇಲೆ ಕಾಣಬರುವುದಿಲ್ಲ. ಮಲೇರಿಯ ಉಪಜೀವಿಗಳು ನಾಲ್ಕು ಬಗೆಗಳಿವೆಯಾದರೂ ಪಶ್ಚಿಮ ಆಫ್ರಿಕದಲ್ಲಿ ಹೆಚ್ಚು ಪ್ಲಾಸ್ಮೋಡಿಯಮ್ ವೈವಾಕ್ಸ ಉಪಜೀವಿಗಳು ಇವೆ. ರಕ್ತದಿಂದ ಮತ್ತು ಸೋಂಕು ಇರುವ ಸೂಜಿಗಳ ಉಪಯೋಗದಿಂದ ಇವು ಹರಡುತ್ತವೆ. ಆದರೆ ಪ್ರಕೃತಿಯಲ್ಲಿ ಸಾಮಾನ್ಯವಾಗಿ ಹೆಚ್ಚು ಅನಾಫಿಲೀಸ್ ಸೊಳ್ಳೆಗಳು ಕಚ್ಚುವುದರಿಂದ ಈ ಸೋಂಕು ಹರಡುತ್ತದೆ. ಲೈಂಗಿಕ ಕಾಲಚಕ್ರ ಸೊಳ್ಳೆಯಲ್ಲೂ ಮತ್ತು ಅಲೈಂಗಿಕ ಕಾಲಚಕ್ರ ಮನುಷ್ಯರಲ್ಲೂ ಇರುವಂಥದು. ಸೊಳ್ಳೆಗಳ ಕಡಿತದಿಂದ ಮನುಷ್ಯರಲ್ಲಿ ಪಿತ್ತಜನಕಾಂಗವನ್ನು ಉಪಜೀವಿಗಳು ಒಳಹೊಕ್ಕು ಬೆಳೆಯುತ್ತವೆ. ಅಲ್ಲಿಂದ ಅವು ರಕ್ತಕ್ಕೆ ೫–೧೧ ದಿವಸಗಳಾದ ಬಳಿಕ ಕೆಂಪು ರಕ್ತಕಣಗಳನ್ನು ಸೇರುತ್ತವೆ. ಮಾತ್ರವಲ್ಲ ಅಲ್ಲಿ ವೃದ್ಧಿಯಾಗುತ್ತವೆ ಕೂಡ. ೪೮ ಅಥವಾ ೭೨ ಗಂಟೆಗಳ ಅನಂತರ ಕೆಂಪು ರಕ್ತಕಣಗಳು ಒಡೆದು ಮಲೇರಿಯ ಉಪಜೀವಿಗಳನ್ನು ಹೊರಕ್ಕೆ ತಳ್ಳುತ್ತವೆ. ಅನೇಕ ಬಾರಿ ಹೀಗೆ ಆಗುವುದರಿಂದ ರೋಗ ಪಕ್ವಸ್ಥಿತಿಗೆ ಬರುವ ದಿವಸಗಳು ಉಪಜೀವಿಯ ಬಗೆ ಮತ್ತು ಸೋಂಕಿನ ತೀವ್ರತೆ ಮತ್ತು ಮನುಷ್ಯನ ರಕ್ಷಣಾಸಾಮರ್ಥ್ಯ ಮುಂತಾದುವುಗಳ ಮೇಲೆ ಆಧರಿಸಿರುತ್ತವೆ. ಪ್ಲಾಸ್ಮೋಡಿಯಮ್ ವೈವಾಕ್ಸ್ ಮತ್ತು ಪ್ಲಾಸ್ಮೋಡಿಯಮ್ ಫಾಲ್ಸಿಪಾರಮ್ ಉಪಜೀವಿಗಳು ವೃದ್ಧಿ ಹೊಂದಲು ೧೦–೧೫ ದಿವಸಗಳು ಮತ್ತು ಪ್ಲಾಸ್ಮೋಡಿಯಮ್ ಮಲೇರಿಯ ಉಪಜೀವಿಗೆ ೨೮ ದಿವಸಗಳು

ಬೇಕು. ಪ್ಲಾಸ್ಮೋಡಿಯಮ್ ಫಾಲ್ಸಿ ಫಾರಮ್ ಕೆಂಪು ರಕ್ತಕಣಗಳಲ್ಲಿ ವಿಭಜನೆಗೊಂಡು ಪಿತ್ತಜನಕಾಂಗದಲ್ಲಿ ಪ್ರೀಎರಿಕ್ರೋಸಿಟಿಕ್ ಕಾಲಚಕ್ರವು ತಲೆದೋರುತ್ತದೆ. ಈ ವ್ಯಾಧಿಯ ಸೋಂಕು ೬–೮ ತಿಂಗಳ ಕಾಲದಲ್ಲಿ ಅಥವಾ ೨–೩ ವರ್ಷಗಳಲ್ಲಿ ಆಗಿ ಈ ಉಪಜೀವಿಗಳು ಅಲ್ಲಿ ಬೆಳೆಯುತ್ತವೆ. ಕೆಂಪು ರಕ್ತಕಣಗಳ ಕಾಲಚಕ್ರದ ಜೊತೆಗೆ ಎಕ್ಸೋ ಕೆಂಪುರಕ್ತಕಣಗಳ ಕಾಲಚಕ್ರವೂ ಉಂಟಾಗುತ್ತದೆ.

ರೋಗಿಗೆ ಸಂಬಂಧಪಟ್ಟ ಶೋಧನೆಗಳು

೧. ರೋಗ ಲಕ್ಷಣಗಳು

ಛಳಿ ೧೫ ನಿಮಿಷಗಳಿಂದ ೧ ಗಂಟೆ ಕಾಲದವರೆಗೆ ಇರುತ್ತದೆ. ಈ ಸಮಯದಲ್ಲಿ ಉಪಜೀವಿಗಳು ಕೆಂಪು ರಕ್ತಕಣಗಳ ಮೂಲಕ ರಕ್ತವನ್ನು ಸೇರುತ್ತವೆ. ವಾಕರಿಕೆ, ವಾಂತಿ, ತಲೆನೋವು—ಇವು ಸಾಮಾನ್ಯವಾಗಿ ತಲೆದೋರುವ ಲಕ್ಷಣಗಳು. ಮುಂದಿನ ಸ್ಥಿತಿಯಲ್ಲಿ ಜ್ವರ ೧೦೪°F ಇರುತ್ತದಲ್ಲದೆ ಬಹಳ ಕಾಲವೂ ಇರುತ್ತದೆ. ಉಪಜೀವಿಗಳು ಈ ಸಂದರ್ಭದಲ್ಲಿ ಹೊಸ ಕಣಗಳಿಗೆ ಸೇರುತ್ತವೆ. ಮುಂದಿನ ಬೆವರಿಸುವ ಸ್ಥಿತಿಯಲ್ಲಿ ಜ್ವರವು ಕಡಿಮೆಯಾಗುತ್ತದೆ. ರೋಗಿ ನಿದ್ದೆ ಹೋಗುತ್ತಾನೆ. ಎಚ್ಚರವಾದ ಬಳಿಕ ಆತ ಗುಣಮುಖವಾದಂತೆ ಕಾಣುತ್ತಾನೆ. ವೈವಾಕ್ಸ್, ಓವಾಲೆ ಮತ್ತು ಫಾಲ್ಸಿಪಾರಮ್ ಸೋಂಕುಗಳಲ್ಲಿ ಕೆಂಪು ರಕ್ತಕಣಗಳು ಒಡೆದು ಜ್ವರ ಮತ್ತು ಇತರ ರೋಗದ ಲಕ್ಷಣಗಳು ಉತ್ಪನ್ನವಾಗಬಹುದು. ಇದು ೪೮ ಗಂಟೆಗಳಿಗೊಂದು ಸಲ ಆಗಬಹುದು. ಕ್ವಾರ್ಟ್ರ್ ಮಲೇರಿಯಾದಲ್ಲಿ ಕಾಲಚಕ್ರದ ಆವಧಿ ೭೨ ಗಂಟೆಗಳು. ಸೋಂಕಿನ ಮೊದಲನೆಯ ಭಾಗದಲ್ಲಿ ಕಾಲಚಕ್ರವು ಒಂದೇ ಸಮಕಾಲಿಕವಾಗಿ ಇರುವುದಿಲ್ಲ. ಜ್ವರದ ರೀತಿಯು ವ್ಯತ್ಯಾಸವಾಗಿರುತ್ತದೆ. ರೋಗ ಹೆಚ್ಚಾದಂತೆ ಪ್ಲೀಹ ಮತ್ತು ಪಿತ್ತಜನಕಾಂಗಗಳು ದೊಡ್ಡದಾಗುತ್ತವೆ. ಇದರಲ್ಲಿ ಪ್ಲಾಸ್ಮೋಡಿಯಮ್ ಫಾಲ್ಸಿಪಾರಮ್ ಸೋಂಕು ಉಂಟಾಗಿ ಬಲು ತೀವ್ರ ತೊಡಕುಗಳು ಉಂಟಾಗಬಹುದು.

೨. ಪ್ರಯೋಗಶಾಲೆಯಲ್ಲಿ ಕಂಡು ಬರುವ ಲಕ್ಷಣಗಳು

ರಕ್ತದ ಲೇಪದ ಮೇಲೆ ಜೆಂಸಾ ಅಥವಾ ರೋಮನೋಸ್ಕಿ ಬಣ್ಣಗಳನ್ನು ಸವರಿ ನೋಡಿದರೆ ಉಪಜೀವಿಗಳು ಕಾಣುತ್ತವೆ. ಫಾಲ್ಸಿಪಾರಮ್ ಸೋಂಕಿನಲ್ಲಿ ಶೇ. ೩೦-೪೦ ರಕ್ತಕಣಗಳು ಸೋಂಕಿನಿಂದ ಕೂಡಿರುತ್ತವೆ. ಇದರಿಂದ ರಕ್ತಹೀನತೆ ತಲೆದೋರುತ್ತದೆ. ಬಿಳಿರಕ್ತಕಣಗಳ ಸಂಖ್ಯೆ ಅಧಿಕವಾಗಿ ಪರಿಸ್ಥಿತಿ ಸರಿಹೋಗುತ್ತದೆ. ಪಿತ್ತಜನಕಾಂಗದ ತೊಂದರೆಗಳು ಬರಬಹುದು. ಮೂತ್ರಪಿಂಡಗಳ ತೊಂದರೆಯು ಉಳಿದ ಸೋಂಕುಗಳಲ್ಲಿ ಉಂಟಾಗುತ್ತದೆ. ಮೂತ್ರದಲ್ಲಿ ಪ್ರೋಟೀನ್ಸ್ ಮತ್ತು ಕಾಸ್ಟ್ಸ ಹೆಚ್ಚು ಹೋಗುತ್ತದೆ. ಮಕ್ಕಳುಗಳಲ್ಲಿ ಇದು ಬಲು ಹೆಚ್ಚು.

ರೋಗದ ವ್ಯತ್ಯಾಸ ತೋರುವ ಲಕ್ಷಣಗಳು

ಬೇರೆ ಬೇರೆ ತೊಂದರೆಗಳಿಂದ ಮಲೇರಿಯಾದಲ್ಲಿ ಜ್ವರ, ರಕ್ತಹೀನತೆ ಪ್ಲೀಹ ಮತ್ತು ಪಿತ್ತಜನಕಾಂಗಗಳ ತೊಂದರೆಗಳು

ಇರುತ್ತವೆ. ಎಲ್ಲದರಲ್ಲೂ ರಕ್ತಲೇಪದ (ಬ್ಲಡ್‌ಸ್ಮಿಯರ್) ಪರೀಕ್ಷೆಮಾಡಬೇಕು.

ಚಿಕಿತ್ಸಾ ಕ್ರಮ

I. ನಿರ್ದಿಷ್ಟ ಚಿಕಿತ್ಸಾ ಯೋಜನೆ

i) ಕ್ಲೋರೋಕ್ವಿನ್ : ಇದನ್ನು ಫಾಲ್ಸಿಪಾರಮ್‌ನಿಂದ ಬರುವ ತಲೇನೋವು, ಮೈಕಡಿತ, ದೃಷ್ಟಿಮಾಂದ್ಯ, ನರಗಳ ತೊಂದರೆ ಕಡಿಮೆಯಾಗುತ್ತದೆ. ೧ ಗ್ರಾಂ ಮೊದಲು ಕೊಟ್ಟು ಆಮೇಲೆ ೦.೫ ಗ್ರಾಂ ಕೊಡಬೇಕು. ೬ ಗಂಟೆಗಳಿಗೆ ಒಮ್ಮೆಯಂತೆ ೩ ದಿವಸಗಳು ; ಆಮೇಲೆ ೦.೫ ಗ್ರಾಂ ಒಂದು ಬಾರಿ ಎರಡು ದಿನಗಳವರಿಗೆ ಕೊಡಬೇಕು, ಜ್ಞಾನ ವ್ಯತ್ಯಾಸವಾಗುವುದಾದರೆ ೨೫೦ ಮಿ. ಗ್ರಾಂ. ನಷ್ಟು ೬ ಗಂಟೆಗಳಿಗೊಮ್ಮೆ ಕೊಡಬೇಕು.

ii) ಕ್ಲೋರೋಕ್ವಿನ್ ಫಾಸ್‌ಫೇಟನ್ನು ೦.೫ ಗ್ರಾಂ ವಾರಕ್ಕೆ ಒಂದು ವೇಳೆ ಅಥವಾ ಕ್ಲೋರೋಕ್ವಿನ್ ೦.೫ ಗ್ರಾಂ + ಪ್ರೈಮಾಕ್ವಿನ್ ೮೦ ಮಿ. ಗ್ರಾಂ ಸೇರಿದ ಮಾತ್ರೆಯನ್ನು ವಾರಕ್ಕೆ ಒಂದು ವೇಳೆಯಂತೆ ೮ ವಾರಗಳು ಕೊಡಬೇಕು. ಪ್ರೈಮಾಕ್ವಿನ್ ಒಂದೇ ಆದರೆ ೧೪–೧೫ ದಿವಸಗಳವರಿವಿಗೆ ಕೊಡಬೇಕು.

iii) ಅಮೋಡಯಾಕ್ವಿನ್ : ೦.೨ ಗ್ರಾಂ ಪ್ರಕಾರ ೬ ಗಂಟೆಗಳಿಗೆ ಒಂದುಸಲ ಕೊಡಬೇಕು. ವ್ಯಾಧಿ ಅಡಗಿಸುವ ಪ್ರಮಾಣ ೦.೪ ಗ್ರಾಂ ವಾರಕ್ಕೆ ಒಂದುಬಾರಿ ೮ ವಾರಗಳು ಸೇವಿಸಬೇಕು.

iv) ಪೈರಿಮೆಥಮಿನ್ : ೨೫–೫೦ ಮಿ. ಗ್ರಾಂ ಪ್ರಕಾರ ವಾರಕ್ಕೆ ಒಂದು ಸಲದಂತೆ ೧೦ ವಾರಗಳು ಕೊಡಬೇಕು.

v) ಪ್ರೊಗ್ವಾನಿಲ್ ಹೈಡ್ರೋಕ್ಲೋರೈಡ್ : ೦.೧–೦.೨ ಗ್ರಾಂ ಪ್ರತಿದಿನವೂ ಕೊಡಬೇಕು.

vi) ಪ್ರೈಮಾಕ್ವಿನ್ ಫಾಸ್‌ಫೇಟ್ : ಇದು ಬಹಳ ಗುಣಕಾರಿಯಾದ ಔಷಧ. ಮಲೇರಿಯ ಉಪಜೀವಿಗಳು ಮತ್ತು ಅವುಗಳು ಮರಕಳಿಸುವುದನ್ನು ಇದು ತಪ್ಪಿಸುತ್ತದೆ. ದಿವಸಕ್ಕೆ ೨–೬ ಮಿ. ಗ್ರಾಂ ಪ್ರಕಾರ ೧೪ ದಿವಸಗಳು ಕೊಡಬೇಕು. ಗ್ಲೂಕೋಸ್ ಸಿಕ್ಸ್‌ಫಾಸ್‌ಫೇಟ್ (ಜಿ6, ಪಿ.ಡಿ.) ಕಡಿಮೆ ಇರುವುದರಲ್ಲಿ ೭೮.೯ ಮಿ. ಗ್ರಾಂ ಪ್ರಕಾರ ಅಥವಾ ಕ್ಲೋರೋಕ್ವಿನ್ ೦.೫ ಗ್ರಾಂ ವಾರಕ್ಕೆ ಒಂದು ಸಲದಂತೆ ೩ ವಾರಗಳು ಕೊಡಬೇಕು.

II. ನಿರ್ದಿಷ್ಟ ಚಿಕಿತ್ಸೆ

ಫಾಲ್ಸಿಫಾರಮ್ ಮತ್ತು ಇತರ ಸೋಂಕುಗಳಲ್ಲಿ (ಉಪಜೀವಿಗಳ) ಮತ್ತು ಕ್ಲೋರೋಕ್ವಿನ್‌ಗೆ ನಿರೋಧವಾಗಿರುವ ಸೋಂಕುಗಳ ಸಂದರ್ಭದಲ್ಲಿ :

i) ಕ್ವಿನೈನ್‌ಸಲ್ಫೇಟ್ : ೬೫೦ ಮಿ. ಗ್ರಾಂ. ೩ ಬಾರಿ ಬಾಯಿ ಮೂಲಕ ೧೪ ದಿವಸಗಳು ಸೇವಿಸಬೇಕು. ಇದರೊಡನೆ ಪೈರಿಮೆಥಮಿನ್ ೨೫ ಮಿ. ಗ್ರಾಂ ೨ ಸಲ ೩ ದಿನ

ಗಳು ಮತ್ತು ಸಲ್ಫಡೈಯಜೀನ್ ೫೦೦ ಮಿ. ಗ್ರಾಂ ದಿವಸಕ್ಕೆ ೪ ವೇಳೆಯಂತೆ ೫ ದಿವಸಗಳು ಅಥವಾ ಡಾಪ್ಸೋನ್ ೨೫ ಮಿ. ಗ್ರಾಂ ದಿವಸಕ್ಕೆ ೧ ಬಾರಿಯಂತೆ ೨೮ ದಿವಸಗಳ ವರೆವಿಗೆ ಸೇವಿಸಬೇಕು. ಇದರ ಬದಲು ಕ್ವಿನೈನ್ ೬೫೦ ಮಿ. ಗ್ರಾಂ. ದಿನಕ್ಕೆ ೩ ಬಾರಿಯಂತೆ ೩ ದಿವಸಗಳು ಕೊಡಬೇಕು. ಇದರೊಡನೆ ಟೆಟ್ರಸೈಕ್ಲಿನ್ ೫೦೦ ಮಿ. ಗ್ರಾಂ ದಿವಸ ಒಂದಕ್ಕೆ ೪ ಸಲದಂತೆ ೭ ದಿವಸಗಳು ಸೇವಿಸಬೇಕು ಅಥವಾ ಸಲ್ಫಮೆಥಾಕ್ಸಿ ೧ ಗ್ರಾಂ ದಿಸಸಕ್ಕೆ ೧ ವೇಳೆ ಅಥವಾ ಪೈರಿಮೆಥಮಿನ್ ೨೫ ಮಿ. ಗ್ರಾಂ. ದಿವಸಕ್ಕೆ ೧ ಸಲ ಸೇವಿಸಬೇಕು. ಬಹಳ ತೀವ್ರವಾದ ವ್ಯಾಧಿಯಲ್ಲಿ ಕ್ವಿನೈ ೬೦೦ ಮಿ.ಗ್ರಾಂ ಅನ್ನು ೩೦೦ ಮಿ. ಲೀಟರ್ ನಾರ್ಮಲ್ ಸಲೈನ್ ನಲ್ಲಿ ಸೇರಿಸಿ ನಿಧಾನವಾಗಿ ರಕ್ತನಾಳಕ್ಕೆ ಚುಚ್ಚುಮದ್ದಿನ ಮೂಲಕ ಕೊಡಬೇಕು. ಇದನ್ನು ೬-೮ ಗಂಟೆಗಳಿಗೆ ಒಂದುಬಾರಿ ಕೊಡಬೇಕು. ಬಾಯಿ ಮೂಲಕ ಸೇವನೆ ಮಾಡುವುದು ಸಾಧ್ಯವಾಗುವ ತನಕವೂ ಈ ರೀತಿಯೇ ಕೊಡಬೇಕು.

ii) ರೋಗವನ್ನು ಅಡಗಿಸುವ ಚಿಕಿತ್ಸಾ ಕ್ರಮ: ಕ್ಲೋರೋಕ್ವಿನ್ ೬೦೦ ಮಿ. ಗ್ರಾಂ ಮತ್ತು ಪೈರಿಮೆಥಮಿನ್ ೭೮.೯ಮಿ. ಗ್ರಾಂ ಸೇರಿಸಿ ವಾರಕ್ಕೆ ಒಂದು ವೇಳೆ ಮತ್ತು ಡಾಪ್ಸೋನ್ ೨೫.೦ ಮಿ. ಗ್ರಾಂ ದಿನವೂ ಕೊಡಬೇಕು.

III. ಸಾಮಾನ್ಯ ಚಿಕಿತ್ಸೆ

ವಿಶ್ವ ಆರೋಗ್ಯ ಸಂಸ್ಥೆ ೧೯೭೩ ತಿಳಿಸಿರುವಂತೆ ಜ್ಞಾನ ತಪ್ಪಿಹೋಗಿರುವ ರೋಗಿಗಳಿಗೆ ಡೆಕ್ಸಮೆಥಸೋನ್‌ನನ್ನು ೮ ಗಂಟೆಗಳಿಗೆ ಒಂದು ಸಲ, ಇದರೊಡನೆ ೧ ಯೂನಿಟ್ ಡೆಕ್ಸ್ಟ್ರೀನ್ ೭೫ ಇದನ್ನು ೧೨ ಗಂಟೆಗಳಿಗೆ ಒಂದು ಸಲ ಕೊಡಬೇಕು. ಇದು ಮಿದುಳಿನ ರಕ್ತಚಲನೆಯನ್ನು ಸರಿಪಡಿಸಿ ಅದರ ಊತವನ್ನು ಕಡಿಮೆಮಾಡುತ್ತದೆ. ಇದನ್ನು ವ್ಯಕ್ತಿಯಲ್ಲಿ ಕಾಮಾಲೆ ಕಾಣಿಸಿಕೊಂಡಿರುವಾಗ ಕೊಡಬಾರದು.

ರೋಗದ ಮುನ್ನರಿವು

ತೊಡಕಿಲ್ಲದ ಮತ್ತು ಚಿಕಿತ್ಸೆ ಮಾಡದಿರುವ ಮಲೇರಿಯ ವ್ಯಾಧಿಯ ಸಂದರ್ಭದಲ್ಲಿ ಅಂದರೆ ಮೊದಲನೆಯ ಸಲ ತೊಡಕಿಲ್ಲದ ರೋಗದ ಮುನ್ನರಿವು ಬರಲು ೩-೪ ವಾರಗಳಾಗುತ್ತವೆ. ಆದರೆ ಸಾಮಾನ್ಯವಾಗಿ ೪-೮ ವಾರಗಳು ಬೇಕಾಗಬಹುದು. ಯುಕ್ತ ಚಿಕಿತ್ಸೆ ಮಾಡದಿರುವ ವ್ಯಾಧಿಯ ಮುನ್ನರಿವು ಅಷ್ಟು ಸಮರ್ಪಕವಾಗಿರುವುದಿಲ್ಲ. ಮಿದುಳಿನ ಮಲೇರಿಯ ಮತ್ತು ಕಪ್ಪುನೀರಿನ ಜ್ವರಗಳಿಗೆ (ಬ್ಲ್ಯಾಕ್ ವಾಟರ್ ಫೀವರ್) ಸಂಬಂಧಿಸಿದಂತೆ ಈಗಿನ ಆಧುನಿಕ ಚಿಕಿತ್ಸಾ ಕ್ರಮಗಳಿಂದ ರೋಗದ ಮುನ್ನರಿವು ಬಲುಬೇಗನೆ ತಿಳಿಯುವಂಥದ್ದು. ಕೆಲವು ತೊಡಕುಗಳಿದ್ದರೂ ಅವನ್ನು ಜಾಗ್ರತೆ ನಿವಾರಿಸಿಕೊಳ್ಳಬಹುದು.

ಬೆಳ್ಳಿಯ ಕಣ್ಣುಮುಚ್ಚಾಲೆ

ಡಾ|| ಬಿ. ಎಸ್. ಶೈಲಜಾ
ಜವಹರಲಾಲ್ ನೆಹರು ತಾರಾಲಯ
ಶ್ರೀ ಟಿ. ಚೌಡಯ್ಯ ರಸ್ತೆ
ಬೆಂಗಳೂರು ೫೬೦೦೦೧

ಈ ಲೇಖನವನ್ನು ನೀವು ಅಕ್ಟೋಬರ್ ೧೯೯೮ರಲ್ಲಿ ಓದುತ್ತೀರಿ. ತಾ|೭–೧೦–೧೯೯೮ ರಂದು ಶುಕ್ರ ಪೂರ್ವ ದಿಶೆಯಲ್ಲಿ ಮುಳುಗಿಹೋಗುತ್ತದೆ. ಅದಕ್ಕೆ ಮುನ್ನ ಅದನ್ನು ಮುಂಜಾನೆ ಸೂರ್ಯೋದಯದ ಮೊದಲು ಪೂರ್ವಾಕಾಶದಲ್ಲಿ ನೋಡಬಹುದಿತ್ತು. ದಿನಾಂಕ ೨೭–೧೧–೧೯೯೮ ರಂದು ಮತ್ತೆ ಅದು ಪ್ರತ್ಯಕ್ಷವಾಗಲಿದೆ. ಆದರೆ ಈಗ ಪಶ್ಚಿಮಾಕಾಶದಲ್ಲಿ, ಸೂರ್ಯಾಸ್ತಮಾನಾನಂತರ ಅಕ್ಟೋಬರ್ ೭ ರಿಂದ ನವಂಬರ್ ೨೭ ರ ತನಕ ಶುಕ್ರದರ್ಶನವಿಲ್ಲ—ಅದರ ದಿಶೆ ಸೂರ್ಯನ ದಿಶೆಗೆ ತೀರ ಒತ್ತೊತ್ತಾಗಿರುವುದೇ ಕಾರಣ. ಈ ಅವಧಿಗೆ ಶುಕ್ರ ಮೌಢ್ಯ ಎಂದು ಹೆಸರು. ಇನ್ನು ಗುರುಗ್ರಹವಾದರೋ ಸಂಜೆಯಲ್ಲಿ ಪೂರ್ವಾಕಾಶದ ವೈಭವವಾಗಿ ಪ್ರಜ್ವಲಿಸುತ್ತಿರುವುದು. ಗುರುವಿನ ಮನೆ ಕುಂಭರಾಶಿ. ದಿನಾಂಕ ೧೨–೧–೯೯ ರಂದು ಇದು ಮೀನರಾಶಿಗೆ ಪ್ರವೇಶಿಸಲಿದೆ.

ವಿದ್ಯುತ್ತನ್ನು ಕಂಡಿಲ್ಲದ ಹಳ್ಳಿಯೊಂದರಲ್ಲಿ ರಾತ್ರಿ ಮಲಗಿದ್ದೀರಿ. ಅಪರಿಚಿತ ವಾತಾವರಣದ ಕಾರಣ ಸಣ್ಣ ಸಣ್ಣ ಶಬ್ದಕ್ಕೂ ಎಚ್ಚರವಾಗುತ್ತಿದೆ. ಹೀಗೊಮ್ಮೆ ಎಚ್ಚರವಾದಾಗ ಕತ್ತಲು ಕವಿದಿದ್ದರೂ ದೇಹ ನಿದ್ದೆಮುಗಿಯಿತು, ಎನ್ನುತ್ತಿದೆ. ಗಡಿಯಾರದತ್ತ ದೃಷ್ಟಿ ಹಾಯಿಸುತ್ತೀರಿ ದೀಪಇಲ್ಲ ಸಮಯ ತಿಳಿಯುತ್ತಿಲ್ಲ ಅಥವಾ ಕೈಗಡಿಯಾರವೂ ನಿಂತುಹೋಗಿರಬಹುದು....

ತಾನೇತಾನಾಗಿ ನಿಮ್ಮದೃಷ್ಟಿ ಆಗಸದತ್ತ ಹೊರಳುವುದು. ಫಳಫಳಗುಟ್ಟುತ್ತಿರುವ ಚಿಕ್ಕೆಗಳು ನಿಮ್ಮನ್ನು ಸ್ವಾಗತಿಸುವುವು. ಬೆಳಗಾಗುವುದರಲ್ಲಿದೆಯೇ ? ಮೂಡಣದಲ್ಲಿ ಕೆಂಪು ಮೂಡಿದೆಯೇ ? ಎಂದು ನೀವು ಅತ್ತಿತ್ತ ತಡಕಾಡಿದಾಗ ಕೆಂಪು ಹೌದೋ ಅಲ್ಲವೋ ಎನ್ನುವಷ್ಟು ಮಂದವಾಗಿ ಹರಡಿದ್ದು ಕಾಣುತ್ತದೆ. ಅದರ ಮುನ್ನೆಲೆಯಲ್ಲಿ ಫಳಗುಟ್ಟುವ "ಬೆಳ್ಳಿ"ಯ ಮೇಲೆ ನಿಮ್ಮ ದೃಷ್ಟಿ ಸ್ಥಿರವಾಗಿ ಮನಸ್ಸು ಅಚ್ಚರಿಯ ಸಾಗರದಲ್ಲಿ ಮುಳುಗುತ್ತದೆ.

ಕೋಳಿ ಕೂಗಲಿ, ಕೂಗದಿರಲಿ "ಬೆಳ್ಳಿ" ಕಂಡಿತೆಂದರೆ ಇನ್ನೆರಡು ಮೂರು ಗಂಟೆಗಳೊಳಗಾಗಿ ಸೂರ್ಯೋದಯವಾಗಲಿದೆ ಎಂಬುದಂತೂ ನಿಶ್ಚಿತ ಹಾಗಾಗಿ "ಬೆಳ್ಳಿ" ಖಗೋಳಜ್ಞರಿಗೆ ಮಾತ್ರವಲ್ಲದೇ ನಿರಕ್ಷರಸ್ಥ ಗ್ರಾಮೀಣರಿಗೂ ಪರಿಚಿತ ಸಂಗಾತಿ.

ಈ "ಬೆಳ್ಳಿ"ಯೇ ಶುಕ್ರಗ್ರಹ ಬರಿಗಣ್ಣಿಗೆ ಕಾಣುವ ಐದು ಗ್ರಹಗಳ (ಬುಧ ಮಂಗಳ, ಗುರು ಶನಿ, ಇವು ಉಳಿದ ನಾಲ್ಕು) ಪೈಕಿ ಅತ್ಯಂತ ಪ್ರಕಾಶಮಾನವಾದದ್ದು. ಈ ಐದು ಗ್ರಹಗಳು ನಕ್ಷತ್ರಗಳಲ್ಲಿ ಎಂದು ಯಾರು ಮೊದಲು ತಿಳಿದರು? ಇದೊಂದು ಯಕ್ಷ ಪ್ರಶ್ನೆ ಇದಕ್ಕೆ ಯಾರಲ್ಲೂ ಉತ್ತರವಿಲ್ಲ ಹಾಗೆಯೇ ಈ ಐದುಗ್ರಹಗಳ ಪೈಕಿ ಯಾವ ಗ್ರಹವನ್ನು ಮೊದಲು ಕಂಡುಹಿಡಿದರು. ಇದಕ್ಕೂ ಉತ್ತರ ಸಿಗಲಾರದು. ಆದರೆ ತಲೆಯೆತ್ತಿ ಶುಕ್ರಗ್ರಹದ ವೈಭವವನ್ನು ಕಂಡು ಆನಂದಿಸಿದವರಿಗೆ "ಬೆಳ್ಳಿಗೇ ಈ ಸ್ಥಾನ" ಎಂದು ಅನ್ನಿಸದಿರದು. ಇದೊಂದು ಗ್ರಹ ಭೂಮಿಯಂಥ ಕಾಯ ಎಂದೆಲ್ಲಾ ತಿಳಿಯುವ ಮೊದಲೇ ಇದು "ಬೆಳ್ಳಿ"ಯಾಗಿ ದನಗಾಹಿಗಳಂಥ ಸಾಮಾನ್ಯರಿಗೂ ಒಡನಾಡಿಯಾಗಿತ್ತು. ಗ್ರೀಕರು ಇದಕ್ಕೆ ಫಾಸ್ಫರಸ್ ಎಂದು ಹೆಸರಿಟ್ಟರು. ಇದಕ್ಕೆ ಅರ್ಥ "ಬೆಳಕನ್ನು ತರುವವ" ಎಂದು (ಫಾಸ್ಫರಸ್ ಎಂಬುದು ರಂಜಕದ ಹೆಸರು ಕೂಡ– ಇದನ್ನು ಬೆಳಕಿಗೆ ಹಿಡಿದೊಡನೆ ಹೊತ್ತಿ ಉರಿಯುವುದು ಈ ಕಾರಣದಿಂದ ಬೆಳಕನ್ನು ತರುವವ ಎಂಬ ಈ ಹೆಸರು ಇದಕ್ಕೂ ಸಲ್ಲುತ್ತದೆ). ಸ್ವಲ್ಪ ಹೊತ್ತಿನಲ್ಲೇ ಸೂರ್ಯೋದಯವಾಗಲಿದೆ ಎಂಬುದರ ಸೂಚನೆ.

ಸಾವಿರಾರು ವರ್ಷಗಳ ಹಿಂದಿನವರು ಇನ್ನೊಂದು ಅಂಶವನ್ನು ಗಮನಿಸಿದರು. ಇಂತಹುದೇ ಚಿಕ್ಕೆಯೊಂದು ಕೆಲವೊಮ್ಮೆ ಸಂಜೆ ಸೂರ್ಯಾಸ್ತದ ನಂತರವೂ ಕಾಣುತ್ತಿತ್ತು ಗ್ರೀಕರು ಅದಕ್ಕೆ ಹೆಸ್ಪರಸ್ ಎಂದು ಹೆಸರಿಟ್ಟರು. ಇದರ ಅರ್ಥ ಪಶ್ಚಿಮ ಎಂದು. ಬೆಳಗಿನ ಝಾವದಲ್ಲಿ ಪೂರ್ವದಲ್ಲಿ ಕಂಡಂತೆ ಇದು ಸಂಜೆ ಪಶ್ಚಿಮದಲ್ಲಿ ಸೂರ್ಯಾಸ್ತದ ನಂತರ ಒಂದೆರಡು ಗಂಟೆಗಳ ಕಾಲ ಕಾಣುತ್ತಿತ್ತು.

ಶತಮಾನಗಳ ದೀರ್ಘ ಅಧ್ಯಯನದ ಬಳಿಕ ಗ್ರೀಕರಿಗೆ ಫಾಸ್ಫರಸ್ ಮತ್ತು ಹೆಸ್ಪರಸ್ ಎರಡೂ ಒಂದೇ ಎಂದು ತಿಳಿಯಿತು—ಇದಕ್ಕೆ ಸೌಂದರ್ಯ ದೇವತೆ. "ಅಫ್ರೊಡೈಟ್" ಎಂದು ಹೆಸರು ಬಂತು. ಗ್ರೀಕರಿಂದ ಖಗೋಳಜ್ಞಾನವನ್ನು ಸಂಪಾದಿಸಿದ ರೋಮನ್ನರು ಈ ಗ್ರಹಕ್ಕೆ ತಮ್ಮ ಪ್ರೇಮದೇವತೆ "ವೀನಸ್"ಳ ಹೆಸರನ್ನಿಟ್ಟರು.

ವಿವಿಧ ಸಂಸ್ಕೃತಿ, ಜನಾಂಗಗಳಲ್ಲಿ ಶುಕ್ರ ಗ್ರಹ ತನ್ನ ಪ್ರಭಾವ ಬೀರಿದೆ. ಗಾದೆಮಾತುಗಳಲ್ಲಿ, ಅತಿಶಯೋಕ್ತಿಗಳಲ್ಲಿ ಮಾತ್ರವಲ್ಲದೇ ದೈನಂದಿನ ಚಟುವಟಿಕೆಗಳಲ್ಲೂ ಇದು ತನ್ನ ಮುದ್ರೆಯನ್ನು ಅಚ್ಚೊತ್ತಿದೆ. ಮಯನ್ ಜನಾಂಗದ ಭಿತ್ತಿಚಿತ್ರಗಳು ಇದಕ್ಕೆ ಸಾಕ್ಷಿಯಾಗಿವೆ. ಪುರಾತನ ಆಫ್ರಿಕನ್ ಜನಾಂಗದವರು ಇದನ್ನು ಬಾಲಚಂದ್ರನ ಆಕೃತಿಯಾಗಿ ಬಂಡೆಗಳ ಮೇಲೆ ಮೂಡಿಸಿರುವುದನ್ನು ಕಂಡಾಗ, ಅವರಿಗೆ ಬರಿಗಣ್ಣಿಗೆ ಶುಕ್ರ ಗ್ರಹದ ಆಕಾರವೂ ಕಾಣುತ್ತಿತ್ತೇ ಎಂದು ಆಶ್ಚರ್ಯವಾಗುತ್ತದೆ.

ಬಾಲಚಂದ್ರನ ಆಕಾರದ ಈ ಚಿತ್ರ ಚಂದ್ರನದೇ ಆಗಿರಬಹುದಲ್ಲವೇ ಈ ವಾದವೂ ಉಂಟು. ಆದರೆ ಬಾಲಚಂದ್ರನ ಆಕಾರದಲ್ಲಿ ಮತ್ತು ಬಾಲಶುಕ್ರನ ಆಕಾರದಲ್ಲಿ ಸ್ವಲ್ಪ ವ್ಯತ್ಯಾಸವಿದೆ. (ಪಾಕಿಸ್ತಾನದ ಧ್ವಜದಲ್ಲಿ ಮೂಡಿರುವ "ಬಾಲಚಂದ್ರ" ವಾಸ್ತವವಾಗಿ ಬಾಲಶುಕ್ರನನ್ನು ಹೋಲುತ್ತದೆ)

ದುರ್ಬೀನು ಅಥವಾ ದೂರದರ್ಶಕದ ಮೂಲಕ ನೋಡಿದರೆ ಈ ವ್ಯತ್ಯಾಸ ಸ್ಫುಟವಾಗಿ ಕಂಡುಬರುತ್ತದೆ. ದುರ್ಬೀನು ಸಿಕ್ಕಿದಾಗ ಇದನ್ನು ತಪ್ಪದೇ ಗಮನಿಸಿ. ಇನ್ನೊಂದು ವೈಶಿಷ್ಟ್ಯವೆಂದರೆ ಶುಕ್ರಬಿಂಬದ ಸುತ್ತ, ನೇರಿಳೆ ಬಣ್ಣದ ಪ್ರಭಾವಳಿಯೊಂದು ಗೋಚರಿಸುತ್ತದೆ.

ಚಂದ್ರಬಿಂಬ ಸೂರ್ಯಬಿಂಬದ ಮುಂದೆ ಹಾದುಹೋದಾಗ ಗ್ರಹಣವಾಗುವುದಲ್ಲವೇ? ಹಾಗೆಯೇ ಶುಕ್ರನೂ ಸೂರ್ಯನ ಮುಂದೆ ಹಾದುಹೋದಾಗ ಗ್ರಹಣವಾಗಬೇಕಲ್ಲವೇ? ಆದರೆ ಹಾಗಾಗಲಾರದು. ಏಕೆಂದರೆ ಶುಕ್ರನ ಕೋನೀಯ ಗಾತ್ರ ಸೂರ್ಯನ ಗಾತ್ರಕ್ಕಿಂತ ಅತಿ ಕಡಿಮೆ. ಇದು ಸೂರ್ಯಬಿಂಬದ ಮೇಲೆ ಚುಕ್ಕೆಯಂತೆ ಕಂಡೀತು, ಅಷ್ಟೆ.

ಮೊತ್ತಮೊದಲಬಾರಿ ಇಂಥ "ಗ್ರಹಣ"ವನ್ನು (ಇದಕ್ಕೆ ವೈಜ್ಞಾನಿಕವಾಗಿ ಸಂಕ್ರಮಣ ಎನ್ನಬಹುದು) ಗಮನಿಸುವ ಅವಕಾಶ ಸಿಕ್ಕಿದ್ದು ಲೆಕ್ಕಾಚಾರದ ಪ್ರಕಾರ ೧೬೧೧ರ ಡಿಸೆಂಬರ್ ೧೧ರಂದು. ಆದರೆ ಆಗ ಇದು ಕಾಣಲೇ ಇಲ್ಲ. [ಆಗಿನ್ನೂ ಭೂಕೇಂದ್ರವಾದವೇ ಪ್ರಚಲಿತವಾಗಿತ್ತಲ್ಲವೇ ?] ಸೂರ್ಯನ ಮುಂದೆ ಕಾಣಬೇಕಾಗಿದ್ದ ಗ್ರಹ ಏಕೆ ಕಾಣಲಿಲ್ಲ ? ಇದನ್ನು ವಿವರಿಸಲು ಹೊರಟಾಗ ಸಿಕ್ಕ ಸುಲಭ ಪರಿಹಾರವೆಂದರೆ —ಬಹುಶಃ ಶುಕ್ರಗ್ರಹ ಸೂರ್ಯನ ಹಿಂಬದಿಯಿಂದ ಹಾದು ಹೋಗಿರಬೇಕು ಎಂದು, ಆದರೆ ಇದನ್ನು ಒಪ್ಪಿದರೆ ಶುಕ್ರಗ್ರಹ ಸೂರ್ಯನನ್ನು ಸುತ್ತುತ್ತಿವೆ ಎಂದಾಗಿಬಿಡುತ್ತದೆ ಅಂದರೆ ಭೂಮಿಯಲ್ಲದ ಇನ್ನೊಂದು ಕಾಯವನ್ನು ಗ್ರಹವೊಂದು ಸುತ್ತುತ್ತದೆ ಎಂದಾಗುತ್ತದೆ. ಅಂದರೆ ಭೂಕೇಂದ್ರವಾದದ ತಳಹದಿಯೇ ಅಲ್ಲಾಡಿದಂತಾಗುತ್ತಲ್ಲವೇ? ಆದ್ದರಿಂದ ಈ ವಾದ ತಾರ್ಕಿಕವಾಗಿಕಂಡರೂ ವಿಜ್ಞಾನಿಗಳು ಇದನ್ನು ಪ್ರತಿಪಾದಿಸಲು ಹಿಮ್ಮೆಟ್ಟಿದರು.

ಭೂಕೇಂದ್ರವಾದವನ್ನು ಹಿಂದೆ ತಳ್ಳುವಲ್ಲಿ ಶುಕ್ರ ಇನ್ನೂ ಒಂದು ಅಂಶವನ್ನು ಒದಗಿಸಿ ಕೊಟ್ಟಿತು. ಒಂದೇ ದುರ್ಬೀನಿನಿಂದ ನೀವು ಶುಕ್ರನ ವಿವಿಧ ಕಲೆಗಳನ್ನು ಗಮನಿಸಿದಿರಿ ಎಂದಿಟ್ಟುಕೊಳ್ಳಿ. ಅಂದರೆ ಸತತವಾಗಿ ಅದರ ಆಕಾರವೈವಿಧ್ಯವನ್ನು ಗಮನಿಸಿದ್ದೀರಿ. ಬಾಲಶುಕ್ರ ಅರ್ಧಾಧಿಕ ಶುಕ್ರನಿಗಿಂತ ಪ್ರಕಾಶಮಾನವಾಗಿರುತ್ತದೆ ಅಲ್ಲದೆ ಆಕಾರವೂ ದೊಡ್ಡದಾಗಿರುತ್ತದೆ. ಚಂದ್ರ ಭೂಮಿಯನ್ನು ಸುತ್ತುವಾಗ ಹಂತ ಹಂತವಾಗಿ ಬಾಲ, ಅರ್ಧ, ಅರ್ಧಾಧಿಕ ಕಲೆಗಳನ್ನು ತೋರಿಸಿದ ಹಾಗೆ, ಶುಕ್ರವೂ ಪ್ರದರ್ಶಿಸುತ್ತದೆ ಎಂದಾದರೆ ಹೀಗೆ ಗಾತ್ರದಲ್ಲಿ (ಅಂದರೆ ಅರ್ಧ ಕಾಣುತ್ತಿರುವ ಬಿಂಬವನ್ನು ಪೂರ್ಣ ವೃತ್ತವಾಗಿ ವಿಸ್ತರಿಸಿದರೆ ಮೂಡುವ ವೃತ್ತಾಕಾರ) ವ್ಯತ್ಯಾಸ ಏಕೆ ?

ಇದನ್ನು ವಿವರಿಸಲು ಟಾಲೆಮಿಯ ಭೂಕೇಂದ್ರವಾದ ವಿಫಲವಾಯಿತು. ಸೂರ್ಯಕೇಂದ್ರವಾದವೇ ಬೇಕಾಯಿತು.

ಶುಕ್ರ ಸಂಕ್ರಮಣದ ಇನ್ನೊಂದು ಅವಕಾಶ ಸಿಕ್ಕಿದ್ದು ೧೭೬೧ ಹಾಗೂ ೧೭೬೯ರಲ್ಲಿ ಅಲ್ಲದೆ ೧೮೭೪ ಹಾಗೂ ೧೮೮೨ರಲ್ಲಿ. ಸೂರ್ಯನ ಮೇಲ್ಮೈಯಲ್ಲಿ ಇದು ಕಪ್ಪು ಮಚ್ಚೆಯಂತೆ ಕಂಡಿತಾದರೂ ಅದರ ಹಿಂದೊಂದು ಪುಟ್ಟ ಗುಳ್ಳೆಯಂತಹ ಕರಿ

ಆಕೃತಿಯೂ ಇತ್ತು.ಇದರಿಂದ ಸಂಕ್ರಮಣದ ಸಮಯವನ್ನು ಕರಾರುವಾಕ್ಕಾಗಿ ಗುರುತಿಸುವುದು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ ಈಗ ತಿಳಿದಿದೆ. ಭೂಮಿಗೆ ವಾತಾವರಣದ ಕವಚವಿರುವಂತೆ ಶುಕ್ರನಿಗೂ ವಾತಾವರಣ ಇರುವುದೇ ಇದಕ್ಕೆ ಕಾರಣ. ಇಂಥ ವೈಶಿಷ್ಟ್ಯಪೂರ್ಣ ಸಂಕ್ರಮಣವನ್ನು ವೀಕ್ಷಿಸಲು ವಿಜ್ಞಾನಿಗಳು ಉತ್ಸುಕರಾಗಿ ಕಾಯುತ್ತಿದ್ದಾರೆ. ೨೦೦೪ ಜೂನ್ ೮ ಜೂನ್ ಹಾಗೂ ೨೦೧೨ ಜೂನ್ ೬ ರಂದು ಇಂಥ ಘಟನೆಗಳು ನಡೆಯಲಿವೆ.

ಬೆಳಗಿನ ಝಾವ ವಾಯುವಿಹಾರ ಹೊರಟವರಿಗೆ ಆಹ್ಲಾದ ನೋಟ ಒದಗಿಸುವ ಈ ಗ್ರಹವನ್ನು ಗುರುತಿಸಲು ಯಾವುದೇ ನಕ್ಷೆ ಬೇಕಿಲ್ಲ. ನಕ್ಷತ್ರಪುಂಜಗಳ ಹೆಸರೂ ತಿಳಿದಿರಬೇಕಿಲ್ಲ. ಇದನ್ನು ಮೊದಲ ಬಾರಿಗೆ ಗಮನಿಸಿದ ಅನೇಕ (ವಯಸ್ಕರು) ಹಾರುವತಟ್ಟೆ ಇರಬಹುದೇ ಎಂದು ಹೆದರಿದ್ದಾರೆ. ಹೊಸ ನಕ್ಷತ್ರ ಎಂದೋ, ಸೂಪರ್‌ನೋವಾ ಎಂದೋ ಭ್ರಾಂತಿಗೊಳಗಾಗಿದ್ದಾರೆ. ಇಂಥ ಗ್ರಹವನ್ನು ನೋಡೇ ಇಲ್ಲವಲ್ಲಾ ಎಂದು ಪೇಚಾಡದಿರಿ. ಬೆಳಗಿನ ಝಾವ ಎದ್ದು ಪೂರ್ವ ದಿಕ್ಕಿಗೆ ಕಣ್ಣು ಹಾಯಿಸುವುದೊಂದೇ ನೀವು ಮಾಡಬೇಕಾದ ಕೆಲಸ. ಅಲ್ಲಿಗೂ ನಿಮಗೆ ಕಷ್ಟವಾದಲ್ಲಿ ಇನ್ನೊಂದು ಸುಳಿವು ಕೊಡುತ್ತೇನೆ. ಮಾರ್ಚ್ ೨೪ ಹಾಗೂ ಏಪ್ರಿಲ್ ೨೪ರ ಬೆಳಗಿನ ಝಾವ ಚಂದ್ರನನ್ನು ಹುಡುಕಿ ಅದರ ಪಕ್ಕ ವಜ್ರದಂತೆ ಹೊಳೆಯುವ ಕಾಯವೇ ಶುಕ್ರ. ಕೆಲವೊಂದು ದೇಶಗಳಿಂದ ಶುಕ್ರ ಚಂದ್ರನ ಹಿಂದೆ ಮರೆಯಾಗಿ ಹೊರಬರುವ ಆಚ್ಛಾದನೆಯನ್ನು ಆ ದಿನಗಳಂದು ಕಾಣಬಹುದು.

ನಕ್ಷತ್ರಲೋಕದ ಸೊಬಗನ್ನು ಇಮ್ಮಡಿಗೊಳಿಸುವ ಈ ಗ್ರಹವನ್ನು ನೀಚಗ್ರಹ (ಇನ್‌ಫೀರಿಯರ್ ಪ್ಲಾನೆಟ್) ಎಂದು ಕರೆದದ್ದು ಕೆಲವರಿಗೆ ಸಿಟ್ಟು ತರಿಸಬಹುದು. ಈ ಸುಂದರ ಗ್ರಹಕ್ಕೆ ಎಂಥ "ನೀಚತನ" ಅಂಟಿಕೊಂಡಿರಬಹುದು ? ಇದಕ್ಕೆ ಸ್ವಲ್ಪ ವ್ಯಾಖ್ಯೆ ಅಗತ್ಯ.

ನಮಗೆ ತಿಳಿದಂತೆ ಸೂರ್ಯನನ್ನು ಎಲ್ಲ ಗ್ರಹಗಳೂ ಪರಿಭ್ರಮಿಸುತ್ತವೆ. ನಮ್ಮ ಭೂಮಿ ಮೂರನೆಯದು. ಬುಧ ಮತ್ತು ಶುಕ್ರಗಳೆರಡೂ ಒಳಗಿನ ಕಕ್ಷೆಗಳಲ್ಲಿವೆ. ಈ ಗ್ರಹಗಳನ್ನು ನೀಚಗ್ರಹಗಳು–ಭೂಮಿಗಿಂತ "ಕೆಳಗಿನವು" ಎಂದು ಕರೆಯಲಾಯಿತು. ಇವು ಸೂರ್ಯನ ಆಸುಪಾಸಿನಲ್ಲೇ ಕಾಣುತ್ತವೆ. ಅಂದರೆ ಸೂರ್ಯಾಸ್ತದ ಹೊತ್ತಿಗೆ ಮಂಗಳ ಗುರು ಅಥವಾ ಶನಿಯಂಥ (ಉಚ್ಚ) ಗ್ರಹಗಳನ್ನು ಪೂರ್ವದಲ್ಲಿ ಅಂದರೆ ೧೮೦ ಡಿಗ್ರಿಗಳ ಅಂತರದಲ್ಲಿ ಕಾಣಬಹುದು. ಬುಧ ಮತ್ತು ಶುಕ್ರಗಳನ್ನು ಹೀಗೆ ನೋಡುವುದು ಸಾಧ್ಯವಿಲ್ಲ. ಹೆಚ್ಚೆಂದರೆ ಶುಕ್ರ ೪೭ ಡಿಗ್ರಿಗಳ ಅಂತರದಲ್ಲಿ ಕಾಣಬಹುದು ; ಬುಧ ೨೭ ಡಿಗ್ರಿಗಳ ಅಂತರದಲ್ಲಿ ಕಾಣಬಹುದು.

ಚಾಕಲೇಟ್ ಬೇಕು ಎಂದು ಪೀಡಿಸುತ್ತಾ ತಾಯಿಯನ್ನು ಸುತ್ತುತ್ತಿರುವ ಸಣ್ಣ ಮಗುವೊಂದನ್ನು ಊಹಿಸಿಕೊಳ್ಳಿ. ಈ ಸಂಜೆಗತ್ತಲಿನಲ್ಲಿ ನಿಮಗೆ ಆಕೃತಿಗಳ ಅಂಚಿನ ವಿನ್ಯಾಸ ಮಾತ್ರ ಕಾಣುತ್ತಿದೆ ಎಂದುಕೊಳ್ಳಿ, ಒಮ್ಮೆ ಮಗು ತಾಯಿಯ ಎಡಪಕ್ಕದಲ್ಲಿ ಕಂಡರೆ ಮತ್ತೊಮ್ಮೆ ಬಲ ಪಕ್ಕದಲ್ಲಿ ಕಾಣಬಹುದು. ಮಗು ತಾಯಿಯ ಹಿಂದೋ

ಮುಂದೋ ಇದ್ದರೆ ಅದರ ಅಸ್ತಿತ್ವವೇ ನಿಮಗೆ ತಿಳಿಯದು.

ತಾಯಿಯನ್ನೇ ಸೂರ್ಯ ಎಂದುಕೊಳ್ಳಿ. ಮಗು ಶುಕ್ರನಾಗಬಹುದು ಆಗ ಇವುಗಳ ನಡುವಿನ ಕೋನ ಕಡಿಮೆ ಏಕೆ ಎಂದು ಕಲ್ಪಿಸಿಕೊಳ್ಳಬಹುದು. ಹೀಗಾಗಿ ಒಮ್ಮೆ ಸಂಜೆ ಕಂಡರೆ ಮತ್ತೊಮ್ಮೆ ಮುಂಜಾನೆ ಕಾಣುವುದು. ಸೂರ್ಯನ ಹಿಂದೆ ಅಥವಾ ಮುಂದೆ ಮರೆಯಾಗುವ ಅವಧಿ ಬಹಳ ಕಡಿಮೆ. ಸಂಜೆಯ ಆಕಾಶದಲ್ಲಿ ನವೆಂಬರ್ ಡಿಸೆಂಬರ್‌ನಲ್ಲಿ ಬೆಳಗುತ್ತಿತ್ತು ಶುಕ್ರ. ಕ್ರಮೇಣ ಸೂರ್ಯ ಶುಕ್ರರ ನಡುವಿನ ಕೋನ ಕಡಿಮೆ ಆಯಿತು. ಶುಕ್ರ ಪಶ್ಚಿಮ ದಂಚಿಗೆ ಸರಿಯಿತು, ಜನವರಿಯಲ್ಲಿ ಒಂದು ದಿನ ಸಂಜೆಯ ಆಕಾಶದಲ್ಲಿ ಕಾಣಲಿಲ್ಲ. ಮಾಯವಾಗಿಹೋಯಿತೇ ? ಇಲ್ಲ, ಮರು ದಿನವೇ ಮುಂಜಾನೆ ದಿಗಂತದಂಚಿನಲ್ಲಿ ಪ್ರತ್ಯಕ್ಷವಾಗಿತ್ತು. ಸೂರ್ಯ ಶುಕ್ರರ ಕೋನ ಮತ್ತೆ ಹೆಚ್ಚತೊಡಗಿತು. ಸೂರ್ಯೋದಯಕ್ಕೆ ಬಹಳ ಮುಂಚೆಯೇ ಹುಟ್ಟತೊಡಗಿತು. ಇದು ಇನ್ನೂ ಕೆಲವು ತಿಂಗಳ ಕಾಲ ನಡೆಯುವುದು ಪುನಃ ನವೆಂಬರ್‌ನಲ್ಲೊಂದು ದಿನ ಬೆಳಗಿನ ಆಕಾಶದಿಂದ ಮಾಯವಾಗಿ ಸಂಜೆ ಪ್ರತ್ಯಕ್ಷವಾಗುವುದು. ಈ ಆಟ ನಿರಂತರವಾಗಿ ಸಾಗುತ್ತದೆ.

ಬುಧಗ್ರಹದ ಕಕ್ಷೆ ಇನ್ನೂ ಒಳಾವರಣದಲ್ಲಿರುವುದರಿಂದ ಬುಧ ಸೂರ್ಯರ ಕೋನ ನಡುವಿನ ಗರಿಷ್ಠ ಕೋನವೇ ೨೮ ಡಿಗ್ರಿಗಳಷ್ಟೇ ಎಷ್ಟೋ ಖಗೋಳ ವೀಕ್ಷಕರು "ಬುಧ ದರ್ಶನ"ಕ್ಕಾಗಿ ಕಾದಿದ್ದಾರೆ. ಸಂಜೆ, ಮುಂಜಾನೆಗಳಿಗೆ ಶುಕ್ರನಿಗಿಂತ ಕ್ಷಿಪ್ರವಾಗಿ ಜಾರುವ ಈ ಗ್ರಹಕ್ಕೂ ಪುರಾತನ ಗ್ರೀಕರು ಅಪೋಲೋ ಮತ್ತು ಹರ್ಮಿಸ್ ಎಂಬ ಬೇರೆ ಬೇರೆ ಹೆಸರಿಟ್ಟಿದ್ದರು.

೧೯೮೨ರ ನವೆಂಬರ್ ಕೊನೆಯವಾರದಲ್ಲಿ ಬೆಂಗಳೂರಿನ ಪ್ರಕಾಶ ಮಾಲಿನ್ಯದ ಆಗಸದಲ್ಲೂ ಬುಧ ಹೊಂಚುಹಾಕಿ ಮುಗುಳ್ನಕ್ಕಿದ್ದನ್ನು ಬಹುಶಃ ಅನೇಕರು ಗಮನಿಸಿರಲಾರರು. ಆಗ ನಡೆದ ಗ್ರಹಗಳ "ಪೆರೇಡ್"ನಲ್ಲಿ ಬುಧನವೇ ಮುಂದಾಳತ್ವ.

ಸೂರ್ಯೋದಯ ಸೂರ್ಯಾಸ್ತಗಳು ರಮಣೀಯ ದೃಶ್ಯಗಳು. ಇವುಗಳ ಸೊಬಗನ್ನು ದಿನನಿತ್ಯವೂ ಸವಿಯುವುದೇ ಒಂದು ಆನಂದ. ಈ ಆಹ್ಲಾದಕರ ಹವ್ಯಾಸವನ್ನು ನೀವು ಬೆಳೆಸಿಕೊಂಡಲ್ಲಿ ಒಂದು ಬೋನಸ್ ಉಂಟು—ಅದೇ ಬುಧಗ್ರಹದ ದರ್ಶನ.

ವ್ಯಕ್ತಿಯಲ್ಲಿರುವ ಉತ್ತಮ ಅಂಶವನ್ನು ಬೆಳಕಿಗೆ ತರುವುದೇ ನಿಜವಾದ ಶಿಕ್ಷಣ. ಮಾನವತ್ವದ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಯಾವುದಿದೆ ?

—ಗಾಂಧೀಜಿ

ಪುಸ್ತಕ ಪರಿಚಯ

ಮಾತೆಯರು ಮಾನ್ಯರಾಗಿದ್ದಾಗ—ಲೇಖಕರು: ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಅನು: ಜಿ. ಕುಮಾರಪ್ಪ, ನವಕರ್ನಾಟಕ ಪ್ರಕಾಶನ, ಮೊದಲ ಮುದ್ರಣ ೧೯೯೭, ಪುಟ-೫೬, ಬೆಲೆ ರೂ. ೧೫.

ಬಂಗಾಳಿಯ ಪ್ರಸಿದ್ಧ ವಿದ್ವಾಂಸರಾಗಿದ್ದ ಶ್ರೀ ದೇವಿಪ್ರಸಾದ್ ಚಟ್ಟೋಪಾಧ್ಯಾಯರ ಮೂಲ ಕೃತಿ ಇದು. ಶ್ರೀ ಕುಮಾರಪ್ಪನವರು ಕನ್ನಡದ ಜಾಯಮಾನಕ್ಕೆ ಸರಿಹೊಂದುವ ಅನುವಾದವನ್ನು ಮಾಡಿದ್ದಾರೆ. ಇದೊಂದು ವಿಚಾರ ಕೃತಿ. ಹೊಸ ಸಂಶೋಧನಾ ವಿವೇಚನೆ ಇಲ್ಲಿಲ್ಲ. ಆದರೆ ಈಗಾಗಲೇ ಸಂಶೋಧನೆಗೊಂಡ ಚಾರಿತ್ರಿಕ ಸಾಮಾಜಿಕ ಮತ್ತು ಆರ್ಥಿಕ ಜನಜೀವನವನ್ನು ಆಧಾರವಾಗಿಟ್ಟುಕೊಂಡು "ಮನುಷ್ಯ ಸಾಧಿಸಿದ ಈವರೆಗಿನ ಸಾಧನೆಗಳ ಮೂಲ ಬೀಜವನ್ನು ಬಿತ್ತಿದವಳು ಸ್ತ್ರೀ ಎಂಬ ಅಭಿಪ್ರಾಯವನ್ನು ಸಾಧಿಸಲು ಕೃತಿ ಮೀಸಲಾಗಿದೆ.

"ಮಾತೆಯರು ಮಾನ್ಯರಾಗಿದ್ದಾಗ" ಎಂಬ ಶೀರ್ಷಿಕೆ ಮತ್ತು ಕೃತಿಯ ಮೂಲ ಪುಟದ ಚಿತ್ರಗಳು ಬಹುಶಃ ಜಗತ್ತಿನ ಮಾತೃಪೂಜೆ (ಮದರ್ ಕಲ್ಟ್) ಕುರಿತ ವಿಚಾರವಿರಬೇಕು ಎಂಬ ಭ್ರಮೆಗೊಳಗಾಗುವಂತೆ ಮಾಡುತ್ತವೆ. ನಾಗರಿಕತೆಯ ಮಜಲುಗಳಲ್ಲಿ ಕೃಷಿ ಮುಖ್ಯ ಪಾತ್ರವಹಿಸಿತು ಮತ್ತು ಇಂಥ ಕೃಷಿ ಕಲೆಯನ್ನು ಕಂಡುಹಿಡಿದ ಕೀರ್ತಿ ಸ್ತ್ರೀಯದೇ ವಿನಃ ಪುರುಷನದಲ್ಲವೆಂಬ ಅಂಶವನ್ನು ಸಾಬೀತುಪಡಿಸುವ ಯತ್ನವನ್ನು ಕೃತಿಯ ಉದ್ದಕ್ಕೂ ಕಾಣಬಹುದು. ಕೃಷಿಯ ಕಲೆ ಇಲ್ಲದಿದ್ದ ಪಕ್ಷದಲ್ಲಿ ಇಂದಿನ ಬೆಳವಣಿಗೆಯೂ ಸಾಧ್ಯವಾಗುತ್ತಿರಲಿಲ್ಲವೆಂದು ಲೇಖಕರು ವಾದಿಸಿದ್ದಾರೆ. ಈ ವಾದ ಪಾರ್ಶ್ವಿಕ ಸತ್ಯ. ನಾಗರಿಕತೆಯ ಬೆಳವಣಿಗೆಗೆ ನೇರವಾಗಿ ಸ್ತ್ರೀ ಮಾತ್ರ ಕಾರಣಳಲ್ಲ, ಪಶುಪಾಲನೆಯನ್ನು ಕಂಡುಹಿಡಿದ ಪುರುಷನೂ ಅಷ್ಟೇ ಕಾರಣ. ನಾಗರಿಕತೆಯಂಥ ಪರಿಕಲ್ಪನೆಯನ್ನು ಮನುಷ್ಯನ ಒಟ್ಟು ಸಾಧನೆಯೆಂದು ಪರಿಗಣಿಸಬೇಕೆ ವಿನಃ ಕೇವಲ ಸ್ತ್ರೀ ಅಥವಾ ಪುರುಷ ಸಾಧನೆ ಎಂದು ಸಾಧಿಸುವುದು ಸಮಂಜಸವಾಗಲಾರದು. ಕೃತಿಯುದ್ದಕ್ಕೆ ತಪ್ಪಿಯೂ ಬೆಂಕಿಯ ಆವಿಷ್ಕಾರ ಮತ್ತು ಚಕ್ರಗಳ ಆವಿಷ್ಕಾರಗಳ ಬಗ್ಗೆ ಒಂದು ಮಾತೂ ಬರುವುದಿಲ್ಲ. ಇವೆರಡೂ ಪುರುಷನ ಆವಿಷ್ಕಾರಗಳು. ತಮ್ಮ ಪ್ರತಿಪಾದನೆಯನ್ನು ಮೇಲಾಗಿಸುವುದಕ್ಕೆ ಲೇಖಕರು ಈ ಅಂಶಗಳನ್ನು ಉದ್ದೇಶ

ಪೂರ್ವಕವಾಗಿ ಕೈಬಿಟ್ಟಂತೆ ಕಾಣುತ್ತದೆ. ಕೃಷಿಯಿಂದ ನಿರ್ದಿಷ್ಟ ಫಲನಿರೀಕ್ಷೆಯೂ, ವಿರಾಮವೂ ದೊರೆತದ್ದು ಮಡಕೆ ತಯಾರಿ ನೂಲುವಿಕೆ, ಗುಡಿಸಲು ಕಟ್ಟುವುದು, ಕುಶಲಕಲೆ ಹೀಗೆ ಸರ್ವತೋಮುಖ ಬೆಳವಣಿಗೆಗೆ ಕಾರಣವಾಯಿತೆಂದು ಹೇಳುತ್ತ ಇವು ಕೂಡ ಸ್ತ್ರೀಯ ಆವಿಷ್ಕಾರ. ಪುರುಷ ಕೇವಲ ಪಶುಪಾಲನೆ ಮಾಡಿದ ಎನ್ನುತ್ತಾರೆ. ಕೃಷಿಯನ್ನು ಸ್ತ್ರೀ ಕಂಡುಹಿಡಿದಳು ಎಂಬ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಪೂರಕ ಕುಶಲಕಲೆಗಳಲ್ಲಿ ಇಂದಿಗೂ ಸ್ತ್ರೀ-ಪುರುಷರು ಸಮಾನಭಾಗಿಗಳಾಗಿರುವುದನ್ನು ಕಾಣ ಕಾಣಬಹುದು.

'ನಾಗರಿಕತೆ' ಎಂಬ ಪರಿಕಲ್ಪನೆ ಅನೇಕ ಮುಖಗಳುಳ್ಳದ್ದು, ವಿಶಾಲವೂ ಆದದ್ದು. ಮನುಷ್ಯ ಸಾಧನೆಯ ಸಾಕ್ಷಿ ಅದು. ಇದರಲ್ಲಿ ಯಾರೊಬ್ಬರ ಸಾಧನೆಯೊಂದೇ ಅಂತಿಮ ವಲ್ಲ. ಹೀಗಿರುವಾಗ ಹಠತೊಟ್ಟು ಯಾರೊಬ್ಬರನ್ನು ವೈಭವೀಕರಿಸುವ ಅಗತ್ಯವೇ ಇಲ್ಲ.

"ಆಹಾರ ಸಂಗ್ರಹಣೆ ಮತ್ತು ಉತ್ಪಾದನೆಯ ಕಾರಣದಿಂದಲೇ ಮನುಷ್ಯ ಮತ್ತು ಪೃಥ್ವಿಯ ಸಂಬಂಧದಲ್ಲಿ ಭೂಮ್ಯಾಕಾಶದಷ್ಟು ಅಂತರ ಉಂಟಾಗುತ್ತದೆ" (ಪುಟ ೧೫) ಎಂಬ ಲೇಖಕರ ಮಾತು—

> 'ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ
> ಎಳ್ಳು ಜೀರಿಗೆ ಬೆಳೆಯೋಳು ಭೂಮಿತಾಯ
> ಎದ್ದೊಂದು ಗಳಿಗೆ ನೆನೆದೇನು"

—ಎಂಬ ಎದೆಯ ಹಾಡನ್ನು ಕೇಳಿದಾಗ ವ್ಯಂಗ್ಯವೋ ಅನಿಸುತ್ತದೆ. ವಾಸ್ತವವಾಗಿ ಕೃಷಿಯಿಂದಾಗಿಯೇ ಭೂಮಿಗೆ ಮನುಷ್ಯ ಹತ್ತಿರದವನಾಗಿದ್ದಾನೆ. ಇಂದಿಗೂ ರೂಢಿಯಲ್ಲಿರುವ ಬಹುಪಾಲು ಆಚರಣೆ, ಸಂಪ್ರದಾಯಗಳು ನೆಲಸಂಬಂಧಿಯಾದವು ಎಂಬುದನ್ನು ಮರೆಯುವಂತಿಲ್ಲ.

ಇಂಥ ಗಂಭೀರ ವಿಷಯಗಳ ಪ್ರತಿಪಾದನೆಗೆ ಸಂದರ್ಭ ಸೂಚಿ, ದಾಖಲೆಗಳ ಖಚಿತ ಉಲ್ಲೇಖ ಇವೆಲ್ಲ ಅನಿವಾರ್ಯವಾಗುತ್ತವೆ. ಇವು ಯಾವುದೂ ಇಲ್ಲದೆ ಈ ಕೃತಿ, ನಾಗರಿಕತೆಯ ಮೂಲಸ್ತ್ರೀಯೋ ಪುರುಷನೋ ಎಂಬ ಪ್ರಶ್ನೆಗೆ ಚಹಾ ವೇಳೆಯಲ್ಲಿ ವಿದ್ವಾಂಸರೊಬ್ಬರು ಹರಟಿದಂತಾಗಿಬಿಟ್ಟಿದೆ. ಇದಕ್ಕೆ ಇನ್ನೊಂದು ಉದಾಹರಣೆಯೆಂದರೆ ಭಾರತೀಯ ನಾಗರಿಕತೆ, ಸಂಸ್ಕೃತಿ, ಕುಟುಂಬವ್ಯವಸ್ಥೆ ಎಂದರೆ ಕೇವಲ ವೈದಿಕ ಮತ್ತು ಆರ್ಯಮಯವೆಂದು ತಿಳಿದು, ಇಂದಿಗೂ ದೇಶದಲ್ಲಿ ಕೃಷಿಯೇ ಪ್ರಧಾನವಾಗಿರುವುದರಿಂದ ಮೂಲದಲ್ಲೂ ಅದೇ ಇತ್ತು. ಆ ಕಾರಣಕ್ಕಾಗಿ ಮಾತೃ ಪ್ರಧಾನ ಸಮಾಜವಿತ್ತು ಎಂಬ ತೀರ್ಮಾನ ತರ್ಮಾಷೆಯದಾಗಿ ಕಾಣುತ್ತದೆ. ದ್ರಾವಿಡ ಸಂಸ್ಕೃತಿಯಾಗಲೀ, ಅವರ ಗ್ರಾಮದೇವತಾ ಪರಿಕಲ್ಪನೆಯಾಗಲಿ ಲೇಖಕರಿಗೆ ಸಹಕಾರಿಯಾಗುತ್ತಿರಲಿಲ್ಲವೆ?

ಗಂಭೀರ ವಿಷಯವನ್ನೆತ್ತಿಕೊಂಡ ಈ ಕೃತಿ ಪೂರಕವಾದ ಸಮರ್ಥ ಖಚಿತ ದಾಖಲೆಗಳ, ಪರಾಮರ್ಶನಗಳ ತೀವ್ರ ಕೊರತೆಯಿಂದ ನರಳುತ್ತಿದೆ. ಇದೊಂದು ಎಡಪಂಥೀಯ ಮೂಲ ಧೋರಣೆಯ ಕೃತಿ ಎಂಬುದಷ್ಟೇ ಮುಖ್ಯವಾಗುವುದಾದರೆ ಹಾಗೆ ತಿಳಿಯುವ ಕೆಲವರಿಗಷ್ಟೇ ಈ ಕೃತಿ ಸಮಾಧಾನ ನೀಡಬಲ್ಲದು.

* * * * *

ಹೊನ್ನಬಣ್ಣದ ತೊನ್ನು (ಕನ್ನಡ ಕವನ ಮತ್ತು ಕಥಾ ಸಂಕಲನ),
ಲೇಖಕರು: ದೇವು ಹನೆಹಳ್ಳಿ, ಉಡುಪಿ, ೧೯೯೬, xii+೮೪.

ಇದೊಂದು ಅಪೂರ್ವ ಕವನ ಮತ್ತು ಕಥಾ ಸಂಕಲನ, ಬೆಲೆ ನಮೂದಾಗದ ಈ ಸಂಕಲನ ಅಮೂಲ್ಯವಾಗುವುದು ಈ ಪ್ರಯತ್ನದ ಹಿಂದಿನ ಸಫಲ ಉದ್ದೇಶದಿಂದಾಗಿ. "ಮಾರಾಟಕ್ಕಿಲ್ಲ" ಎಂಬ ನಮೂದನೆ ಹೊತ್ತಿದ್ದರೂ ಈಗಾಗಲೇ ಚಂದಾ ಆದವರಿಗೆ, ಅಥವಾ ಖಾಸಗಿ ವಲಯದವರಿಗೆ ಮಾತ್ರ ಓದುವ ಹಕ್ಕು ಎಂಬ ಒಡಂಬಡಿಕೆಯೇನೂ ಇಲ್ಲ. ಓದುಗರೇ ಒಬ್ಬರಿಂದ ಒಬ್ಬರಿಗೆ ಪ್ರೀತಿಯಿಂದ ಓದಿ ದಾಟಿಸುತ್ತಿರಬೇಕು. ಈ ಉದ್ದೇಶ ಮತ್ತು ನಿಯಮ ಸಾಮಾನ್ಯವಾಗಿ ಬದ್ಧವಾಗಿದೆ. ಈ ಮೂಲಕ ಕೃತಿಯೊಂದು ಗ್ರಂಥಾಲಯದಲ್ಲೋ ಇನ್ಯಾವುದೋ ಮೂಲೆಯಲ್ಲೋ ಧೂಳು ತಿನ್ನುವ ಸ್ಥಾವರವಾಗದೆ ಜಂಗಮವಾಗುವ ವಿಧಿಗೆ ಒಳಪಟ್ಟಿದೆ. ಬಿಟ್ಟಿಯಾಗಿ ಪಡೆದದ್ದನ್ನು ಬಚ್ಚಿಟ್ಟುಕೊಳ್ಳುವುದು ಹೇಗೆಂಬ ಸಮಸ್ಯೆ ಕಾಡುವ ಓದುಗ ಓದಿದ ಮರುಗಳಿಗೆಗೆ ಇನ್ನೊಬ್ಬನನ್ನು ಹುಡುಕುತ್ತಾನೆ. ಈ ಮೂಲ ಕೃತಿ ಜನರನ್ನು ತಟ್ಟಲಿ. ದೇವುಹನೆಹಳ್ಳಿಯವರ ಉದ್ದೇಶ, ನಿರ್ಧಾರಗಳು ಲಾಭಕೋರ, ಸಂಖ್ಯಾಬಲವೀರ ಲೇಖಕರು ಹುಟ್ಟಿಸಿರುವ ಅರಿವು ಮಾರುವ ಸಂತೆಯಲ್ಲಿ ಕ್ರಾಂತಿ ಕಿಡಿಯನ್ನು ಹೊತ್ತಿಸಲಿ.

ಕೃತಿಯ ಸ್ವರೂಪ, ಅರ್ಪಣೆ, ಮುನ್ನುಡಿ ಪ್ರತಿಯೊಂದೂ ತನ್ನನ್ನು ಆರೋಗ್ಯಕರವಾಗಿ, ಭಿನ್ನಹಾದಿಯಲ್ಲಿ ಸ್ಥಾಪಿಸಿಕೊಂಡಿವೆ, ನಮ್ಮ ಅಭಿವ್ಯಕ್ತಿ ಸಂವೇದನೆಗಳನ್ನು ಪರ

ರೊಂದಿಗೆ ಮುಖಾಮುಖಿಗೋಸ್ಕರ
ಘರ್ಷಣೆಗೋಸ್ಕರ ಬಿಟ್ಟುಬಿಡುತ್ತೇವೆಯೆ
ವಿನಹ ಸ್ವೀಕಾರಕ್ಕಲ್ಲ. ಅಂದರೆ ಅವು
ಹೊತ್ತು ಪ್ರತಿಕ್ರಿಯೆ ಮಾತ್ರವಿರುತ್ತದೆ
ಸ್ವೀಕಾರವಲ್ಲ....ನಮ್ಮ ಬುದ್ಧಿ ಮತ್ತು ಅ
ವ್ಯಕ್ತಿಗಳು ಮುಖಾಮುಖಿಯಾಗುವುದೇ
ಇಲ್ಲ. ಅಂಥ ಅಭಿವ್ಯಕ್ತಿಗಳು 'ಭೌದ್ಧಿ
ಆಕಸ್ಮಿಕಗಳು' ಇರಬಹುದು ಅಷ್ಟೆ"–
ಮಾತುಗಳು ನಮ್ಮ ಆದರ್ಶ ಮತ್ತು ವಾಸ್ತ
ಬದುಕಿನ ಗೊಂದಲಗಳನ್ನು ಸೂಕ್ಷ್ಮವಾ
ಹೇಳುತ್ತವೆ. 'ನಿನ್ನ ಹುಟ್ಟೇ ಹಾಗೆ'–
ಕವನದಲ್ಲಿ ಬರುವ "ಒಡಲೊಳಗಿದ್ದಾ
ಹೊಕ್ಕಳಬಳ್ಳಿಯಿಲ್ಲ. ಹೊರಬಿದ್ದಾಗ ಕಬ
ಗಳ ಸುಳಿ ಕೊಂಬುಗಳೆಲ್ಲ" ಎನ್ನುವ ಮಾತ
ಗಂಭೀರವಾಗುತ್ತದೆ.

ಈ ಕಥಾಕವನ ಸಂಗ್ರಹದಲ್ಲಿ ಸಮ
ಕಾಲೀನ ಸಂದರ್ಭಗಳ ವಸ್ತು, ವಿಶೇಷವಾ
ಸಾಮಾಜಿಕ ಬದುಕಿನ ಮತ್ತು ಪರಿಸ
ಕಾಳಜಿಯ ಧೋರಣೆಯನ್ನು ಹೊಂದಿದೆ
ಹಸಿದಿದ್ದರೆ ಒಂದು ಹನಿ (ಕೋಮುವಾ
ವಿಶ್ವಗಣಪತಿ (ಬಲಪ್ರದರ್ಶನ-ಶೋಷಣೆ
ಇಲಿಗಳಿಗೊಂದು ಚರಮಗೀತೆ (ಪ್ಲೇಗ
ದುರಂತ), ನೀನು ನೆನಪಾದಾಗ (ಪರಿಸ

ಹೀಗೆ ಭಿನ್ನ ವಸ್ತುಗಳು ಕಾವ್ಯ ಕಟ್ಟ
ಬಹುಪಾಲು ಕವನಗಳಲ್ಲಿ ಪರಿಸರ ಕಾ
ತಿನೆಗಟ್ಟಿದೆ. ತಾಯಿ ಮಗಳ ಸಂವಾ
ಮನಕಲುಕುತ್ತದೆ, ನಮ್ಮನ್ನೇ ನಾ
ಪ್ರಶ್ನಿಸಿಕೊಳ್ಳುವಂತೆ ಮಾಡುತ್ತದೆ.

ಕಾಜಾರಿನಾ ನೀಲಗಿರಿ ಅಕೇಶಿಯಾ
ಗೂಡು ಬೀಡು ಕಟ್ಟಲಾಗದಂತ ಮರಗಳು
ಕೊಕ್ಕು ಸಿಕ್ಕಲಾಗದಂತ ಎಲೆಗಳು
ಉಗುರ ಹಿಡಿತ ಮರೆಯಿತು
ಕೊಕ್ಕು ಸೀಳ್ಗ ಮರೆಯಿತು............
.......ನಮ್ಮ ಹಾಡ ಮರೆತವು
ನಮ್ಮ ದನಿಯ ಮರೆತವು

—ಇಲ್ಲಿ ಅಭಿವೃದ್ಧಿಯ ಹೆಸರಿನ ನಮ್ಮ ಯೋಜನೆಗಳು ನಮ್ಮ ಮೂಲ ದನಿಯೇ ಮರೆಯುವಂತೆಮಾಡಿವೆ ಎಂಬುದು ಮಾರ್ಮಿಕವಾಗಿ ಮೂಡಿದೆ. ಪರಿಸರವನ್ನು ಕಳೆದುಕೊಳ್ಳುತ್ತ ಹೋಗುವವನು ಎಲ್ಲವನ್ನೂ ಕಳೆದುಕೊಳ್ಳುತ್ತ ಅಂತಿಮವಾಗಿ ಮನುಷ್ಯ ಸಂಬಂಧವನ್ನೇ ಕಳೆದುಕೊಳ್ಳುತ್ತಾನೆಂಬ ಧ್ವನಿ ಭಯ ಹುಟ್ಟಿಸುತ್ತದೆ.

ಸಂಕಲನದ ಇನ್ನೊಂದು ಮಗ್ಗುಲು ಕಥೆಗಳಿಗೆ ಮೀಸಲು. ಇಲ್ಲಿನ ಬಹುತೇಕ ಕವನ ಮತ್ತು ಕಥೆಗಳು ನಾಡಿನ ಹೆಸರಾಂತ ನಿಯತಕಾಲಿಕೆಗಳಲ್ಲಿ ದಿನಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಒಂದು ದೃಷ್ಟಿಯಲ್ಲಿ ಓದುಗರನ್ನು ಈಗಾಗಲೇ ತಲುಪಿರವಂಥವು ಇವು. "ಹೊನ್ನ ಬಣ್ಣದ ತೊನ್ನು" ಶೀರ್ಷಿಕೆಯಂತೂ ಉಪಭೋಗವಾದೀ ದುರಾಸೆಯ ಸಾಮಾಜಿಕ ದೃಷ್ಟಿಗೆ ಹೇಸುವಂತೆ ಮಾಡುತ್ತದೆ. ಕೃತಿಯ ಶೀರ್ಷಿಕೆ ಲೇಖಕರ ಆಶಯಕ್ಕೆ ದುಡಿಯುತ್ತಿದೆ. ಐದು ಕಥೆಗಳಲ್ಲಿ ಸಾಮಾಜಿಕ ವಸ್ತುಕಥೆಯಾಗಿದೆ. ನಿರುದ್ಯೋಗ ಉಂಟುಮಾಡುವ ಕ್ರೂರ ವಿಷವರ್ತುಲ ಸೂಕ್ಷ್ಮ ಮನಸ್ಸನ್ನು, ಕನಸನ್ನು ಹೇಗೆ ಹಿಂಡಿ ಹಿಪ್ಪೆ ಮಾಡುತ್ತದೆಂಬ ಚಿತ್ರಣ ಕೊಡುವ "ಉಪ್ಪು ನೀರಿನಲ್ಲಿ ಸತ್ತ ಮೀನು" ಸೊಗಸಾಗಿ ಚಿತ್ರಿಸುತ್ತದೆ. ಒಟ್ಟಾರೆ ಸಂಕಲನದ ಬಗ್ಗೆ ಹೇಳುವುದಾದರೆ ಈ ಕತೆಯ ನಾಯಕ ಐತಾಳರ ಪರಿಸ್ಥಿತಿಯಲ್ಲಿರುವ ಯುವಕರ ಗುಂಪು ಒಂದೆಡೆ, ಇನ್ನೊಂದೆಡೆ ಸೂರ್ಯ ಹುಟ್ಟದಂತೆ ಮಾಡುವವರ ಗುಂಪು–ಇವರ ನಡುವೆ ಪ್ರಸ್ತುತ ಸಮಾಜವನ್ನಿಟ್ಟು ಅಜ್ಜನ ಪ್ರಶ್ನೆ ಕೇಳಿಕೊಳ್ಳಬೇಕು. "ಬೆಳಗಾಗುವುದಿಲ್ಲವೆ ?

ಸರಳ ಸುಂದರ ಆದರ್ಶವನ್ನಿಟ್ಟುಕೊಂಡ ಈ ಪುಟ್ಟ ಕೃತಿ ಪ್ರಾದೇಶಿಕ ಭಾಷೆಯ ಸೊಗಡನ್ನು ಚೆನ್ನಾಗಿ ಮೈಗೂಡಿಸಿಕೊಂಡು ಬಂದಿದೆ. ದುರಾಸೆಯ ಫಲದ ಹೊನ್ನ ತೊನ್ನಿನ ವ್ರಣವನ್ನು ಕಿಂಚಿತ್ತಾದರೂ ತೊಳೆಯುವ ಕೆಲಸವನ್ನು ಕೃತಿ ಮಾಡಬಲ್ಲುದು.

ಶ್ರೀಪಾದ ಭಟ್
ಜಾನಪದ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦೦೦೬

ಓದುಗರ ಅನಿಸಿಕೆ

ಮಾನ್ಯರೆ,

ಪುಸ್ತಕ ಪ್ರಪಂಚ ಜೂನ್–ಜುಲೈ ೯೮ ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಶ್ರೀಮತಿ ಸರಸ್ವ ಬಡೆಕ್ಕಿಲ ಅವರ 'ಮನಸ್ಸಿದ್ದಲ್ಲಿ ಮಾರ್ಗ ಮತ್ತು ಸ್ವರ್ಗ' ಉತ್ತಮ ಅನುವಾದ ಲೇಖನ.

'ರೀಡರ್ಸ್ ಡೈಜೆಸ್ಟ್' ನಿಂದ ಚೆನ್ನಾಗಿರುವ ಲೇಖನವನ್ನು ಆಯ್ಕೆಮಾಡಿಕೊಂಡು, ಪರಿಣಾಮಕಾರಿಯಾಗಿ ಕನ್ನಡಿಸಿದ್ದಾರೆ. ಕವಿ ಗೋಪಾಲಕೃಷ್ಣ ಅಡಿಗರ ಮಾರ್ಮಿಕವಾದ ಪದ್ಯ ಪಂಕ್ತಿಗಳನ್ನು ವಿಷಯಕ್ಕನುಗುಣವಾಗಿ ಉದಾಹರಿಸಿ,ಶಕ್ತಿಯುತವಾಗಿ ಅನುವಾದಿಸಿರುವ ಲೇಖಕರು ಪ್ರಶಂಸಾರ್ಹರು.

ಶ್ರೀರಾಂಪುರ, ಮೈಸೂರು–೨೩ **ಮಾಧವರಾವ್ ಮುಧೋಳ್**

ಮಾನ್ಯರೇ,

ಪುಸ್ತಕ ಪ್ರಪಂಚ ಸಂಚಿಕೆ ೯–೧೦ ರಲ್ಲಿ ಬಂದಿರುವ ಪ್ರೊ॥ ದೇಜಗೌ ಅವರ 'ಪ್ರೋಖ್ರಾನಿನ ಸುತ್ತಮುತ್ತ' ಲೇಖನವು ಬಹಳ ವಿಚಾರಪೂರಿತವಾಗಿದೆ. ಇದೇ ಸಂಚಿಕೆಯಲ್ಲಿ ಕೆ. ಮೊಹಮ್ಮದ್ ಶರೀಫ್ ಅವರ 'ಈದ್ ಮಿಲಾದ್' ಲೇಖನ ಪ್ರಕಟಿಸಿ ಉಪಕರಿಸಿದ್ದೀರಿ. ಈಕಾರಣದಿಂದ ತಮಗೆ ಅಭಿನಂದನೆ ಸಲ್ಲಿಸುತ್ತೇನೆ.

ಗೋಡಬೋಲೆಮಾಳ, ಬಿಜಾಪುರ **ಸೈಯದ್ ಹುಸೇನ್**

ಮಾನ್ಯರೆ,

ಕಳೆದ ಆಗಸ್ಟ್ ತಿಂಗಳ ಸಂಚಿಕೆಯಲ್ಲಿ ನಮ್ಮ ರಾಷ್ಟ್ರಧ್ವಜ, ಶಿವಪುರ ಧ್ವಜ ಸತ್ಯಾಗ್ರಹ, ಸ್ವಾತಂತ್ರ್ಯ ಸೇನಾನಿ ಎಂ. ಎನ್. ಜೋಯಿಸ್, ಈಸೂರ ಕ್ರಾಂತಿ, ಅಸ್ತಂಗತ, ಪ್ರೀತಿ ಹೀಗೆ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಲೇಖನಗಳು ಇದ್ದು, ಇದಕ್ಕೆ ಕಳಸಪ್ರಾಯವಾಗಿ ಮುದ್ದೂರಿನ ಶಿವಪುರ ಧ್ವಜ ಸತ್ಯಾಗ್ರಹದ ಮುಖಪುಟ ಆಕರ್ಷಣೀಯವಾಗಿದೆ. ಈ ಪುಸ್ತಕ ಪ್ರಪಂಚವು ಸುವರ್ಣ ಸ್ವಾತಂತ್ರ್ಯ ವಿಶೇಷ ಸಂಚಿಕೆಯಾಗಿ ಕಂಗೊಳಿಸಿದೆ. ಆಯಾ ಸಂದರ್ಭಕ್ಕೆ ಅನುಗುಣವಾಗಿ ವಿಶೇಷ ಲೇಖನಗಳನ್ನು ಪ್ರಕಟಿಸಿ, ಓದುಗರ ಕುತೂಹಲ ತಣಿಸುವ ಪುಸ್ತಕ ಪ್ರಪಂಚಕ್ಕೆ ಶ್ರೇಯಸ್ಸಾಗಲಿ.

ಕೆ. ಆರ್. ಮೊಹಲ್ಲಾ, ಮೈಸೂರು–೪ **ವಸಂತಲಕ್ಷ್ಮಿ**

Reg.No. KRNN-29
WPP 6

LICENCE No. 21
LICENCED TO POST WITH PAYMENT



Editeed by Chandrashekhararadhya Printed by Papanna
Printed & Published by Karnataka State Adult Education Council
5/1, Vinoba Road, Manasa Gangothri, Mysore-570 006.